ಸಂಪುಟ: 06 ಸಂಚಿಕೆ: 233 ಪುಟಗಳು: 08 ಭಾನುವಾರ 08 ನವೆಂಬರ್ 2026

www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833 9448225696 +91 8035621249 ₹5

ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದೀಪಾವಳಿ ವಿಶೇಷಾಂಕ

ದರ್ಶನ್‌ಗೆ ಜೈಲಲ್ಲೇ ಫಿಸಿಯೋಥೆರಪಿಗೆ ಕೋರ್ಟ್ ಅನುಮತಿ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಕೇಸಲ್ಲಿ ಜೈಲು ಸೇರಿರುವ ನಟ ದರ್ಶನ್‌ಗೆ ಮತ್ತೆ ಬೆನ್ನು ನೋವು ಕಾಣಿಸಿಕೊಂಡಿದ್ದು, ಜೈಲಲ್ಲೇ ಫಿಸಿಯೋಥೆರಪಿ ನೀಡಲು ಕೋರ್ಟ್ ಅನುಮತಿ ನೀಡಿದೆ. ಚಳಿಗಾಲ ಶುರುವಾಗುತ್ತಿದ್ದಂತೆ ಬೆನ್ನು ನೋವು ಜಾಸ್ತಿ ಆಗಿದ್ದು, ಸೂಕ್ತ ಚಿಕಿತ್ಸೆ ಕೊಡಿಸುವಂತೆ ಜೈಲಾಧಿಕಾರಿಗಳಿಗೆ ದರ್ಶನ್ ಮನವಿ ಮಾಡಿದ್ದರು. ಆದರೆ, ನ್ಯಾಯಾಲಯ ಅನುಮತಿ ನೀಡದ ಹೊರತು ನಾವು ಯಾವುದೇ ಚಿಕಿತ್ಸೆ ಕೊಡಿಸೋಕೆ ಸಾಧ್ಯವಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದರು. ನಂತರ, ದರ್ಶನ್ 59ನೇ ಸೆಷನ್ಸ್ ಕೋರ್ಟ್‌ಗೆ ಸಲ್ಲಿಸಿ ಚಿಕಿತ್ಸೆಗೆ ಮನವಿ ಮಾಡಿದ್ದರು. ಈ ಅರ್ಜಿಯ ವಿಚಾರಣೆ ವೇಳೆ ದರ್ಶನ್ ಪರ ವಕೀಲ ಹಷ್ಮತ್ ಪಾಷ, ದರ್ಶನ್ ಅವರಿಗೆ ಕೆಲವು ವರ್ಷಗಳಿಂದಲೂ ಬೆನ್ನು ನೋವಿನ ಸಮಸ್ಯೆ ಇದೆ. ಕಳೆದ ಬಾರಿ ಅರೆಸ್ಟ್ ಆಗಿದ್ದ ವೇಳೆಯೂ ಬೆನ್ನು ನೋವಿಗೆ ಫಿಜಿಯೋಥೆರಪಿ ಚಿಕಿತ್ಸೆ ಪಡೆದಿದ್ದರು. ಹಾಗಾಗಿ ಈ ಬಾರಿಯೂ ಜೈಲಿನಲ್ಲೆ ಫಿಜಿಯೋಗೆ ಅವಕಾಶ ನೀಡಬೇಕು ಎಂದು ವಾದಿಸಿದರು. ದರ್ಶನ್ ಪರ ವಕೀಲರ ವಾದಕ್ಕೆ ಪ್ರತಿ ವಾದಿಸಿದ ಎಸ್‌ಪಿಪಿ, ಕಳೆದ ಬಾರಿ ಜಾಮೀನು ಪಡೆಯುವ ವೇಳೆಯೂ ಇದೇ ಪ್ರಮುಖ ಕಾರಣ ನೀಡಿ ಜಾಮೀನು ಪಡೆದಿದ್ದರು. ಆಪರೇಷನ್ ಮಾಡಿಸಿಕೊಳ್ಳುವುದಾಗಿ ಹೇಳಿ ಜಾಮೀನು ಪಡೆದು ನಂತರ ಯಾವುದೇ ಆಪರೇಷನ್ ಮಾಡಿಸಿಕೊಂಡಿರಲಿಲ್ಲ. ಮತ್ತೊಮ್ಮೆ ಚಿಕಿತ್ಸೆ ಬಗ್ಗೆ ಕೇಳ್ತಿದ್ದಾರೆ ಪರಿಶೀಲನೆ ನಡೆಸುವಂತೆ ಮನವಿ ಮಾಡಿದರು.

ಕರ್ನಾಟಕ ಸೇರಿ ಐದು ದಕ್ಷಿಣ ರಾಜ್ಯಗಳಿಗೆ ಹೆಚ್ಚು ಭಾರತ್ ರೈಸ್: ಜೋಶಿ ಮಾಹಿತಿ

• ಉದಯವಾಹಿನಿ, ಬೆಂಗಳೂರು

ಕೇಂದ್ರ ಸರ್ಕಾರ ಕರ್ನಾಟಕ ಸೇರಿದಂತೆ ದಕ್ಷಿಣ ಭಾರತದ ರಾಜ್ಯಗಳಿಗೆ 'ಭಾರತ್ ರೈಸ್' ಅನ್ನು ಹೆಚ್ಚುವರಿ ಹಂಚಿಕೆ ಮಾಡಿದ್ದು, ಜೊತೆಗೆ ಮೂರು ತಿಂಗಳ ಕಾಲ ಅಕ್ಕಿ ಮತ್ತು ಭತ್ತದ ದಾಸ್ತಾನು ಮಿತಿ ವಿಧಿಸಲು ರಾಜ್ಯಗಳಿಗೆ ಅನುಮತಿ ಸಹ ನೀಡಿದೆ. ಕೇಂದ್ರ ಆಹಾರ ಮತ್ತು ನಾಗರಿಕ ಸರಬರಾಜು ಸಚಿವ ಪ್ರಹ್ಲಾದ್ ಜೋಶಿ ಈ ಬಗ್ಗೆ ಮಾಹಿತಿ ನೀಡಿದ್ದು, ಅಗತ್ಯವಿರುವ ಕಡೆ 2027ರ ಜನವರಿ 31ರ ವರೆಗೆ ಅಕ್ಕಿ ಮತ್ತು ಭತ್ತದ ಮೇಲೆ ದಾಸ್ತಾನು ಮಿತಿ ವಿಧಿಸಲು ದಕ್ಷಿಣದ 5 ರಾಜ್ಯಗಳಿಗೆ ಅನುಮತಿ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಸರ್ಕಾರ ಆಹಾರ ಧಾನ್ಯಗಳ, ವಿಶೇಷವಾಗಿ ಅಕ್ಕಿ ಬೆಲೆಯನ್ನು ಅತಿ ಸೂಕ್ಷ್ಮವಾಗಿ ಗಮನಿಸುತ್ತಿದ್ದು, ದೇಶೀಯವಾಗಿ ಸಾಕಷ್ಟು ಪೂರೈಕೆ ಇರುವಿಕೆ ಮತ್ತು ಬೆಲೆ ಸ್ಥಿರತೆ ಕಾಯ್ದುಕೊಳ್ಳಲು, ಅಕ್ರಮ ದಾಸ್ತಾನು ತಡೆಯಲು ಮತ್ತು ಗ್ರಾಹಕರ ಹಿತಾಸಕ್ತಿ ರಕ್ಷಣೆಗಾಗಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುತ್ತಿದೆ ಎಂದಿದ್ದಾರೆ.



ಪಿಜಿ ವೈದ್ಯಕೀಯ; ಮೊದಲ ಸುತ್ತಿನ ಫಲಿತಾಂಶ ಪ್ರಕಟ, 3,268 ಸೀಟು

• ಉದಯವಾಹಿನಿ, ಬೆಂಗಳೂರು

ಸ್ನಾತಕೋತ್ತರ ವೈದ್ಯಕೀಯ ಕೋರ್ಸ್ ಪ್ರವೇಶಕ್ಕೆ ಮೊದಲ ಸುತ್ತಿನ ಸೀಟು ಹಂಚಿಕೆಯ ಅಂತಿಮ ಫಲಿತಾಂಶ ಪ್ರಕಟಿಸಿದ್ದು, ಪ್ರವೇಶ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಪ್ರಕಟಿಸಿದೆ.

ಒಟ್ಟು 4,388 ಸೀಟುಗಳ ಪೈಕಿ 3,268 ಸೀಟು ಹಂಚಿಕೆಯಾಗಿವೆ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಹೆಚ್. ಪ್ರಸನ್ನ ತಿಳಿಸಿದ್ದಾರೆ. ಸೀಟು ಹಂಚಿಕೆಯಾದವರು ನ.11ರವರೆಗೆ ಚಾಯ್ಸ್ ದಾಖಲಿಸಲು ಅವಕಾಶ ನೀಡಲಾಗಿದೆ.

ಚಾಯ್ಸ್‌–1 ಮತ್ತು 2 ದಾಖಲಿಸಿದವರು ನ.11ರವರೆಗೆ ಚಲನ್ ಡೌನ್‌ಲೋಡ್ ಮಾಡಿಕೊಂಡು ಶುಲ್ಕ ಪಾವತಿಸಬೇಕು. ನ.12ರೊಳಗೆ ಶುಲ್ಕ ಪಾವತಿಸಬೇಕು ಎಂದು ಅವರು ತಿಳಿಸಿದ್ದಾರೆ.

ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಗ್ರಾಮಸ್ಥರು; ರಾಮಲಿಂಗರೆಡ್ಡಿ

• ಉದಯವಾಹಿನಿ, ಬೆಂಗಳೂರು

ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆ ಗಡಿ ಭಾಗದಲ್ಲಿ ಕೇರಳ ರಾಜ್ಯದ ಆಸ್ಪತ್ರೆಗಳಿಂದ ತರಲಾಗುವ ವಿಷಕಾರಿ ಮೆಡಿಕಲ್ ಹಾಗೂ ನಿರುಪಯುಕ್ತ ತ್ಯಾಜ್ಯಗಳನ್ನು ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲೇ ವಿಲೇವಾರಿ ಮಾಡುತ್ತಿರುವ ಭೀಕರ ಕೃತ್ಯ ಸಾರ್ವಜನಿಕರು ಹಾಗೂ ಸ್ಥಳೀಯ ನಿವಾಸಿಗಳ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ. ಕರ್ನಾಟಕ, ಕೇರಳ ಮತ್ತು ತಮಿಳುನಾಡು ರಾಜ್ಯಗಳ ಸಂಪರ್ಕ ಕೊಂಡಿಯಾಗಿರುವ ಗುಂಡ್ಲುಪೇಟೆಯ ಮೂಲಕ ದಿನಪ್ರತಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಲಾರಿ ಹಾಗೂ ಈಚರ್ ವಾಹನಗಳು, ಬಂಡೀಪುರ ಅರಣ್ಯ ವ್ಯಾಪ್ತಿಯ ಕೇರಳ–ಗುಂಡ್ಲುಪೇಟೆ ರಾಷ್ಟ್ರೀಯ ಹೆದ್ದಾರಿ–766ರ ಬೋಳು ಗುಡ್ಡದ ಸಮೀಪ ಅಪಾಯಕಾರಿ ಮೆಡಿಕಲ್ ತ್ಯಾಜ್ಯವನ್ನು ಚೆಲ್ಲಾಪಿಲ್ಲಿಯಾಗಿ ಎಸೆದು ಪರಾರಿಯಾಗುತ್ತಿವೆ.

ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ವಿಷಕಾರಿ ಆಸ್ಪತ್ರೆ ತ್ಯಾಜ್ಯ ಸುರಿಯುತ್ತಿರುವುದರಿಂದ ಇಡೀ ಪ್ರದೇಶದಲ್ಲಿ ದುರ್ವಾಸನೆ ಆವರಿಸಿದ್ದು, ಸಾಂಕ್ರಾಮಿಕ ರೋಗ ಹರಡುವ ಭೀತಿ ಎದುರಾಗಿದೆ'' ಎಂದು ಹೋರಾಟಗಾರ ಮುನೀರ್ ಪಾಷ ಆತಂಕ ವ್ಯಕ್ತಪಡಿಸಿದ್ದಾರೆ.



ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಗಳೂರು ಮತ್ತು ತುಮಕೂರು ಜಿಲ್ಲೆಗಳ ವಿವಿಧ ಪೆಟ್ರೋಲ್ ಬಂಕ್‌ಗಳಿಂದ ಮಾದರಿಗಳನ್ನು ಸಂಗ್ರಹಿಸಿ ಪರೀಕ್ಷೆ ನಡೆಸಲಾಗಿದೆ. ಕೆಲವು ಮಾದರಿಗಳಲ್ಲಿ ಎಥನಾಲ್ ಪ್ರಮಾಣ ಶೇ.31.2ರವರೆಗೆ ಕಂಡುಬಂದಿದೆ ಎಂದು ಸಚಿವರು ತಿಳಿಸಿದ್ದರು. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ತೈಲ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಸರ್ಕಾರ ಒತ್ತಾಯಿಸಿತ್ತು. ಸೆಪ್ಟೆಂಬರ್ ಪರೀಕ್ಷೆಗೂ ಅಕ್ಟೋಬರ್ ಪರೀಕ್ಷೆಗೂ ವ್ಯತ್ಯಾಸ ಇದಕ್ಕೆ ಪ್ರತಿಕ್ರಿಯಿಸಿರುವ ತೈಲ ಕಂಪನಿಗಳು, ದೇಶಾದ್ಯಂತ ಹಾಗೂ ಕರ್ನಾಟಕದಲ್ಲಿಯೂ ಪೂರೈಕೆ ಮಾಡುತ್ತಿರುವ ಪೆಟ್ರೋಲ್ ಭಾರತೀಯ ಮಾನದಂಡಗಳ ಬ್ಯೂರೊ (ಬಿಐಎಸ್) ರೂಪಿಸಿರುವ ಐಎಸ್ 17021 ಮಾನದಂಡಕ್ಕೆ ಅನುಗುಣವಾಗಿದೆ ಎಂದು ಹೇಳಿವೆ. 2026ರ ಸೆಪ್ಟೆಂಬರ್‌ನಲ್ಲಿ ನಡೆಸಿದ ಪರೀಕ್ಷೆಯ ಮಾದರಿಗಳನ್ನು ರಾಜ್ಯಮಟ್ಟದ ತೈಲ ಕಂಪನಿಗಳ ಸಂಯೋಜಕರ ಮೂಲಕ ಸಂಬಂಧಪಟ್ಟ ಕಂಪನಿಗಳ ಅಧಿಕೃತ ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು. ಮಾರ್ಕೆಟಿಂಗ್ ಡಿಸಿಪ್ಲಿನ್ ಗೈಡ್‌ಲೈನ್ಸ್‌-2024 (ಎಂಡಿಜಿ) ಅಡಿಯಲ್ಲಿ ಸೂಚಿಸಿರುವ ಗುಣಮಟ್ಟದ ಅಂಶಗಳನ್ನೂ ಪರೀಕ್ಷಿಸಲಾಗಿತ್ತು ಎಂದು ತಿಳಿಸಿವೆ. ಆದರೆ, ಅಕ್ಟೋಬರ್‌ನಲ್ಲಿ ನಡೆಸಿದ ಪರೀಕ್ಷೆಯ ಸಂದರ್ಭದಲ್ಲಿ ತೈಲ ಕಂಪನಿಗಳ ಪ್ರತಿನಿಧಿಗಳ ಭಾಗವಹಿಸುವಿಕೆ ಇಲ್ಲದೆ ಮಾದರಿಗಳನ್ನು ಸಂಗ್ರಹಿಸಲಾಗಿದೆ ಎಂಬುದು ಕಂಪನಿಗಳ ಆಕ್ಷೇಪವಾಗಿದೆ. 2005ರ ಮೋಟಾರ್ ಸ್ಪಿರಿಟ್ ಮತ್ತು ಹೈ ಸ್ಪೀಡ್ ಡೀಸೆಲ್ (ಪೂರೈಕೆ, ವಿತರಣೆ ಮತ್ತು ಅಕ್ರಮ ತಡೆ) ನಿಯಂತ್ರಣ ಆದೇಶ ಹಾಗೂ 2024ರ ಮಾರ್ಕೆಟಿಂಗ್ ಡಿಸಿಪ್ಲಿನ್ ಮಾರ್ಗಸೂಚಿಗಳ ಪ್ರಕಾರ ಪೆಟ್ರೋಲ್ ಮಾದರಿ ಸಂಗ್ರಹ, ಸಂರಕ್ಷಣೆ, ಪರೀಕ್ಷೆ ಮತ್ತು ಫಲಿತಾಂಶ ಪ್ರಕಟಿಸುವುದಕ್ಕೆ ನಿರ್ದಿಷ್ಟ ನಿಯಮಗಳಿವೆ ಎಂದು ಒಎಂಸಿಗಳು ವಿವರಿಸಿವೆ.


ಎಥೆನಾಲ್ ಜೋಶಿ ಸವಾಲ್

ಎಥೆನಾಲ್ ವಿಚಾರದಲ್ಲಿ ರಾಜ್ಯ ಸರ್ಕಾರ ಸುಳ್ಳು ಆರೋಪ ಮಾಡ್ತಿದೆ: ಸಚಿವ ಪ್ರಲ್ಹಾದ್: ಜೋಶಿ ಕಿಡಿ

• ಉದಯವಾಹಿನಿ, ಬೆಂಗಳೂರು

ರಾಜ್ಯದ ಕೆಲವು ಪೆಟ್ರೋಲ್ ಬಂಕ್‌ಗಳಲ್ಲಿ ಮಾರಾಟವಾಗುತ್ತಿರುವ ಪೆಟ್ರೋಲ್‌ನಲ್ಲಿ ಶೇ.31ರವರೆಗೆ ಎಥೆನಾಲ್ ಅಂಶವಿದೆ ಎಂಬ ಕರ್ನಾಟಕ ಸರ್ಕಾರದ ಆರೋಪವನ್ನು ಸಾರ್ವಜನಿಕ ವಲಯದ ತೈಲ ಮಾರುಕಟ್ಟೆ ಕಂಪನಿಗಳು ತಳ್ಳಿಹಾಕಿವೆ. ನಿಗದಿತ ಕಾರ್ಯವಿಧಾನಗಳ ಪ್ರಕಾರ ಪರೀಕ್ಷೆ ನಡೆಸದೆ ಈ ವರದಿಗಳನ್ನು ಸಿದ್ಧಪಡಿಸಲಾಗಿದೆ ಎಂದು ಅವು ಟೀಕಿಸಿವೆ. ಪ್ರಮುಖ ತೈಲ ಮಾರುಕಟ್ಟೆ ಕಂಪನಿಗಳು ನಿಗದಿತ ಶೇ.20ರ ಮಿತಿಗಿಂತ ಹೆಚ್ಚಿನ ಪ್ರಮಾಣದಲ್ಲಿ ಎಥೆನಾಲ್ ಮಿಶ್ರಿತ ಪೆಟ್ರೋಲ್ ಪೂರೈಸುತ್ತಿವೆ. ಪರೀಕ್ಷೆಗಳಲ್ಲಿ ಎಥೆನಾಲ್ ಪ್ರಮಾಣ ಶೇ.31.2ರವರೆಗೂ ದಾಖಲಾಗಿದೆ ಎಂದು ಕರ್ನಾಟಕ ಸರ್ಕಾರ ಆರೋಪಿಸಿತ್ತು. ಅಲ್ಲದೆ, ಸಂಬಂಧಪಟ್ಟ ಕಂಪನಿಗಳ ವಿರುದ್ಧ ಕ್ರಮ ಕೈಗೊಳ್ಳುವಂತೆಯೂ ಒತ್ತಾಯಿಸಿತ್ತು. ಈ ಕುರಿತು ಬೆಂಗಳೂರಿನಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಸಚಿವ ರಿಜ್ವಾನ್ ಅರ್ಷದ್, ಬೆಂಗಳೂರು, ಕೋಲಾರ, ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ, ಮಂಗಳೂರು ಮತ್ತು ತುಮಕೂರಿನಿಂದ ಸಂಗ್ರಹಿಸಿದ ಪೆಟ್ರೋಲ್ ಮಾದರಿಗಳ ಪರೀಕ್ಷೆಯ ಆಧಾರದಲ್ಲಿ ಈ ಆರೋಪ ಮಾಡಲಾಗಿದೆ ಎಂದು ತಿಳಿಸಿದ್ದರು.





ಇದಾದ ಬೆನ್ನಲ್ಲೇ ನಿನ್ನೆ ಜಂಟಿ ಹೇಳಿಕೆ ಬಿಡುಗಡೆ ಮಾಡಿರುವ ಇಂಡಿಯನ್ ಆಯಿಲ್ ಕಾರ್ಪೊರೇಷನ್ ಲಿಮಿಟೆಡ್ (ಐಒಸಿಎಲ್), ಭಾರತ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಬಿಪಿಸಿಎಲ್) ಮತ್ತು ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್), ರಾಜ್ಯದ ಆಹಾರ, ನಾಗರಿಕ ಸರಬರಾಜು, ಗ್ರಾಹಕ ವ್ಯವಹಾರಗಳು ಮತ್ತು ಕಾನೂನು ಮಾಪನಶಾಸ್ತ್ರ ಇಲಾಖೆಯು ಕೆಲವು ಚಿಲ್ಲರೆ ಮಾರಾಟ ಕೇಂದ್ರಗಳಲ್ಲಿ ಪೆಟ್ರೋಲ್‌ನಲ್ಲಿ ಶೇ.26ರಿಂದ ಶೇ.31ರವರೆಗೆ ಎಥೆನಾಲ್ ಅಂಶವಿದೆ ಎಂದು ಬಿಡುಗಡೆ ಮಾಡಿರುವ ವರದಿಯನ್ನು ಗಮನಿಸಿರುವುದಾಗಿ ತಿಳಿಸಿವೆ.

ವರದಿಯಾಗಿರುವ ಈ ಆರೋಪಗಳು ನಿಗದಿತ ಕಾನೂನುಬದ್ಧ ಮತ್ತು ತಾಂತ್ರಿಕ ಕಾರ್ಯವಿಧಾನಗಳ ಪ್ರಕಾರ ನಡೆಸಿದ ಪರೀಕ್ಷೆಗಳಿಂದ ದೃಢಪಟ್ಟಿಲ್ಲ. ಕರ್ನಾಟಕ ಸೇರಿದಂತೆ ದೇಶಾದ್ಯಂತ ತಾವು ಪೂರೈಸುತ್ತಿರುವ ಇ20 ಪೆಟ್ರೋಲ್, ಎಥೆನಾಲ್ ಮಿಶ್ರಿತ ಮೋಟಾರ್ ಗ್ಯಾಸೋಲಿನ್‌ಗೆ ಸಂಬಂಧಿಸಿದ ಭಾರತೀಯ ಮಾನಕ ಬ್ಯೂರೋ (ಬಿಐಎಸ್)ನ ಐಎಸ್ 17021 ಮಾನದಂಡಗಳಿಗೆ ಅನುಗುಣವಾಗಿದೆ ಎಂದು ಕಂಪನಿಗಳು ಹೇಳಿವೆ.

ಕಳೆದ ತಿಂಗಳು ಅಕ್ಟೋಬರ್‌ನಲ್ಲಿ ನಡೆಸಿದ ಪರೀಕ್ಷಾ ಪ್ರಕ್ರಿಯೆಯಲ್ಲಿ ಮಾದರಿಗಳನ್ನು ಸಂಗ್ರಹಿಸಿದ ವಿಧಾನ ಮತ್ತು ಅನುಸರಿಸಿದ ಕಾರ್ಯವಿಧಾನದ ಬಗ್ಗೆ ತಮಗೆ ಆಕ್ಷೇಪಗಳಿವೆ ಎಂದೂ ತಿಳಿಸಿವೆ. ಅಗತ್ಯ ವಸ್ತುಗಳ ಕಾಯ್ದೆ–1955ರ ಅಡಿಯಲ್ಲಿ ಹೊರಡಿಸಲಾದ ಮೋಟಾರ್ ಸ್ಪಿರಿಟ್ ಮತ್ತು ಹೈ ಸ್ಪೀಡ್ ಡೀಸೆಲ್ (ಪೂರೈಕೆ, ವಿತರಣೆ ನಿಯಂತ್ರಣ ಮತ್ತು ಅಕ್ರಮ ತಡೆ) ಆದೇಶ–2005 ಹಾಗೂ 2024ರ ಮಾರುಕಟ್ಟೆ ಶಿಸ್ತು ಮಾರ್ಗಸೂಚಿಗಳ ಪ್ರಕಾರ ಮಾದರಿ ಸಂಗ್ರಹ, ಸಂರಕ್ಷಣೆ, ಪರೀಕ್ಷೆ ಮತ್ತು ಫಲಿತಾಂಶಗಳ ಮಾಹಿತಿ ನೀಡಲು ನಿರ್ದಿಷ್ಟ ಕಾರ್ಯವಿಧಾನವನ್ನು ನಿಗದಿಪಡಿಸಲಾಗಿದೆ ಎಂದು ಕಂಪನಿಗಳು ತಿಳಿಸಿವೆ.

1 ಎಥೆನಾಲ್ ವಿಚಾರವಾಗಿ ಸರ್ಕಾರ ವಿರುದ್ಧ ಪ್ರಲ್ಹಾದ್ ಜೋಶಿ ಸಮರ

2 ಎಥೆನಾಲ್ ಬಗ್ಗೆ ಸುಳ್ಳು ಆರೋಪ ಮಾಡುತ್ತಿದ್ದಾರೆ

3 ಎಥೆನಾಲ್ ಬಳಕೆ ಆತ್ಮನಿರ್ಭರತೆಯ ಪ್ರಮುಖ ಹೆಜ್ಜೆಯಾಗಿದೆ

ರಾಹುಲ್ ಗಾಂಧಿ ಆರೋಪ ಏನು?



ಈ ವಿಚಾರವಾಗಿ ಎಕ್ಸ್ ಖಾತೆಯಲ್ಲಿ ಪೋಸ್ಟ್ ಮಾಡಿರುವ ಲೋಕಸಭೆಯ ವಿಪಕ್ಷ ನಾಯಕ ರಾಹುಲ್ ಗಾಂಧಿ, ಕೇಂದ್ರ ಸರ್ಕಾರದ ಎಥೆನಾಲ್ ನೀತಿಯನ್ನು ಟೀಕಿಸಿದ್ದಾರೆ 420 ಆಗಿ ಬದಲಾಗಿದೆ. ಜನರ ಕಾರು-ಬೈಕ್‌ಗಳಿಂದ ಪೆಟ್ರೋಲ್ ಕದಿಯಲಾಗುತ್ತಿದೆ ಎಂದು ರಾಹುಲ್ ವಾಗ್ದಾಳಿ ನಡೆಸಿದ್ದಾರೆ. ಐಒಸಿಎಲ್, ಹೆಚ್‌ಪಿಸಿಎಲ್, ಬಿಪಿಸಿಎಲ್, ನಯಾರಾ ಹಾಗೂ ಶೆಲ್ ನಿಯಮ ಉಲ್ಲಂಘಿಸಿವೆ. ಅತಿಯಾದ ಎಥೆನಾಲ್‌ನಿಂದ ವಾಹನಗಳ ಮೈಲೇಜ್ ಶೇ 10ರಷ್ಟು ಕುಸಿದು, ಸಾರ್ವಜನಿಕರಿಗೆ ಬರೋಬ್ಬರಿ 1.01 ಲಕ್ಷ ರೂ. ಕೋಟಿ ಹಾನಿಯಾಗುತ್ತಿದೆ ಎಂದು ಪ್ರತಿಪಾದಿಸಿದ್ದಾರೆ.

ಸಚಿವ ಪ್ರಲ್ಹಾದ್ ಜೋಶಿ ಕಿಡಿ

ಎಥೆನಾಲ್ ವಿಚಾರದಲ್ಲಿ ರಾಜ್ಯ ಸರ್ಕಾರ ಸುಳ್ಳು ಆರೋಪ ಮಾಡಿತ್ತಿದೆ. ರಾಜ್ಯ ಸರ್ಕಾರ ಯಾವುದನ್ನೂ ಸರಿಯಾಗಿ ಪರಿಶೀಲನೆ ಮಾಡಿಲ್ಲ' ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ್ ಜೋಶಿ ಕಿಡಿಕಾರಿದ್ದಾರೆ. ಪೆಟ್ರೋಲ್‌ನಲ್ಲಿ 20 ಶೇಕಡಾ ಅಲ್ಲ 31 ಪರ್ಸೆಂಟ್ ಎಥೆನಾಲ್ ಆರೋಪ ವಿಚಾರವಾಗಿ ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, 'ಪೆಟ್ರೋಲ್ ಚೆಕ್ ಮಾಡಬೇಕಾದರೆ ಅದಕ್ಕೆ ಪ್ರೊಸಿಜರ್ ಇದೆ. ಅದನ್ನು ಫಾಲೋಮಾಡದೆ ಎಥೆನಾಲ್ ಬಗ್ಗೆ ಸುಳ್ಳು ಆರೋಪ ಮಾಡುತ್ತಿದ್ದಾರೆ. ಹೆಚ್ಚುವರಿ ಎಥೆನಾಲ್ ಖರೀದಿಸುವಂತೆ ರೈತರು ಒತ್ತಾಯಿಸುತ್ತಿದ್ದಾರೆ. ಎಥೆನಾಲ್ ಬಳಕೆ ಆತ್ಮನಿರ್ಭರತೆಯ ಪ್ರಮುಖ ಹೆಜ್ಜೆಯಾಗಿದೆ. ಜಗತ್ತಿನಲ್ಲಿ ಸಮಸ್ಯೆ ಆದರೆ ಭಾರತದಲ್ಲಿ ಇಂಧನ ಸಮಸ್ಯೆ ಆಗಲಿಲ್ಲ' ಎಂದು ಅವರು ಹೇಳಿದ್ದಾರೆ.

ಪೆಟ್ರೋಲ್‌ನಲ್ಲಿ ಹೆಚ್ಚು ಎಥೆನಾಲ್ ರಾದ್ಧಾಂತ

ರಾಜ್ಯದಲ್ಲಿ ಪೆಟ್ರೋಲ್ ಕಂಪನಿಗಳು ಅಕ್ರಮವಾಗಿ ಶೇ 30ಕ್ಕೂ ಹೆಚ್ಚು ಎಥೆನಾಲ್ ಬೆರೆಸಿ ಸಾರ್ವಜನಿಕರಿಗೆ ಮೋಸ ಮಾಡುತ್ತಿವೆ ಎಂದು ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಖಾತೆ ಸಚಿವ ರಿಜ್ವಾನ್ ಅರ್ಷದ್ ಆರೋಪ ಮಾಡಿದ್ದಾರೆ. ತನಿಖಾ ವರದಿ ಇದೀಗ ದೇಶಾದ್ಯಂತ ಭಾರಿ ರಾಜಕೀಯ ಹಾಗೂ ತಾಂತ್ರಿಕ ಸಂಚಲನಕ್ಕೆ ಕಾರಣವಾಗಿದೆ.

ಈ ಬಗ್ಗೆ ಕಾಂಗ್ರೆಸ್‌ನಾಯಕ ರಾಹುಲ್ ಗಾಂಧಿ ಕೂಡ ಮಹತ್ವದ ಹೇಳಿಕೆಯನ್ನು ನೀಡಿದ್ದಾರೆ. ಇದೀಗ ಈ ಆರೋಪವನ್ನು ಸಾಕ್ಷಿ ಸಮೇತ ಕೇಂದ್ರ ತೈಲ ಸಚಿವಾಲಯ ಮತ್ತು ತೈಲ ಕಂಪನಿಗಳು ಸ್ಪಷ್ಟನೆಯನ್ನು ನೀಡಿದೆ. ಕೇಂದ್ರ ಸರ್ಕಾರದ ನಿರ್ದೇಶನದಂತೆ ಪೆಟ್ರೋಲ್‌ನಲ್ಲಿ ಗರಿಷ್ಠ ಶೇ 20ರಷ್ಟು ಎಥೆನಾಲ್ ಬೆರೆಸಲು ಮಾತ್ರ ಅವಕಾಶವಿದೆ. ಆದರೆ ತೈಲ ಕಂಪನಿಗಳು ಅಕ್ರಮವಾಗಿ ಶೇ 31.2ರವರೆಗೆ ಎಥೆನಾಲ್ ಬೆರೆಸಿ ಗ್ರಾಹಕರು ಮತ್ತು ವಾಹನ ಮಾಲೀಕರಿಗೆ ದ್ರೋಹ ಎಸಗುತ್ತಿವೆ ಎಂದು ಸಚಿವ ರಿಜ್ವಾನ್ ಅರ್ಷದ್ ಹೇಳಿದರು.

ಗ್ರಾಹಕರ ವಿಶ್ವಾಸ ಉಳಿಸಿ

ಎರಡು ಮಾದರಿಗಳನ್ನು ತೈಲ ಕಂಪನಿ ಅಥವಾ ಇಲಾಖೆಯು ಸಂರಕ್ಷಿಸಬೇಕು. ಉಳಿದ ಎರಡು ಮಾದರಿಗಳನ್ನು ನಿಯಂತ್ರಣ ಆದೇಶದ ಮೂರನೇ ಅನುಸೂಚಿಯಲ್ಲಿ ನಮೂದಿಸಿರುವ ಅಥವಾ ಅಧಿಕೃತ ಗೆಜೆಟ್‌ನಲ್ಲಿ ಅಧಿಸೂಚನೆ ಹೊರಡಿಸಿರುವ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಮಾದರಿಗಳ ಲೇಬಲ್‌ಗಳ ಮೇಲೆ ಸಂಬಂಧಪಟ್ಟ ಎಲ್ಲರ ಸಹಿ ಇರಬೇಕು. ನಿಗದಿತ ಅವಧಿಯೊಳಗೆ ಪರೀಕ್ಷಾ ಫಲಿತಾಂಶಗಳನ್ನು ಬಂಕ್ ಮಾಲೀಕರು ಮತ್ತು ತೈಲ ಕಂಪನಿಗೆ ತಿಳಿಸಬೇಕು ಎಂದು ತೈಲ ಕಂಪನಿಗಳು ಹೇಳಿವೆ. ಕಳೆದ ಸೆಪ್ಟೆಂಬರ್‌ನಲ್ಲಿ ಸಂಗ್ರಹಿಸಿದ ಮಾದರಿಗಳನ್ನು ರಾಜ್ಯಮಟ್ಟದ ಸಂಯೋಜಕರ ಮೂಲಕ ನಿಗದಿತ ತೈಲ ಕಂಪನಿಗಳ ಪ್ರಯೋಗಾಲಯಗಳಿಗೆ ಕಳುಹಿಸಲಾಗಿತ್ತು. 2024ರ ಮಾರುಕಟ್ಟೆ ಶಿಸ್ತು ಮಾರ್ಗಸೂಚಿಗಳ ಪ್ರಕಾರ ಅಗತ್ಯ ಗುಣಮಟ್ಟದ ಮಾನದಂಡಗಳ ಪರೀಕ್ಷೆ ನಡೆಸಲಾಗಿತ್ತು.ಆದರೆ, ಅಕ್ಟೋಬರ್‌ನಲ್ಲಿ ನಡೆಸಿದ ಪರೀಕ್ಷೆಯಲ್ಲಿ ತೈಲ ಕಂಪನಿಗಳ ಪ್ರತಿನಿಧಿಗಳ ಭಾಗವಹಿಸುವಿಕೆ ಇಲ್ಲದೆಯೇ ಮಾದರಿಗಳನ್ನು ಸಂಗ್ರಹಿಸಲಾಗಿದೆ ಎಂದು ಹೇಳಿವೆ. ರಾಜ್ಯಮಟ್ಟದ ಸಂಯೋಜಕರ ಮೂಲಕ ಮಾಹಿತಿ ಕೇಳಿದ್ದರೂ, ಪರೀಕ್ಷೆಗೆ ಸಂಬಂಧಿಸಿದ ಸಂರಕ್ಷಿತ ಮಾದರಿಗಳು, ಪ್ರತಿ ಇಂಧನ ಕೇಂದ್ರದ ಸಂಪೂರ್ಣ ವಿವರಗಳು ಮತ್ತು ಪ್ರಯೋಗಾಲಯದ ವರದಿಗಳು ತಮಗೆ ಲಭ್ಯವಾಗಿಲ್ಲ ಎಂದು ಕಂಪನಿಗಳು ತಿಳಿಸಿವೆ. ವಿವಾದಕ್ಕೆ ತೆರೆ ಎಳೆಯಲು ಮತ್ತು ಗ್ರಾಹಕರ ವಿಶ್ವಾಸವನ್ನು ಉಳಿಸಿಕೊಳ್ಳಲು ಇಂಡಿಯನ್ ಆಯಿಲ್, ಬಿಪಿಸಿಎಲ್ ಮತ್ತು ಎಚ್‌ಪಿಸಿಎಲ್ ಕಂಪನಿಗಳು ಕರ್ನಾಟಕ ಸರ್ಕಾರದೊಂದಿಗೆ ಜಂಟಿ ಪರೀಕ್ಷೆ ನಡೆಸುವಂತೆ ಅಧಿಕೃತವಾಗಿ ಮನವಿ ಮಾಡಿವೆ. ಪಾರದರ್ಶಕವಾಗಿ, ಸ್ವತಂತ್ರವಾಗಿ ಹಾಗೂ ವೈಜ್ಞಾನಿಕವಾಗಿ ಪರಿಶೀಲಿಸಬಹುದಾದ ರೀತಿಯಲ್ಲಿ ಪರೀಕ್ಷೆ ನಡೆಸಬೇಕು ಎಂದು ಕೋರಿವೆ

ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ 2,000 ಕೋಟಿ ಮೌಲ್ಯದ ವೆಟ್ರಿ ಯೋಜನೆ ಅನುಷ್ಠಾನಕ್ಕೆ ಸಿಎಂ ವಿಜಯ್ ಆದೇಶ

• ಉದಯವಾಹಿನಿ, ಚೆನ್ನೈ

ತಮಿಳುನಾಡಿನ ಕಾಲೇಜು ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್ ವಿತರಿಸುವ ಉದ್ದೇಶದಿಂದ ಮುಖ್ಯಮಂತ್ರಿ ಸಿ. ಜೋಸೆಫ್ ವಿಜಯ್ ಅವರು 'ವೆಟ್ರಿ ಲ್ಯಾಪ್‌ಟಾಪ್ ಯೋಜನೆ' ಅನುಷ್ಠಾನಕ್ಕೆ ಆದೇಶ ನೀಡಿದ್ದಾರೆ. ಈ ಯೋಜನೆಗಾಗಿ ರಾಜ್ಯ ಸರ್ಕಾರ 2,000 ಕೋಟಿ ರೂ. ಅನುದಾನ ಮೀಸಲಿಟ್ಟಿದೆ. 2026–27ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಘೋಷಿಸಲಾಗಿದ್ದ ಈ ಯೋಜನೆಯ ಅನುಷ್ಠಾನಕ್ಕೆ ಸರ್ಕಾರ ಇದೀಗ ಆಡಳಿತಾತ್ಮಕ ಅನುಮೋದನೆ ನೀಡಿದ್ದು, ಫಲಾನುಭವಿಗಳ ಆಯ್ಕೆ ಹಾಗೂ ಯೋಜನೆಯ ಜಾರಿಗಾಗಿ ವಿವರವಾದ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಯೋಜನೆಯ ಪರಿಣಾಮಕಾರಿ ಅನುಷ್ಠಾನ ಮತ್ತು ಮೇಲ್ವಿಚಾರಣೆಗಾಗಿ ಮುಖ್ಯಮಂತ್ರಿ ವಿಜಯ್ ಅವರ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲಾಗುತ್ತದೆ. 2026–27ನೇ ಶೈಕ್ಷಣಿಕ ವರ್ಷದಲ್ಲಿ ಸರ್ಕಾರಿ ಹಾಗೂ ಸರ್ಕಾರದಿಂದ ಅನುದಾನ ಪಡೆಯುವ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪದವಿ ಮತ್ತು ಡಿಪ್ಲೊಮಾ ಕೋರ್ಸ್‌ಗಳ ಮೊದಲ ಹಾಗೂ ಎರಡನೇ ವರ್ಷದ ವಿದ್ಯಾರ್ಥಿಗಳು



ಯೋಜನೆಯ ಫಲಾನುಭವಿಗಳಾಗಲಿದ್ದಾರೆ.

ಕಲೆ, ವಿಜ್ಞಾನ, ಇಂಜಿನಿಯರಿಂಗ್, ಪಾಲಿಟೆಕ್ನಿಕ್, ಐಟಿಐ, ವೈದ್ಯಕೀಯ, ಪಶುವೈದ್ಯಕೀಯ, ಕೃಷಿ, ಮೀನುಗಾರಿಕೆ ಮತ್ತು ಕಾನೂನು ಸೇರಿದಂತೆ ವಿವಿಧ ವಿಭಾಗಗಳ ವಿದ್ಯಾರ್ಥಿಗಳಿಗೆ ಯೋಜನೆಯ ಲಾಭ ದೊರೆಯಲಿದೆ. ಇದಲ್ಲದೆ, 2025–26ನೇ ಶೈಕ್ಷಣಿಕ ವರ್ಷದಲ್ಲಿ ಉಚಿತ ಲ್ಯಾಪ್‌ಟಾಪ್ ಪಡೆಯಲು ಸಾಧ್ಯವಾಗದ ಸರ್ಕಾರಿ ಹಾಗೂ ಅನುದಾನಿತ ಶಿಕ್ಷಣ ಸಂಸ್ಥೆಗಳ ವೃತ್ತಿಪರ ಕೋರ್ಸ್‌ಗಳ ಮೂರನೇ ಮತ್ತು ನಾಲ್ಕನೇ ವರ್ಷದ ವಿದ್ಯಾರ್ಥಿಗಳಿಗೂ ಈ ಯೋಜನೆಯನ್ನು ವಿಸ್ತರಿಸಲಾಗಿದೆ.

ಇಂಜಿನಿಯರಿಂಗ್ ವಿದ್ಯಾರ್ಥಿಗಳ ತಾಂತ್ರಿಕ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡು ಅವರಿಗೆ ಇಂಟೆಲ್ ಕೋರ್ ಐ5 ಪ್ರೊಸೆಸರ್ ಅಥವಾ ಅದಕ್ಕೆ ಸಮಾನ ಸಾಮರ್ಥ್ಯದ ಪ್ರೊಸೆಸರ್ ಹೊಂದಿರುವ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಸರ್ಕಾರ ನಿರ್ಧರಿಸಿದೆ. ಲ್ಯಾಪ್‌ಟಾಪ್‌ಗಳ ಖರೀದಿ ಜವಾಬ್ದಾರಿಯನ್ನು ತಮಿಳುನಾಡು ಸರ್ಕಾರದ ಎಲೆಕ್ಟ್ರಾನಿಕ್ಸ್ ಕಾರ್ಪೊರೇಷನ್‌ಗೆ ವಹಿಸಲಾಗಿದೆ. ನಿಗದಿತ ಗುಣಮಟ್ಟ ಮತ್ತು ತಾಂತ್ರಿಕ ಮಾನದಂಡಗಳನ್ನು ಪೂರೈಸುವ ಲ್ಯಾಪ್‌ಟಾಪ್‌ಗಳನ್ನು ಖರೀದಿಸಲು ಸಂಸ್ಥೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ವಿದ್ಯಾರ್ಥಿಗಳ ತಾಂತ್ರಿಕ ಜ್ಞಾನ ಹೆಚ್ಚಿಸುವುದು, ಕೌಶಲ ಅಭಿವೃದ್ಧಿ ತರಬೇತಿ ಪಡೆಯಲು ನೆರವಾಗುವುದು, ಆನ್‌ಲೈನ್ ಶಿಕ್ಷಣಕ್ಕೆ ಅವಕಾಶ ಕಲ್ಪಿಸುವುದು ಹಾಗೂ ಉದ್ಯೋಗಾವಕಾಶಗಳಿಗೆ ಸಿದ್ಧರಾಗಲು ಸಹಾಯ ಮಾಡುವುದು ಯೋಜನೆಯ ಉದ್ದೇಶವಾಗಿದೆ.

ನಮ್ಮದು ಬೆಲೆ ಏರಿಕೆ ಭಾಗ್ಯದ ಸರ್ಕಾರವಲ್ಲ, ಗ್ಯಾರಂಟಿಗಳ ಸರ್ಕಾರ ಎಂದ ಡಿಕೆ ಸುರೇಶ್

• ಉದಯವಾಹಿನಿ, ಬೆಂಗಳೂರು

'ಕರ್ನಾಟಕದ ಹಾಲು ದರವು ಇತರೆ ರಾಜ್ಯಗಳಿಗೆ ಹೋಲಿಸಿದರೆ ಕಡಿಮೆಯಿದೆ. ಕಳೆದ ಆರು ತಿಂಗಳಿಂದ ಹಾಲು ಒಕ್ಕೂಟಗಳು ಪ್ರತಿದಿನ ಒಂದು ಕೋಟಿ 10 ಲಕ್ಷದಿಂದ ಒಂದು ಕೋಟಿ 15 ಲಕ್ಷ ಲೀಟರ್ ಹಾಲನ್ನು ಶೇಖರಿಸಲಾಗುತ್ತಿದ್ದು, ಪ್ರತಿನಿತ್ಯ 1 ರಿಂದ 1.5 ರೂ ನಷ್ಟ ಅನುಭವಿಸುತ್ತಿವೆ. ಈ ನಷ್ಟವನ್ನು ಸರಿದೂಗಿಸಲು ಬೆಲೆ ಏರಿಕೆ ಅನಿವಾರ್ಯ' ಎಂದು ಮಾಜಿ ಸಂಸದ, ಬಮೂಲ್ ಅಧ್ಯಕ್ಷ ಡಿಕೆ ಸುರೇಶ್ ಹೇಳಿದ್ದಾರೆ. ಮಾತನಾಡಿದ ಅವರು, 'ಇಡೀ ದೇಶದಲ್ಲಿ ಅಮುಲ್ ಸೇರಿದಂತೆ ತಮಿಳುನಾಡು, ಕೇರಳ, ತೆಲಂಗಾಣ, ಆಂಧ್ರಪ್ರದೇಶ ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲೂ ಕರ್ನಾಟಕಕ್ಕಿಂತ ಹೆಚ್ಚಿನ ಹಾಲಿನ ದರವಿದ್ದು. ಖಾಸಗಿ ಡೈರಿಗಳು ಇನ್ನೂ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿವೆ. ನಮ್ಮದು ಬೆಲೆ ಏರಿಕೆ ಭಾಗ್ಯ ಸರ್ಕಾರವಲ್ಲ, ಗ್ಯಾರಂಟಿಗಳ ಸರ್ಕಾರ' ಎಂದು ಅವರು ಹೇಳಿದ್ದಾರೆ.

ಈ ರಾಜ್ಯದ ಗೃಹ ಮಂತ್ರಿಗಳು ಸಂಜೆ ಜನ ಹೆಂಡದ ಅಂಗಡಿ ಮುಂದೆ ಮಾತನಾಡುವ ರೀತಿ ಮಾತನಾಡುತ್ತಿದ್ದಾರೆ: ಕೇಂದ್ರ ಸಚಿವ ಕುಮಾರಸ್ವಾಮಿ

• ಉದಯವಾಹಿನಿ, ಬೆಂಗಳೂರು

ಗೃಹ ಸಚಿವ ಪ್ರಿಯಾಂಕ್ ಖರ್ಗೆ ಮತ್ತು ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ನಡುವಿನ ವಾಕ್ಸಮರ ಇಂದೂ ಮುಂದುವರಿದಿದೆ. ಕೆಪಿಎಸ್‌ಸಿ ಅಕ್ರಮಗಳ ಕುರಿತು ಪ್ರಿಯಾಂಕ್ ಖರ್ಗೆ ಅವರನ್ನು ದೂಷಿಸಿರುವ ಕೇಂದ್ರ ಸಚಿವ ಕುಮಾರಸ್ವಾಮಿ, ಗೃಹ ಸಚಿವರು ಸಂಜೆ ಮದ್ಯದ ಅಂಗಡಿ ಮುಂದೆ ಮದ್ಯ ಸೇವಿಸಿದ ಜನರಂತೆ ಮಾತನಾಡುತ್ತಾರೆ ಎಂದು ಟೀಕಿಸಿದರು. ಜೆ.ಪಿ.ಭವನದಲ್ಲಿ ಮಾತನಾಡಿದ ಅವರು, ರಾಜ್ಯದ ಗೃಹ ಮಂತ್ರಿ ಸಂಜೆ ಹೆಂಡ ಕುಡಿದವರ ರೀತಿ ಮಾತಾಡುತ್ತಿದ್ದಾರೆ. 17 ಎಇಇ ಸ್ಥಾನಗಳಿಗೆ ನೇಮಕಾತಿ ನಾನು ಮಾಡಿದ್ದಾ?, ಪಶು ವೈದ್ಯಾಧಿಕಾರಿಗಳ ಪರೀಕ್ಷೆ ನಡೆಸಿದ್ದು ನಾನಾ?, ಜಾರಿ ನಿರ್ದೇಶನಾಲಯ (ಇ.ಡಿ) ದಾಳಿ ಮಾಡಿದ್ದಕ್ಕೆ ಈ ಹಗರಣ ಹೊರಬಿತ್ತು. ಆರೋಪಿಯಾಗಿರುವ ಅಧಿಕಾರಿ ಜ್ಞಾನೇಂದ್ರನನ್ನು ಕರೆದುಕೊಂಡು ಬಂದು ರೆಸಾರ್ಟ್‌ನಲ್ಲಿ ನಾನು ಕೂರಿಸಿಕೊಂಡಿದ್ದೆನಾ ಎಂದು ಹೇಳುವ ಮೂಲಕ ಕೆಪಿಎಸ್‌ಸಿ ಹಗರಣಗಳ ಪಿತಾಮಹ ಕುಮಾರಸ್ವಾಮಿ ಎಂದು ಆರೋಪಿಸಿದ್ದ ಪ್ರಿಯಾಂಕ್ ಖರ್ಗೆ ಅವರಿಗೆ ತಿರುಗೇಟು ನೀಡಿದರು.

ಹಗರಣಗಳ ಮಧ್ಯೆ ಮತ್ತೆ ಪರೀಕ್ಷೆ: ರಾಜ್ಯ ಸರ್ಕಾರ ನೇಮಕಾತಿ ಪರೀಕ್ಷೆಗಳನ್ನು ಕೆಪಿಎಸ್‌ಸಿ ಬದಲು ಕೆಇಎ ಸಂಸ್ಥೆಯಿಂದ ನಡೆಸಲು ಹೊರಟಿದೆ. ಆದರೆ, ಈಗಾಗಲೇ ಹಲವು ಹಗರಣಗಳ ಆರೋಪಗಳಿವೆ. ಕೆಪಿಎಸ್‌ಸಿ ಸಂಸ್ಥೆಯಲ್ಲಿ ಹಣದ ವ್ಯವಹಾರ ನಡೆದಿರುವುದು ಸಾಬೀತಾಗಿದೆ. ದೇಶಪಾಂಡೆ ಅವರ ನೇತೃತ್ವದಲ್ಲಿ ಸಮಿತಿ ರಚಿಸಿದರು. ಅವರು ವರದಿ ಕೊಟ್ಟಿದ್ದಾರೋ ಇಲ್ಲವೋ ಇನ್ನೂ ಸ್ಪಷ್ಟತೆ ಇಲ್ಲ. ಹೀಗಿದ್ದಾಗಲೂ, ಪರೀಕ್ಷೆ ನಡೆಸಲು ಸರ್ಕಾರ ಮುಂದಾಗಿದೆ. ಅದನ್ನು ಮುಂದೂಡಬೇಕು ಎನ್ನುವುದು ನನ್ನ ಸಲಹೆ ಎಂದರು. ಜೆಡಿಎಸ್ ಪಕ್ಷ ನೂರು ಸೀಟು ಗೆದ್ದು ತೋರಿಸಲಿ ಎಂದು ಸವಾಲು ಹಾಕಿದ ಪ್ರಿಯಾಂಕ್ ಖರ್ಗೆ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ ಅವರು, ನಮ್ಮ ಪಕ್ಷ (ಜೆಡಿಎಸ್) ಕೇವಲ 30 ರಿಂದ 40 ಸೀಟು ಗೆದ್ದಾಗಲೇ ಮುಖ್ಯಮಂತ್ರಿ ಸ್ಥಾನ ಪಡೆದಿದೆ ಎಂದು ತಿವಿದರು. ರೈತರಿಗೆ ಬೆಳೆ ವಿಮೆ ಸ್ಕೀಮ್‌ನಲ್ಲಿ ಪರಿಹಾರ ಸಿಗದೆ ಇರುವ ವಿಚಾರವಾಗಿ ಮಾತನಾಡಿ, ಸರ್ಕಾರ ಬೆಳೆ ವಿಮೆ ಕೊಡಿಸುವುದರಲ್ಲಿ ವಿಫಲವಾಗಿದೆ. ಈ ಸರ್ಕಾರದಲ್ಲಿ ಬರೀ ಘೋಷಣೆ ಮಾಡಲಾಗುತ್ತದೆ. ಮೊನ್ನೆ ಬಸ್ ದರ ಏರಿಕೆ ಮಾಡಿದ್ದಾರೆ. ಇದರ ಬೆನ್ನಲ್ಲೇ, ಸಿಎಂ ಡಿಕೆ ಶಿವಕುಮಾರ್ ಪತ್ರಿಕಾಗೋಷ್ಠಿ ಕರೆದು ರೈತರಿಗೆ 2,500 ಕೊಡುತ್ತೇವೆ ಘೋಷಿಸಿದ್ದಾರೆ. ಈ ಮೂಲಕ ಬಸ್ ದರ ಏರಿಕೆಯ ವಿಷಯವನ್ನು ತಿರುಚುವ ಕೆಲಸ ಮಾಡಿದ್ದಾರೆ. ಸಂಪತ್ಭರಿತವಾದ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಹಳ್ಳ ಹಿಡಿಸಿದ್ದೀರಿ ಎಂದು ವಾಗ್ದಾಳಿ ನಡೆಸಿದರು



ಅಕ್ರಮಗಳಿಗೆ ನಮ್ಮ ಬೆಂಬಲವಿಲ್ಲ

ಬೆಂಗಳೂರು ದಕ್ಷಿಣ ಜಿಲ್ಲೆಯಲ್ಲಿ 4 ಮೆಡಿಕಲ್ ಕಾಲೇಜು ಪ್ರಾರಂಭ ಮಾಡಿದ್ದೇವೆ. ರಾಜೀವ್ ಗಾಂಧಿ ಮೆಡಿಕಲ್ ಕಾಲೇಜು ಮಾಡಿದ್ದೇವೆ ಎಂದು ಸರ್ಕಾರ ಹೇಳುತ್ತಿದೆ. ಆದರೆ, ನನ್ನ ಸಿಎಂ ಅವಧಿಯಲ್ಲಿ ನಡೆದ ಸಚಿವ ಸಂಪುಟದಲ್ಲಿ ಇವುಗಳಿಗೆ ಒಪ್ಪಿಗೆ ಕೊಟ್ಟಿದ್ದು ನಾನು. ಸುಮ್ಮನೆ ಬುರುಡೆ ಭಾಷಣ ಮಾಡೋದು ನಿಲ್ಲಿಸಿ. ಇನ್ನೊಬ್ರು ನನಗೆ ಸಲಹೆ ಕೊಟ್ಟಿದ್ದಾರೆ. ಸಮ್ಮಿಶ್ರ ಸರ್ಕಾರದಲ್ಲಿ ನನಗೆ ಬೆಂಬಲ ಕೊಟ್ಟದ್ರಂತೆ. ದೀಪಾವಳಿ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಒಳ್ಳೆ ಕೆಲಸ ಮಾಡುವುದಾದರೆ, ನನ್ನ ಸಂಪೂರ್ಣ ಬೆಂಬಲ ನಿಮಗಿದೆ ಎಂದರು.ಆದರೆ, ಯೋಜನೆಗಳ ಹೆಸರಲ್ಲಿ ನೀವು ಮಾಡುವ ಅಕ್ರಮಗಳಿಗೆ ನನ್ನ ಬೆಂಬಲವಿಲ್ಲ. ನೀವು ಜನಪರ ಕೆಲಸ ಮಾಡಿದರೆ ನಾನೇ ಮುಖ್ಯಮಂತ್ರಿಗೆ ಸನ್ಮಾನ ಮಾಡುತ್ತೇನೆ.

ದುಡ್ಡು ಲೂಟಿ ಹೊಡೆದು ಕೆಲಸ ಮಾಡಿದರೆ ನಾವು ಬೆಂಬಲ ಕೊಡೋಕೆ ಆಗುತ್ತಾ ಒಳ್ಳೆ ಕೆಲಸ ಮಾಡಿ. ಕರ್ನಾಟಕದಲ್ಲಿ ಇರುವ ಗುತ್ತಿಗೆದಾರರಿಗೆ ಕೆಲಸ ಕೊಡಿ. ಬೇರೆ ರಾಜ್ಯದವರಿಗೆ ಕೊಡಬೇಡಿ ಎಂದು ಸಲಹೆ ನೀಡಿದರು.ರಾಜ್ಯದಲ್ಲಿ ಪೆಟ್ರೋಲ್‌ಗೆ ಶೇಕಡಾ 30 ರಷ್ಟು ಎಥನಾಲ್ ಮಿಶ್ರಣ ಆಗಿದೆ ಎಂಬ ಆರೋಪ ವಿಚಾರಕ್ಕೆ ಪ್ರತಿಕ್ರಿಯಿಸಿ, ಕರ್ನಾಟಕದಲ್ಲಿ ಸಿಗುವ ತೈಲ ಗುಜರಾತ್‌ನಲ್ಲಿ ಸಿಗುವುದಿಲ್ಲ. ಅದು ಮಿಶ್ರಣ ಆಗೋದು ಇಲ್ಲೇ. ಕೇಂದ್ರ ಸರ್ಕಾರ ಮುಂದೆ ಶೇಕಡಾ 100 ರಷ್ಟು ಎಥನಾಲ್ ಮಿಶ್ರಿತ ವಾಹನಗಳನ್ನು ತರುವ ಕೆಲಸ ಮಾಡುತ್ತಿದೆ. ಈಗ ಶೇಕಡಾ 20ರಷ್ಟು ಮಾತ್ರ ಇದೆ. ನಾನು ದೆಹಲಿಗೆ ಹೋದಾಗ ಇದರ ಬಗ್ಗೆ ಹೆಚ್ಚಿನ ಮಾಹಿತಿ ಪಡೆಯುತ್ತೇನೆ ಎಂದರು.

ಈ ದಿನದ ದರ ಪೆಟ್ರೋಲ್: 111.68 ₹/L | ಡೀಸೆಲ್ : 99.56₹/L | ಬಂಗಾರ: ₹14,357 /Gram24ct ₹13,160/Gram22ct | ಬೆಳ್ಳಿ: ₹205.00/Gram

ಸರ್ಕಾರಿ ಶಿಕ್ಷಕರು ಕೇವಲ ಸಂಬಳ ಪಡೆಯುವ ನೌಕರರಲ್ಲ!

• ಉದಯವಾಹಿನಿ, ಬೆಂಗಳೂರು

ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುತ್ರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಯ ಮುಖ್ಯಸ್ಥೆ ಐಶ್ವರ್ಯಾ ಶಿವಕುಮಾರ್ ಅವರು ಸರ್ಕಾರಿ ಶಾಲಾ ಶಿಕ್ಷಕರ ಬೋಧನೆಯ ಗುಣಮಟ್ಟ ಮತ್ತು ಸಮರ್ಪಣೆಯನ್ನು ಪ್ರಶ್ನಿಸುವ ಹೇಳಿಕೆಯನ್ನು ವಿಧಾನ ಪರಿಷತ್ ಸದಸ್ಯ ಎಪಿ ರಂಗನಾಥ್ ಖಂಡಿಸಿದ್ದಾರೆ.

ಈ ಹೇಳಿಕೆಯನ್ನು ಆಕ್ಷೇಪಾರ್ಹ ಎಂದು ಬಣ್ಣಿಸಿದ ರಂಗನಾಥ್, ಸಾರ್ವಜನಿಕ ಶಿಕ್ಷಣದ ವಾಸ್ತವತೆಯನ್ನು ಅರ್ಥಮಾಡಿಕೊಳ್ಳದೆ ಹೇಳಿಕೆ ನೀಡಿದ್ದಾರೆ. ಸರ್ಕಾರಿ ಶಿಕ್ಷಕರನ್ನು ಅರ್ಹತಾ ಪರೀಕ್ಷೆಗಳು ಮತ್ತು ಸ್ಪರ್ಧಾತ್ಮಕ ನೇಮಕಾತಿಗಳ ಮೂಲಕ ಆಯ್ಕೆ ಮಾಡಲಾಗುತ್ತದೆ ಮತ್ತು ಹಲವಾರು ಆಡಳಿತಾಧಿಕಾರಿಗಳು, ವಿಜ್ಞಾನಿಗಳು, ಬರಹಗಾರರು, ನ್ಯಾಯಾಧೀಶರು ಮತ್ತು ವಕೀಲರು ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣ ಪಡೆದಿದ್ದಾರೆ ಎಂದಿದ್ದಾರೆ. ಖಾಸಗಿ ಸಂಸ್ಥೆಗಳನ್ನು ನಡೆಸುವುದು ಕಾನೂನುಬದ್ಧ ವೈಯಕ್ತಿಕ ಆಯ್ಕೆಯಾಗಿದೆ ಎಂದು ಒಪ್ಪಿಕೊಂಡರೂ, ಶಿಕ್ಷಕರ ಬದ್ಧತೆಯನ್ನು ಪ್ರಶ್ನಿಸಲು ಖಾಸಗಿ ಸೌಲಭ್ಯಗಳನ್ನು ಸರ್ಕಾರಿ ಶಾಲೆಗಳೊಂದಿಗೆ ಹೋಲಿಸಲಾಗುವುದಿಲ್ಲ ಎಂದು ಅವರು ಹೇಳಿದರು. ಖಾಸಗಿ ಶಿಕ್ಷಣವು ಒಂದು ಆಯ್ಕೆಯಾಗಿರಬಹುದು, ಸಾರ್ವಜನಿಕ ಶಿಕ್ಷಣವು ಸಾಂವಿಧಾನಿಕ ಮತ್ತು ಸಾಮಾಜಿಕ ಜವಾಬ್ದಾರಿಯಾಗಿದೆ ಎಂದು ಅವರು ಹೇಳಿದರು.

ಸಾಮಾಗ್ರಿ ಖರೀದಿಸಲು ಗ್ರಾಮ ಪಂಚಾಯಿತಿಗಳಿಗೆ ಅವಕಾಶ!

• ಉದಯವಾಹಿನಿ, ಬೆಂಗಳೂರು

ಸ್ಥಳೀಯ ಸಂಸ್ಥೆಗಳ ಚುನಾವಣೆಗಳ ಹಿನ್ನೆಲೆಯಲ್ಲಿ, ಕರ್ನಾಟಕ ಸರ್ಕಾರವು 'ವಿಬಿ-ಜಿ ರಾಮ್ ಜಿ' ಯೋಜನೆಯಡಿ ಅನುಮೋದಿತವಾದ ಪ್ರತಿ ಕಾಮಗಾರಿಗೆ, ಟೆಂಡರ್ ಕರೆಯುವ ಅಗತ್ಯವಿಲ್ಲದೆಯೇ, 5 ಲಕ್ಷ ರೂಪಾಯಿ ಮೌಲ್ಯದ ಸಾಮಗ್ರಿಗಳನ್ನು ನೇರವಾಗಿ ಖರೀದಿಸಲು ಗ್ರಾಮ ಪಂಚಾಯಿತಿಗಳಿಗೆ ಅನುಮತಿ ನೀಡಿದೆ.

ಈ ಕ್ರಮವು ಗ್ರಾಮೀಣ ಅಭಿವೃದ್ಧಿ ಕಾಮಗಾರಿಗಳನ್ನು ತ್ವರಿತಗೊಳಿಸಲು, ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಮತ್ತು ಬರಗಾಲದ ಕಾರಣದಿಂದಾಗಿ ಜನರು ಕೆಲಸ ಅರಸಿ ಬೇರೆಡೆಗೆ ವಲಸೆ ಹೋಗುವುದನ್ನು ತಡೆಯಲು ಸಹಾಯ ಮಾಡುತ್ತದೆ. ಕರ್ನಾಟಕದಲ್ಲಿ ಒಟ್ಟು 6,000 ಗ್ರಾ.ಪಂ.ಗಳಿವೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ನವೆಂಬರ್ 2 ರಂದು ಹೊರಡಿಸಿದ ಆದೇಶದ 'ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯಿದೆ, 1999'ರ ಸೆಕ್ಷನ್ 4(ಜಿ) ಅಡಿಯಲ್ಲಿ ಒಂದು ವರ್ಷದ ಅವಧಿಗೆ ಈ ವಿನಾಯಿತಿಯನ್ನು ನೀಡಲಾಗಿದೆ.

ರಾಜಾಜಿನಗರದಲ್ಲಿ 7 ಮಂದಿ ಹತ್ಯೆ ಸುದ್ದಿ ಕೇಳಿ ಬೆಚ್ಚಿಬಿದ್ದ ಸ್ಥಳೀಯರು!

• ಉದಯವಾಹಿನಿ, ಬೆಂಗಳೂರು

ತನ್ನ ಕುಟುಂಬದ ಏಳು ಮಂದಿಯನ್ನು ಹತ್ಯೆ ಮಾಡಿದ ಆರೋಪ ಎದುರಿಸುತ್ತಿರುವ ಬೆಂಗಳೂರಿನ ಕ್ಯಾಬ್ ಡ್ರೈವರ್ ಇಂದುಶೇಖರ್ ಒರಟು ಸ್ವಭಾವದ, ಸದಾ ಜಗಳವಾಡುವ ವ್ಯಕ್ತಿಯಾಗಿದ್ದ. ಸ್ಥಳೀಯರೊಂದಿಗೆ ಆಗಾಗ್ಗೆ ಜಗಳಕ್ಕೆ ಇಳಿಯುತ್ತಿದ್ದ ಆತ, ಸಣ್ಣಪುಟ್ಟ ವಿಚಾರಗಳಿಗೂ ಬೆದರಿಕೆ ಹಾಕಿ ಗಲಾಟೆ ಸೃಷ್ಟಿಸುತ್ತಿದ್ದ ಎಂದು ನೆರೆಹೊರೆಯವರು ಹೇಳುತ್ತಾರೆ.

ಇಂದುಶೇಖರ್ ವಾಸವಿದ್ದ ಕಟ್ಟಡದಲ್ಲಿನ ಬಾಡಿಗೆದಾರರೊಬ್ಬರು ಜೊತೆ ಮಾತನಾಡಿ, ಆತನ ವರ್ತನೆಯಿಂದಾಗಿ ಬಿಲ್ಡಿಂಗ್ ನ ಇತರ ಬಾಡಿಗೆದಾರರು ಆತನೊಂದಿಗೆ ಸಂಪರ್ಕ ಇಟ್ಟುಕೊಳ್ಳುತ್ತಿರಲಿಲ್ಲ ಎಂದು ತಿಳಿಸಿದ್ದಾರೆ. ಪಾರ್ಕಿಂಗ್ ವಿಚಾರ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದಂತೆ ಆತ ಆಗಾಗ್ಗೆ ಜಗಳವಾಡುತ್ತಿದ್ದ.

ಮೀಸಲಾತಿ ಅನುಕೂಲ ಪಡೆದವರಿಗೆ ಮತ್ತೆ ಮತ್ತೆ ಸೌಲಭ್ಯ

• ಉದಯವಾಹಿನಿ, ಬೆಂಗಳೂರು


ಉದಯವಾಹಿನಿ ಚಿತ್ರ

ಡಾ.ಬಿ.ಆರ್.ಅಂಬೇಡ್ಕರ್ ಅವರ ಶ್ರಮದ ಫಲವಾಗಿ ಅನುಷ್ಠಾನಕ್ಕೆ ಬಂದ ಮೀಸಲಾತಿ ಅನುಕೂಲವನ್ನು ಪಡೆದವರೇ ಮತ್ತೆ ಮತ್ತೆ ಪಡೆಯುತ್ತಿದ್ದಾರೆ ಎಂದು ಕೇಂದ್ರದ ಸಚಿವ ಎಚ್.ಡಿ. ಕುಮಾರಸ್ವಾಮಿ ಬೇಸರ ವ್ಯಕ್ತಪಡಿಸಿದ್ದಾರೆ.

ನಗರದಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ಅಖಿಲ ಭಾರತ ದಲಿತ ಕ್ರಿಯಾ ಸಮಿತಿ ಆಯೋಜಿಸಿದ್ದ ಚಿ.ನಾ. ರಾಮು ಬರೆದಿರುವ 'ಬಲಿತ ದಲಿತ ತುಳಿತ; ನನ್ನ ಜನ ಅನಾಥ' ಕೃತಿಯ ಮೂರನೇ ಮುದ್ರಣದ ಆವೃತ್ತಿಯನ್ನು ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು. 70ರ ದಶಕದಿಂದಲೂ ಸತತವಾಗಿ ವಿಧಾನಸಭೆ, ಲೋಕಸಭೆ, ರಾಜ್ಯಸಭೆಗೆ ಹೋಗುತ್ತಾ ಶಾಸಕರಾಗಿ, ಪ್ರತಿಪಕ್ಷ ನಾಯಕರಾಗಿ, ಸಂಸದರಾಗಿ, ಸಂಸತ್ತಿನ ಪ್ರತಿಪಕ್ಷ ನಾಯಕರಾಗಿ, ಕೇಂದ್ರ ಮತ್ತು ರಾಜ್ಯದ ಸಚಿವರಾಗಿ ನಿರಂತರವಾಗಿ ಅಧಿಕಾರ ಅನುಭವಿಸುತ್ತಾ ಬಂದಿದ್ದಾರೆ. ಅವರು ದುರ್ಬಲ ಸ್ಥಿತಿಯಿಂದ ಸಬಲರಾದ ಮೇಲೆಯೂ ತಾವು ಅನುಭವಿಸುತ್ತಿರುವ ಮೀಸಲು ಸೌಲಭ್ಯವನ್ನು ದುರ್ಬಲ ದಲಿತರಿಗೆ ವರ್ಗಾಯಿಸಲು ತಯಾರಿಲ್ಲ ಎಂದು ಅವರು ಹೇಳಿದರು. ಇತ್ತೀಚೆಗೆ ನಾನು ರಾಜ್ಯದ ಸಚಿವರೊಬ್ಬರ ಬಗ್ಗೆ 'ಬಲಿತ ದಲಿತ' ಎಂಬ ಪದಬಳಕೆ ಮಾಡಿದ್ದು, ವಿವಾದಕ್ಕೆ ಕಾರಣವಾಗಿದೆ. ಕ್ಷಮೆಯಾಚಿಸಬೇಕು ಎಂದು ಆ ಸಚಿವರು, ಇನ್ನೂ ಹಲವರು ಒತ್ತಾಯ ಮಾಡಿದ್ದನ್ನು ನಾನು ಗಮನಿಸಿದ್ದೇನೆ. ಕೆನೆಪದರ ವ್ಯವಸ್ಥೆಯನ್ನು ಅನುಷ್ಠಾನ ಮಾಡಲು ಕೆಲ ಪ್ರಭಾವಿಗಳು ಬಿಡುತ್ತಿಲ್ಲ. ಅಲ್ಲಿಗೆ ದುರ್ಬಲರು ತಮ್ಮ ಸರಿಸಮಾನವಾಗಿ ಸಬಲರಾಗಬಾರದು, ಭವಿಷ್ಯದಲ್ಲಿ ಅವರು ತಮಗೆ ರಾಜಕೀಯ ಪ್ರತಿಸ್ಪರ್ಧಿಗಳಾಗಬಾರದು ಎಂಬ ಕಾರಣಕ್ಕೆ ಬಲಿತ ಪಟ್ಟಭದ್ರರು ಸತತವಾಗಿ ಪ್ರಯತ್ನ ಮಾಡಿಕೊಂಡೇ ಬರುತ್ತಿದ್ದಾರೆ ಎಂದು ಅವರು ದೂರಿದರು.

ನಾಲ್ವರು ಐಎಎಸ್ ಅಧಿಕಾರಿಗಳ ದಿಢೀರ್ ವರ್ಗಾವಣೆ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ನಾಲ್ವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಗ್ರೇಟರ್ ಬೆಂಗಳೂರು ಪ್ರಾಧಿಕಾರ ಶಾಲಾ ಶಿಕ್ಷಣ ಇಲಾಖೆ ಹಾಗೂ ಉತ್ತರ ಕನ್ನಡ ಮತ್ತು ಶಿವಮೊಗ್ಗ ಜಿಲ್ಲಾಧಿಕಾರಿಗಳ ಹುದ್ದೆಗಳಲ್ಲಿ ಬದಲಾವಣೆ ಮಾಡಲಾಗಿದೆ.

ಜಿಬಿಎ ವಿಶೇಷ ಆಯುಕ್ತರಾಗಿ ಕೆ. ಲಕ್ಷ್ಮಿಪ್ರಿಯಾ ಅವರನ್ನು ನೇಮಕ ಮಾಡಲಾಗಿದ್ದರೆ, ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾಗಿದ್ದ ಪ್ರಭುಲಿಂಗ ಕವಳಿಕಟ್ಟಿ ಅವರನ್ನು ಶಾಲಾ ಶಿಕ್ಷಣ ಇಲಾಖೆಯ ಆಯುಕ್ತರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಇನ್ನು ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿ ಕೆ. ಲಕ್ಷ್ಮಿಪ್ರಿಯಾ ಅವರ ಸ್ಥಾನಕ್ಕೆ ಬೋಯರ್ ಹರ್ಷಲ್ ನಾರಾಯಣರಾವ್ ಅವರನ್ನು ನೇಮಕ ಮಾಡಲಾಗಿದೆ. ಶಿವಮೊಗ್ಗ ಜಿಲ್ಲೆಯ ಜಿಲ್ಲಾಧಿಕಾರಿಯಾಗಿ ಪ್ರಕಾಶ್ ಜಿ.ಟಿ. ನಿಟ್ಟಳ್ಳಿ ಅವರನ್ನು ವರ್ಗಾವಣೆ ಮಾಡಿ ಸರ್ಕಾರ ಆದೇಶಿಸಿದೆ.

ನ. 13ಕ್ಕೆ ಬೆಂಗಳೂರಿಗೆ ಪ್ರಧಾನಿ ಮೋದಿ ಆಗಮನ

• ಉದಯವಾಹಿನಿ, ಬೆಂಗಳೂರು

ನವೆಂಬರ್ 13ರಂದು ಪ್ರಧಾನಿ ನರೇಂದ್ರ ಮೋದಿ ಅವರು ಬೆಂಗಳೂರಿಗೆ ಭೇಟಿ ನೀಡಲಿದ್ದು ನಮ್ಮ ಮೆಟ್ರೋದ ಬಹುನಿರೀಕ್ಷಿತ 'ಪಿಂಕ್ ಲೈನ್' ಅನ್ನು ಉದ್ಘಾಟಿಸಲಿದ್ದಾರೆ. ಮೊದಲ ಹಂತದಲ್ಲಿ ಕಾಳೇನ ಅಗ್ರಹಾರದಿಂದ ತಾವರೆಕೆರೆವರೆಗಿನ ನಮ್ಮ ಮೆಟ್ರೋ ಮಾರ್ಗ ಉದ್ಘಾಟನೆಯಾಗಲಿದೆ. ನವೆಂಬರ್ 13ರಂದು ಬೆಳಗ್ಗೆ ಪ್ರಧಾನಿ ನರೇಂದ್ರ ಮೋದಿ ಅವರು ದೆಹಲಿಯಿಂದ ಹೊರಟು ಬೆಳಗ್ಗೆ 10.5ಕ್ಕೆ ಬೆಂಗಳೂರಿನ ಏರ್ ಪೋರ್ಟ್‌ಗೆ ಆಗಮಿಸಲಿದ್ದಾರೆ. 12.40ಕ್ಕೆ ತಾವರೆಕರೆ ಮೆಟ್ರೋ ರೈಲು ನಿಲ್ದಾಣಕ್ಕೆ ಆಗಮಿಸಲಿದ್ದು ಮಧ್ಯಾಹ್ನ 12.45ಕ್ಕೆ ಹಸಿರು ನಿಶಾನೆ ತೋರಲಿದ್ದಾರೆ. ನಂತರ ಮೆಟ್ರೋನಲ್ಲಿ ಐಐಎಂಬಿ ನಿಲ್ದಾಣದವರೆಗೆ ಪ್ರಯಾಣ ಮಾಡಲಿದ್ದಾರೆ.ಐಐಎಂಬಿ ಆಡಿಟೋರಿಯಂನಲ್ಲಿ ವಿವಿಧ ಶಂಕುಸ್ಥಾಪನೆ, ರಾಷ್ಟ್ರಕ್ಕೆ ಸಮರ್ಪಣೆ ಮತ್ತು ಯೋಜನೆಗಳಿಗೆ ಹಸಿರು ನಿಶಾನೆ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ. ಮಧ್ಯಾಹ್ನ 2.30ಕ್ಕೆ ಬೆಂಗಳೂರಿನಿಂದ ಹೆಲಿಕಾಪ್ಟರ್ ಮೂಲಕ ಮೈಸೂರಿಗೆ ಪ್ರಯಾಣಿಸಲಿದ್ದು ಅಲ್ಲಿ ಮಧ್ಯಾಹ್ನ 3.30ಕ್ಕೆ ಕೆ.ಸಿ. ಲೇಔಟ್ ಪಾರ್ಕ್ ನಲ್ಲಿ ಭಾರತ್ ವ್ಯಾನ್ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಾರೆ.

ಕಸಾಪ ಅಸ್ಮಿತೆಯ ಉಳಿವಿಗೆ ನನಗೆ ಬೆಂಬಲ ನೀಡಿ : ಕಸಾಪ ಅಧ್ಯಕ್ಷ ಆಕಾಂಕ್ಷಿ ಡಾ.ಸಿ.ಸೋಮಶೇಖರ

• ಉದಯವಾಹಿನಿ, ರಾಮನಗರ

ದಾರ್ಶನಿಕ ಆಡಳಿತಗಾರು ಕನ್ನಡ ಸಾಹಿತ್ಯ ಪರಿಷತ್ತನ್ನು ಕಟ್ಟಿದ್ದು ಅಧಿಕಾರದಲ್ಲಿದ್ದವರು ಕಸಾಪ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧೆ ಮಾಡಬಾರದು ಎಂಬ ನಿಲುವು ಸಮಂಜಸವಲ್ಲ ಎಂದು ಡಾ.ಸಿ.ಸೋಮಶೇಖರ್ ಹೇಳಿದರು.

ನಗರದ ಕರುನಾಡ ಸೇನೆ ಕಚೇರಿಯಲ್ಲಿ ಕಸಾಪ ಅಧ್ಯಕ್ಷ ಸ್ಥಾನದ ಚುನಾವಣೆ ಸಂಬಂಧ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಕೃಷ್ಣರಾಜ ಒಡೆಯರ್, ವಿಶ್ವೇಶ್ವರಯ್ಯ, ಎಚ್.ಎಲ್.ನಾಗೇಗೌಡ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್ ಅವರಂತಹ ದಾರ್ಶನಿಕ ಆಡಳಿತಗಾರರು ಸೇರಿದಂತೆ ಹಲವರು ಆಡಳಿತದ ಮೂಲಕ ಸಾಹಿತ್ಯ ಕ್ಷೇತ್ರ ಕಟ್ಟಿದರು. ಹೀಗಾಗಿ ಕಸಾಪ


ಉದಯವಾಹಿನಿ ಚಿತ್ರ

ಚುನಾವಣೆಗೆ ಸ್ಪರ್ಧೆ ಮಾಡುತ್ತಿದ್ದೇನೆ ಎಂದರು.

ಕಸಾಪ ಅಧ್ಯಕ್ಷ ಸ್ಥಾನಕ್ಕೆ ಅಧಿಕಾರಿಗಳು ಸ್ಪರ್ಧೆ ಮಾಡಬಾರದು ಎಂಬುದು ತರವಲ್ಲ. ನಾನು ಅಧಿಕಾರವನ್ನು ಸೇವೆ ಎಂದು ಭಾವಿಸಿದ್ದೇನೆ. ಕಸಾಪ ಅಧ್ಯಕ್ಷ ಸ್ಥಾನ ನನಗೆ ಮತ್ತಷ್ಟು ದೊಡ್ಡ ಸೇವೆ ಮಾಡಲು ಅವಕಾಶ ನೀಡಲಿದೆ ಎಂದು ಆಶಯ ವ್ಯಕ್ತಪಡಿಸಿದರು.

ಕನ್ನಡ ಸಾಹಿತ್ಯ ಮಕ್ಕಳಿಗೆ, ಯುವಕರಿಗೆ, ಮಹಿಳೆಯರಿಗೆ ತಲುಪುವಂತಾಗಬೇಕು. ಈ ನಿಟ್ಟಿನಲ್ಲಿ ಸಾಹಿತ್ಯ ಪರಿಷತ್ತನ್ನು ಉತ್ತುಂಗಕ್ಕೆ ಕೊಂಡೊಯ್ಯಲಾಗುವುದು. ಸಾಹಿತ್ಯ ಪರಿಷತ್ತು ಕನ್ನಡಿಗನ ಅಸ್ಮಿತೆಯಾಗಬೇಕು. ಗಡಿ ನಾಡಿನ ಶಾಲೆಗಳ ರಕ್ಷಣೆಗೆ ಪ್ರಮುಖ ಆದ್ಯತೆ ನೀಡಲಾಗುವುದು ಎಂದರು. ಹಿರಿಯ ಸಾಹಿತಿ ತಲಕಾಡು ಡಾ. ಚಿಕ್ಕರಂಗೇಗೌಡ ಮಾತನಾಡಿ, ಕನ್ನಡ ಸಾಹಿತ್ಯ ಪರಿಷತ್ತಿಗೆ ಇಂದು ದಕ್ಷ ಮತ್ತು ಪ್ರಾಮಾಣಿಕ ವ್ಯಕ್ತಿ ಆಯ್ಕೆ ಆಗಬೇಕಾಗಿದ್ದು ಅಂತಹವರನ್ನು ಆಯ್ಕೆ ಮಾಡುವ ಜವಾಬ್ದಾರಿ ಕನ್ನಡಿಗರ ಮೇಲಿದ್ದು, ಐಎಎಸ್ ಅಧಿಕಾರಿಯಾಗಿ ಉತ್ತಮ ಕೆಲಸ ಮಾಡಿರುವ ಸೋಮಶೇಖರ್ ಅವರು ಸೂಕ್ತವಾಗಿದ್ದಾರೆ ಎಂದು ಅಭಿಪ್ರಾಯಪಟ್ಟರು.ಇಂದು ಕನ್ನಡ ಭಾಷೆಯು ಎದುರಿಸುತ್ತಿರುವ ಹತ್ತು ಹಲವು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾಗಿದೆ. ಕಸಾಪ ಸಾಹಿತಿಗಳು ಮತ್ತು ಹೋರಾಟಗಾರರಿಗೆ ಮಾತ್ರ ಸೀಮಿತವಲ್ಲ. ಎಲ್ಲರನ್ನು ಇದು ಒಳಗೊಂಡಿದೆ. ಇಡಿ ವಿಶ್ವದಲ್ಲಿ ಭಾಷಾ ಸಂಘಟನೆಯೊಂದಕ್ಕೆ ಹೆಚ್ಚು ಸದಸ್ಯರನ್ನು ಹೊಂದಿರುವ ಏಕೈಕ ಸಂಸ್ಥೆ ಕಸಾಪ ಎಂದು ಹೇಳಿದರು. ಹಿರಿಯ ಸಾಹಿತಿ ಪಾಲನೇತ್ರ, ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಯೋಗಾನಂದ, ಪಿ.ಎಲ್.ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಶಿವಕುಮಾರಸ್ವಾಮಿ, ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಜಗದೀಶ್, ಸಂಸ್ಕೃತಿ ಸೌರಭ ಟ್ರಸ್ಟ್ ಅಧ್ಯಕ್ಷ ರಾ.ಬಿ.ನಾಗರಾಜ್, ಕನಕಪುರ ಕಸಾಪ ಮಾಜಿ ಅಧ್ಯಕ್ಷರಾದ ಆರ್.ವಿ.ನಾರಾಯಣ, ಶಿವಲಿಂಗಯ್ಯ ಮತ್ತಿತರರು ಉಪಸ್ಥಿತರಿದ್ದರು.

ದೇವಾಲಯದಲ್ಲಿ ಅವ್ಯವಹಾರ ಆರೋಪ ಶುದ್ಧಸುಳ್ಳು

ಕರಗ ಮಹೋತ್ಸವದ ವೇಳೆ ಭಕ್ತರಿಂದ 28 ಲಕ್ಷ ರೂ ಸಂಗ್ರಹವಾಗಿದೆ ಎಂದು ದೀಪಕ್ ಅವರು ಆರೋಪಿಸಿದ್ದಾರೆ. ಇದು ವಾಸ್ತವಕ್ಕೆ ದೂರವಾದದ್ದು

• ಉದಯವಾಹಿನಿ, ರಾಮನಗರ

1 ಅಡಮಾನ ಇಟ್ಟಿರುವ ಬೆಳ್ಳಿ ತಟ್ಟೆ, ನನ್ನ ಸ್ವಂತದ್ದು

2 ಆರತಿ ಬೆಳಗಲು ದೇವಾಲಯಕ್ಕೆ ತರುವುದು ವಾಡಿಕೆ

3 ಮಹೋತ್ಸವದ ವೇಳೆ 28 ಲಕ್ಷ ರೂ ಸಂಗ್ರಹವಾಗಿದೆ

ನಗರದ ಶ್ರೀ ಬನ್ನಿಮಹಾಕಾಳಿ ಅಮ್ಮನವರ ದೇವಾಲಯದ ಸೇವಾ ಸಮಿತಿಯ ಕಾರ್ಯದರ್ಶಿ ದೀಪಕ್ ಸೇರಿದಂತೆ ಉಳಿದ ಪದಾಧಿಕಾರಿಗಳ ವಿರುದ್ಧ ನೀಡಿದ್ದ ಹೇಳಿಕೆಗಳೆಲ್ಲವೂ ಸತ್ಯಕ್ಕೆ ದೂರವಾಗಿದ್ದು, ದೇವಾಲಯದ ಸಮಿತಿ ಯಾವುದೇ ಅವ್ಯವಹಾರದಲ್ಲಿ ತೊಡಗಿಲ್ಲ ಎಂದು ಸಮಿತಿಯ ಅಧ್ಯಕ್ಷ ನಿರಂಜನ್ ಸ್ಪಷ್ಟನೆ ನೀಡಿದರು. ಮಂಡಿಪೇಟೆಯಲ್ಲಿರುವ ಶ್ರೀ ಬನ್ನಿ ಮಹಾಕಾಳಿ ಅಮ್ಮನವರ


ಉದಯವಾಹಿನಿ ಚಿತ್ರ

ದೇವಾಲಯದಲ್ಲಿ ಆಯೋಜಿಸಿದ್ದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು. ಕಾರ್ಯದರ್ಶಿ ದೀಪಕ್ ಹೊರೆಸಿರುವ ಎಲ್ಲಾ ಆರೋಪಗಳು ಸುಳ್ಳು. ಅಡಮಾನ ಇಟ್ಟಿರುವ ಬೆಳ್ಳಿ ತಟ್ಟೆ, ನನ್ನ ಸ್ವಂತದ್ದು, ವಿಶೇಷ ಸಂದರ್ಭಗಳಲ್ಲಿ ನಮ್ಮ ಕುಟುಂಬ ಅದೇ ಬೆಳ್ಳಿ ತಟ್ಟೆಯನ್ನು ತಂಬಿಟ್ಟು ಆರತಿ ಬೆಳಗಲು ದೇವಾಲಯಕ್ಕೆ ತರುವುದು ವಾಡಿಕೆ. ಅದನ್ನು ನಾನು ನನ್ನ ವೈಯಕ್ತಿಕ ಕಾರಣಕ್ಕೆ ಅಡಮಾನ ಇಟ್ಟಿದ್ದೇನೆ. ಆದರೆ ಆ ಬೆಳ್ಳಿ ತಟ್ಟೆ ದೇವಾಲಯಕ್ಕೆ ಸೇರಿದ್ದಲ್ಲ ಎಂದು ಸ್ಪಷ್ಟನೆ ನೀಡಿದರು. ದೇವಾಲಯ ಜೀರ್ಣೋದ್ದಾರ ಕಾರ್ಯ ಪ್ರಗತಿಯಲ್ಲಿದೆ, ತಾವು ತಮ್ಮ ವೈಯಕ್ತಿಕ ಹಣವನ್ನು ಇಲ್ಲಿ ವೆಚ್ಚ ಮಾಡಿರುವುದಾಗಿ ದೀಪಕ್ ಅವರು ಹೇಳಿಕೆ ನೀಡಿದ್ದಾರೆ. ಆದರೆ ಈ ವಿಚಾರ ಸಮಿತಿಯ ಯಾರ ಗಮನದಲ್ಲೂ ಇಲ್ಲ, ಅವರೂ ಸಹ ಸಮಿತಿಯ ಸದಸ್ಯರಲ್ಲಿ ಈ ಮಾಹಿತಿಯನ್ನು ಹಂಚಿಕೊಂಡಿಲ್ಲ, ಕಾರ್ಯದರ್ಶಿಯಾಗಿ ಅವರು ಸಮಿತಿಯ ಸಭೆಗಳನ್ನು ಆಯೋಜನೆ ಮಾಡಲಿಲ್ಲ ಎಂದರು. ನಗರಸಭೆಯ ಮೂಲಕ ಹೊಸೂರು ಜಗದೀಶ್ ಎಂಬುವವರಿಗೆ ಟೆಂಡರ್ ಆಗಿತ್ತು.

ಎಲ್ಲಾ ನಿರ್ಮಾಣ ಕಾರ್ಯ ಪೂರ್ಣವಾಗಿದೆ. ದೇವಾಲಯ ಸಮಿತಿಯನ್ನು ತಹಶೀಲ್ದಾರರು ರಚಿಸಿದ್ದಾರೆ. ಈ ಸಮಿತಿಯ ಅವಧಿ 2026ರ ನವೆಂಬರ್‌ನಲ್ಲಿ ಮುಕ್ತಾಯವಾಗುತ್ತದೆ. ಹೀಗಾಗಿ ಎಲ್ಲಾ ಲೆಕ್ಕಗಳನ್ನು ಸ್ಪಷ್ಟವಾಗಿ ಬರೆದು, ಆಡಿಯಿಟರ್ ಅವರಿಂದ ಪ್ರಮಾಣ ಪಡೆದುಕೊಂಡು, ಅದನ್ನು ತಹಸೀಲ್ದಾರರಿಗೆ ಒಪ್ಪಿಸಿದ ನಂತರ ಅದರ ಮಾಹಿತಿಯನ್ನು ಸಾರ್ವಜನಿಕವಾಗಿ ಮಾಧ್ಯಮಗಳ ಮೂಲಕ ಬಿಡುಗಡೆ ಮಾಡುವುದಾಗಿ ಅಧ್ಯಕ್ಷ ನಿರಂಜನ್ ತಿಳಿಸಿದರು. ದೇವಾಲಯ ಪುನರ್‌ನಿರ್ಮಾಣದ ಸಂದರ್ಭದಲ್ಲಿ ಉತ್ಪಾದನಕ್ಕೆ ವೆಚ್ಚವಾದ ಹಣವನ್ನು ನನಗೆ ಒಪ್ಪಲಾಗಿತ್ತು. ವೆಚ್ಚವಾಗಿ 6.60 ಲಕ್ಷ ರೂ ನಾನು ಸಮಿತಿಗೆ ಪಾವತಿಸಬೇಕಾಗಿತ್ತು. 4.50 ಲಕ್ಷ ರೂ ಕೊಟ್ಟಿದ್ದೇನೆ. ಉಳಿದ 2.10 ಲಕ್ಷ ರೂಗಳು ತಾಂತ್ರಿಕ ಕಾರಣಕ್ಕೆ ವಿಳಂಬವಾಗಿ ಕೊಟ್ಟಿದ್ದೇನೆ. ಅಷ್ಟರಲ್ಲಾಗಲೇ ಕಾರ್ಯದರ್ಶಿ ದೀಪಕ್ ನನ್ನ ಬಳಿ ಚೆಕ್ ಪಡೆದುಕೊಂಡಿದ್ದರು. ಬಾಕಿ ಹಣವನ್ನು ನಾನು ತೀರಿಸಿದ್ದೇನೆ, ನನ್ನ ಚೆಕ್ ವಾಪಸ್ಸಾಗಲಿಲ್ಲ ಎಂದು ಕಾರ್ಯದರ್ಶಿ ದೀಪಕ್ ವಿರುದ್ಧ ಆರೋಪಿಸಿದರು.

ನಗರದ ಗಣೇಶ್ ಜ್ಯುವೆಲರ್ಸ್ ಮಾಲೀಕ ಲಕ್ಷ್ಮಣ್ 1 ಲಕ್ಷ ರೂ ಮತ್ತು ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ 50 ಸಾವಿರ ರೂ ದೇಣಿಗೆ ನೀಡಿದ್ದರು.

ಕರಗ ಮಹೋತ್ಸವದ ವೇಳೆ ಭಕ್ತರಿಂದ 28 ಲಕ್ಷ ರೂ ಸಂಗ್ರಹವಾಗಿದೆ ಎಂದು ದೀಪಕ್ ಅವರು ಆರೋಪಿಸಿದ್ದಾರೆ. ಇದು ವಾಸ್ತವಕ್ಕೆ ದೂರವಾದದ್ದು. 28 ಲಕ್ಷ ಸಂಗ್ರಹವಾಗಬೇಕಾದರೆ ಎಷ್ಟು ಸಾವಿರ ಅಥವಾ ಲಕ್ಷ ಮಂದಿ ದೇವಾಲಯಕ್ಕೆ ಭೇಟಿ ಕೊಟ್ಟಿರಬೇಕು ಎಂಬ ಲೆಕ್ಕಾಚಾರ ಅವರಿಗೆ ಅರಿವಿಲ್ಲ ಎಂದರು.-ಅಧ್ಯಕ್ಷ ನಿರಂಜನ್

ದೀಪಕ್ ವಿರುದ್ಧ ದೂರು

ಈ ವಿಷಯವನ್ನು ತಾವು ತಹಸೀಲ್ದಾರರ ಗಮನಕ್ಕೂ ತರಲಾಗಿದೆ. ಕಾರ್ಯದರ್ಶಿ ದೀಪಕ್ ಹೊರೆಸಿರುವ ಎಲ್ಲಾ ಆರೋಪಗಳು ಸುಳ್ಳುಗಳೇ ಆಗಿವೆ. ದೀಪಕ್ ವಿರುದ್ಧ ದೂರು ನೀಡಿದ್ದು, ಈ ಹಿಂದೆಯು ಅವರ ವಿರುದ್ಧ ಸಾಕಷ್ಟು ದೂರು ಪೊಲೀಸ್ ಠಾಣೆಯಲ್ಲಿ ದಾಖಲಾಗಿತ್ತು. ಸದ್ಯದಲ್ಲೇ ಆಡಿಯಿಟ್ ವರದಿ ಸಲ್ಲಿಕೆಯಾಗಲಿದೆ.

ಕನ್ನಡ ಪುಸ್ತಕಗಳನ್ನು ಓದುವುದು ದೈನಂದಿನ ಜೀವನದಲ್ಲಿ ರೂಢಿಸಿಕೊಳ್ಳಬೇಕು

• ಉದಯವಾಹಿನಿ, ಕೆ.ಆರ್.ಪುರ:

ಕನ್ನಡದಲ್ಲಿ ಮಾತನಾಡುವುದು, ಕನ್ನಡ ಪುಸ್ತಕಗಳನ್ನು ಓದುವುದು ದೈನಂದಿನ ಜೀವನದಲ್ಲಿ ರೂಢಿಸಿಕೊಳ್ಳಬೇಕು. ಕನ್ನಡ ನಾಡು ನುಡಿ, ಸಂಸ್ಕೃತಿ, ಭಾಷೆಯನ್ನು ನಾವು ಗೌರವಿಸಿದಾಗ ಮಾತ್ರ ಅದಕ್ಕೆ ಉಳಿಗಾಲವಿರುತ್ತದೆ ಎಂದು ಕಾಲೇಜಿನ ಜಂಟಿ ನಿರ್ದೇಶಕರಾದ ಬೆಂಜಮೀನ್ ಬೆನಿಲ್ ತಿಳಿಸಿದರು. ಮಹದೇವಪುರ ಕ್ಷೇತ್ರದ ಮಾರತ್ತಹಳ್ಳಿಯ ಹಿಂದುಸ್ತಾನ್ ಬಿಸಿನೆಸ್ ಸ್ಕೂಲ್ ಹಾಗೂ ಕಾಲೇಜುವತಿಯಿಂದ ಆಯೋಜಿಸಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಿ ಮತನಾಡಿದ ಅವರು. ಹಿಂದುಸ್ತಾನ್ ಕಾಲೇಜಿನ ಪ್ರಾಂಶುಪಾಲರಾದ ಡಾ.ಕೆ ಸುಮಿತ, ಇಂದಿನ ಆಧುನಿಕ ಜಗತ್ತಿನಲ್ಲಿ ನಾವು ಬೇರೆ ಭಾಷೆಗಳನ್ನು ಕಲಿಯುವುದು ತಪ್ಪಲ್ಲ. ಆದರೆ ಜ್ಞಾನಕ್ಕಾಗಿ ಬೇರೆ ಭಾಷೆ ಕಲಿತರೂ, ಭಾವನೆಗಾಗಿ ನಮ್ಮ ಮಾತೃಭಾಷೆಯಾದ ಕನ್ನಡವನ್ನೇ ಬಳಸಬೇಕು ಎಂದರು. ಇದೇವೇಳೆ ವಿದ್ಯಾರ್ಥಿಗಳು ವಿವಿಧ ರಾಜ್ಯದ ಸಂಸ್ಕತಿಗಳ ವೇಷಭೂಷಣ ತೊಟ್ಟು ಕಲಾ ಪ್ರದರ್ಶನ ಮಾಡಿದರು.

ಉಪ ನಿರ್ದೇಶಕರಾದ ಏರ್ ಕಮಾಂಡರ್ ಸಂಜಯ್ ಕುಮಾರ್ ಮಧ್ವಾವಿ, ಪರೀಕ್ಷಾ ವ್ಯವಸ್ಥಾಪಕರಾದ ವಿಂಗ್ ಕಮಾಂಡರ್ ಆರ್. ಶಂಕರ್ , ತರಗತಿ ವ್ಯವಸ್ಥಾಪಕರಾದ ಪ್ರೇಮನಾರಾಯಣ್ ಓಜಾ, ನಂದೀಶ್, ಕನ್ನಡ ಉಪನ್ಯಾಸಕರಾದ ಚಲಪತಿ ಜಿ, ಶಿವರಾಜ್ ಆರ್ ಸೇರಿದಂತೆ ಕಾಲೇಜು ವಿದ್ಯಾರ್ಥಿಗಳು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.


ಉದಯವಾಹಿನಿ ಚಿತ್ರ

ತಿಪಟೂರು ಕ್ರೀಡಾಂಗಣದಲ್ಲಿ ಮಳೆ ಅವಾಂತರ, ಪಂದ್ಯಗಳು ಮುಂದೂಡಿಕೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ತಿಪಟೂರು

ತಾಲ್ಲೂಕಿಗೆ ಸುಸಜ್ಜಿತ ಕ್ರೀಡಾಂಗಣದ ಅಗತ್ಯವಿದೆ ಎಂಬುದು ಮತ್ತೊಮ್ಮೆ ಸಾಬೀತಾಯಿತು. ತಾಲ್ಲೂಕಿನಲ್ಲಿ ವಿಭಾಗ ಹಾಗೂ ರಾಜ್ಯಮಟ್ಟದ ಕ್ರೀಡಾಕೂಟಗಳನ್ನು ಆಯೋಜಿಸುವ ಸಾಮರ್ಥ್ಯವಿದ್ದರೂ ಮೂಲಸೌಕರ್ಯಗಳ ಕೊರತೆಯಿಂದಾಗಿ ಕ್ರೀಡಾಕೂಟಗಳ ನಿರ್ವಹಣೆಗೆ ಅಡ್ಡಿಯಾಗುತ್ತಿದೆ. ಸುರಿದ ಮಳೆಯಿಂದಾಗಿ ಆಟದ ಅಂಕಣಗಳಲ್ಲಿ ನೀರು ನಿಂತಿದ್ದರಿಂದ ಫೈನಲ್ ಪಂದ್ಯಗಳನ್ನು ನಿಗದಿತ ವೇಳೆಯಲ್ಲಿ ನಡೆಸಲು ಸಾಧ್ಯವಾಗಲಿಲ್ಲ. ಪಂದ್ಯಗಳನ್ನು ಮುಂದೂಡಬೇಕಾಯಿತು.ಮಳೆನೀರು ಸರಾಗವಾಗಿ ಹರಿದುಹೋಗುವ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಿತ್ತು.

ಇದರೊಂದಿಗೆ ಕ್ರೀಡಾಂಗಣದಲ್ಲಿ ಪ್ರೇಕ್ಷಕರು ಹಾಗೂ ಆಟಗಾರರಿಗೆ ಸಮರ್ಪಕ ಆಸನ ವ್ಯವಸ್ಥೆಯೂ ಇರಲಿಲ್ಲ. ದೂರದ ಜಿಲ್ಲೆಗಳಿಂದ ಬಂದಿದ್ದ ಕ್ರೀಡಾಭಿಮಾನಿಗಳು ಪಂದ್ಯಗಳನ್ನು ವೀಕ್ಷಿಸಲು ಸೂಕ್ತ ವ್ಯವಸ್ಥೆ ಇಲ್ಲದೆ ತೊಂದರೆ ಅನುಭವಿಸಿದರು. ತಿಪಟೂರು ತಾಲ್ಲೂಕಿನಲ್ಲಿ ಕ್ರೀಡಾ ಚಟುವಟಿಕೆಗಳಿಗೆ ಪೂರಕವಾದ ಸುಸಜ್ಜಿತ ಕ್ರೀಡಾಂಗಣ ನಿರ್ಮಿಸುವುದು ಅಗತ್ಯವಾಗಿದೆ. ಮಳೆನೀರು ಹರಿದು ಹೋಗಲು ವ್ಯವಸ್ಥೆ, ಸುಸಜ್ಜಿತ ಅಂಕಣ, ಪ್ರೇಕ್ಷಕರ ಗ್ಯಾಲರಿ ಹಾಗೂ ಮೂಲಸೌಕರ್ಯ ಕಲ್ಪಿಸಲು ಸರ್ಕಾರ ಮತ್ತು ಜನಪ್ರತಿನಿಧಿಗಳು ಕ್ರಮ ಕೈಗೊಳ್ಳಬೇಕು.

ಮಳೆನೀರು ಸರಾಗವಾಗಿ ಹರಿದುಹೋಗುವ ವ್ಯವಸ್ಥೆ ಇಲ್ಲದಿರುವುದು ಸಮಸ್ಯೆಗೆ ಕಾರಣವಾಗಿತ್ತು. ಮುಂದಿನ ದಿನಗಳಲ್ಲಿ ವಿಭಾಗ ಹಾಗೂ ರಾಜ್ಯ ಮಟ್ಟದ ಪಂದ್ಯಾವಳಿಗಳನ್ನು ಯಾವುದೇ ಅಡಚಣೆಯಿಲ್ಲದೆ ನಡೆಸಲು ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ಕ್ರೀಡಾಭಿಮಾನಿಗಳು ಆಗ್ರಹಿಸಿದ್ದಾರೆ.

ಕಾರ್ಯಗಳಿಗೆ ಅಡೆತಡೆ ಎಸಗಬಾರದು: ಶಾಸಕಿ ರೂಪಶಶಿಧರ್

• ಉದಯವಾಹಿನಿ, ಕೆಜಿಎಫ್

ಕೆಜಿಎಫ್ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆ ಯಾರೇ ಅಡ್ಡಿಪಡಿಸಿದರೂ ತಾವು ಹೆದರುವುದಿಲ್ಲ ಮತ್ತು ಎಲ್ಲಾ ಸವಾಲುಗಳನ್ನು ಮೆಟ್ಟಿ ನಿಂತು ಕ್ಷೇತ್ರಕ್ಕೆ ಬೇಕಾದ ಅನುದಾನ ತಂದು ಕಾಮಗಾರಿಗಳನ್ನು ಪೂರ್ಣಗೊಳಿಸುವುದಾಗಿ ಶಾಸಕಿ ರೂಪಶಶಿಧರ್ ಖಡಕ್ ಎಚ್ಚರಿಕೆ ನೀಡಿದ್ದಾರೆ. ನಗರಸಭೆ ಮತ್ತು ಹದಿನೈದನೇ ಹಣಕಾಸು ಯೋಜನೆಯ ಅನುದಾನದಡಿ ನಗರದ ಕಿಂಗ್ ಜಾರ್ಜ್ ಹಾಲ್ ಆವರಣದಲ್ಲಿ ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಹಾಗೂ ಎಸ್.ಟಿ. ಬ್ಲಾಕ್‌ನಲ್ಲಿ ಎರಡು ಕೋಟಿ ರೂಪಾಯಿ ವೆಚ್ಚದಲ್ಲಿ ಸುಸಜ್ಜಿತ ಉದ್ಯಾನವನಗಳ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಅವರು ಮಾತನಾಡುತ್ತಿದ್ದರು.

ಕ್ಷೇತ್ರದ ಅಭಿವೃದ್ಧಿಗಾಗಿ ಕಷ್ಟಪಟ್ಟು ಅನುದಾನ ತಂದರೆ, ಕೆಲವರು ತಮ್ಮ ಬೇಳೆ ಬೇಯಿಸಿಕೊಳ್ಳಲು ಮತ್ತು ಗುರುತು ಉಳಿಸಿಕೊಳ್ಳಲು ಕಾಮಗಾರಿಗಳ ಗುಣಮಟ್ಟದ ನೆಪ ಒಡ್ಡಿ ಇಲಾಖೆಯ ಕಾರ್ಯದರ್ಶಿಗಳಿಂದ ಹಿಡಿದು ಎಲ್ಲಾ ಹಂತದ ಅಧಿಕಾರಿಗಳಿಗೆ ದೂರು ನೀಡುತ್ತಿದ್ದಾರೆ ಎಂದು ಅವರು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು. ಮೂರು ಕೋಟಿ ರೂಪಾಯಿ ವೆಚ್ಚದಲ್ಲಿ ಎಸ್.ಟಿ. ಬ್ಲಾಕ್‌ನಲ್ಲಿ ಅನಗತ್ಯ ದೂರುಗಳಿಂದ ಅಧಿಕಾರಿಗಳು ಕೆಲವೇ ತಿಂಗಳುಗಳಲ್ಲಿ ವರ್ಗಾವಣೆಗೊಂಡು ಹೋಗುವ ವಾತಾವರಣ ಸೃಷ್ಟಿಯಾಗುತ್ತಿದೆ.

ಬಡಾವಣೆಗಳ ಮರು ಅಭಿವೃದ್ದಿಗೆ ನ.9ರಂದು ಚಾಲನೆ - ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್

ಜೀಗೇನಹಳ್ಳಿ ಅರ್ಕಾವತಿ ಬಡಾವಣೆಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ರಾಮನಗರ :

ನೆನೆಗುದಿಗೆ ಬಿದ್ದಿರುವ ಬಡಾವಣೆಗಳನ್ನು 37.13 ಕೋಟಿ ರೂ ವೆಚ್ಚದಲ್ಲಿ ಮರು ಅಭಿವೃದ್ಧಿ ಪಡಿಸಲಾಗುತ್ತಿದ್ದು ನ.9 ರಂದು ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದೆ ಎಂದು ರಾಮನಗರ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್ ಹೇಳಿದರು. ನಗರದ ಪ್ರಾಧಿಕಾರದ ಕಚೇರಿಯಲ್ಲಿ ಮಾಧ್ಯಮ ಗೋಷ್ಠಿಯಲ್ಲಿ ಮಾತನಾಡಿದ ಅವರು, ಶಾಸಕರ ಅಧ್ಯಕ್ಷತೆಯಲ್ಲಿ ಜೀಗೇನಹಳ್ಳಿ ಅರ್ಕಾವತಿ ಬಡಾವಣೆಯ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡಲಾಗುತ್ತಿದ್ದು, ಹದಿನೈದು ವರ್ಷಗಳ ಹಿಂದೆ ನಿವೇಶನ ಖರೀದಿ ಮಾಡಿರುವ 652 ನಿವೇಶನದಾರರಿಗೆ ಇದು ಪ್ರಯೋಜನವಾಗಲಿದೆ ಎಂದು ಹೇಳಿದರು.

ನೆನೆಗುದಿಗೆ ಬಿದ್ದ ಬಡಾವಣೆಗಳ ಅಭಿವೃದ್ಧಿ ಪಡಿಸಲು ಮಾಜಿ ಸಂಸದ ಡಿ.ಕೆ.ಸುರೇಶ್ ಹೆಚ್ಚಿನ ಕಾಳಜಿ ವಹಿಸಿದ್ದರು. ಇದರಿಂದಾಗಿ ಇಂದು ಮೂರು ಬಡಾವಣೆಗಳ 1661 ನಿವೇಶನದಾರರ ಗೃಹ ನಿರ್ಮಾಣ ಮಾಡುವ ಕನಸು ನನಸಾಗಿದೆ. ಈ ಪವಿತ್ರ ಕೆಲಸ ಎಲ್ಲಾ ಕೃತಜ್ಞತೆಯು ಮಾಜಿ ಸಂಸದ ಡಿ.ಕೆ.ಸುರೇಶ್ ಹಾಗೂ ಶಾಸಕ ಇಕ್ಬಾಲ್ ಹುಸೇನ್ ಅವರಿಗೆ ಸಲ್ಲುತ್ತದೆ ಎಂದರು. ಈಗಾಗಲೆ ಅರ್ಚಕರಹಳ್ಳಿ ಹೆಲ್ತ್ ಸಿಟಿ ಬಡಾವಣೆಯಲ್ಲಿ 2.98 ಕೋಟಿ ವೆಚ್ಚದಲ್ಲಿ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ.

ಕಣ್ವ ಬಡಾವಣೆಯನ್ನು 18.63 ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ. ಪ್ರಾಧಿಕಾರ ವ್ಯಾಪ್ತಿಯ ಒಟ್ಟು ಮೂರು ಬಡಾವಣೆಗಳಲ್ಲಿ 1661 ನಿವೇಶನಗಳ ಮಾಲೀಕರಿದ್ದು, ಇವರಲ್ಲಿ 1436 ನಿವೇಶನದಾರರು ಅಭಿವೃದ್ಧಿ ಶುಲ್ಕ ಪಾವತಿಸಿದ್ದು, 225 ಜನ ಹಣ ಪಾವತಿ ಮಾಡಬೇಕಾಗಿದ್ದು ಇವರುಗಳು ಕೂಡಲೆ ಹಣ ಪಾವತಿಸಿದಲ್ಲಿ ಅಭಿವೃದ್ಧಿಗೆ ಸಹಕಾರವಾಗಲಿದೆ ಎಂದರು.ಪ್ರಾಧಿಕಾರದ ನಿರ್ದೇಶಕರದ ಬೈರೇಗೌಡ, ಶ್ರೀನಿವಾಸ್, ಶ್ರೀದೇವಿ, ಅಭಿಯಂತರ ಶ್ರೀವತ್ಸ ಇದ್ದರು.

ಡೆಡ್ ಸ್ಟೋರೇಜ್ ಹಂತ ತಲುಪಿದ ಕೆಆರ್ ಎಸ್ ನೀರಿನ ಮಟ್ಟ!

ಕಾವೇರಿ ಜಲಾನಯನ ಪ್ರದೇಶದ ಜಿಲ್ಲೆಗಳಲ್ಲಿ ಕುಡಿಯುವ ನೀರು ಮತ್ತು ನೀರಾವರಿಗಾಗಿ ನೀರಿನ ಲಭ್ಯತೆಯ ಬಗ್ಗೆ ಆತಂಕ ಉಂಟುಮಾಡಿದೆ.


• ಉದಯವಾಹಿನಿ, ಬೆಂಗಳೂರು:

ಕೃಷ್ಣರಾಜ ಸಾಗರ (ಕೆಆರ್‌ಎಸ್) ಜಲಾಶಯದಲ್ಲಿ ನೀರಿನ ಮಟ್ಟವು ಗಣನೀಯವಾಗಿ ಕುಸಿದು 21.9 ಟಿಎಂಸಿ ಅಡಿಗೆ ತಲುಪಿದೆ.ಈ ಜಲಾಶಯದ ಒಟ್ಟು ಸಾಮರ್ಥ್ಯ 49.45 ಟಿಎಂಸಿ ಅಡಿಗಳಷ್ಟಿದೆ. ಮುಂದಿನ ಮುಂಗಾರು ಮಳೆಗಾಲ ಆರಂಭವಾಗಲು ಇನ್ನೂ ಎಂಟು ತಿಂಗಳು ಬಾಕಿ ಇರುವಾಗಲೇ, ಕಾವೇರಿ ಜಲಾನಯನ ಪ್ರದೇಶದ ಜಿಲ್ಲೆಗಳಲ್ಲಿ ಕುಡಿಯುವ ನೀರು ಮತ್ತು ನೀರಾವರಿಗಾಗಿ ನೀರಿನ ಲಭ್ಯತೆಯ ಬಗ್ಗೆ ಆತಂಕ ಉಂಟುಮಾಡಿದೆ.

ಕೆಆರ್‌ಎಸ್ ಮತ್ತು ಕಬಿನಿ ಅಣೆಕಟ್ಟುಗಳು ಕರ್ನಾಟಕದ ಹಲವು ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸುತ್ತವೆ ಮತ್ತು ತಮಿಳುನಾಡಿನ ನೀರಿನ ಅಗತ್ಯಗಳನ್ನು ಪೂರೈಸಲು ಕೂಡ ಇವು ಅತ್ಯಂತ ನಿರ್ಣಾಯಕವಾಗಿವೆ. ಈ ಎರಡೂ ಅಣೆಕಟ್ಟುಗಳಲ್ಲಿ ನೀರಿನ ಮಟ್ಟವು 'ಡೆಡ್ ಸ್ಟೋರೇಜ್' (ಬಳಕೆಗೆ ಲಭ್ಯವಿಲ್ಲದ ಕನಿಷ್ಠ ಮಟ್ಟ) ಹಂತವನ್ನು ತಲುಪುತ್ತಿದೆ.

ಆತಂಕವನ್ನು ಇನ್ನಷ್ಟು ಹೆಚ್ಚಿಸುವಂತೆ, ಕಾವೇರಿ ನೀರು ನಿಯಂತ್ರಣ ಸಮಿತಿಯು ರಾಜ್ಯಕ್ಕೆ ಒಂದು ನಿರ್ದೇಶನ ನೀಡಿದೆ. ಅದರ ಪ್ರಕಾರ, ಶನಿವಾರದಿಂದ ಮುಂದಿನ 15 ದಿನಗಳ ಕಾಲ ಪ್ರತಿದಿನ 3,000 ಕ್ಯೂಸೆಕ್ ನೀರನ್ನು ಬಿಡುಗಡೆ ಮಾಡಬೇಕಾಗಿದೆ. ಇದರರ್ಥ ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳಿಂದ ಸುಮಾರು 4 ಟಿಎಂಸಿ ಅಡಿ ನೀರನ್ನು ಬಿಡುಗಡೆ ಮಾಡಬೇಕಾಗುತ್ತದೆ, ಇದು ಈಗಾಗಲೇ ಕಡಿಮೆಯಾಗಿರುವ ನೀರಿನ ಸಂಗ್ರಹದ ಮೇಲೆ ಮತ್ತಷ್ಟು ಒತ್ತಡವನ್ನು ಉಂಟುಮಾಡಲಿದೆ.

ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರದ ದತ್ತಾಂಶದ


ಉದಯವಾಹಿನಿ ಚಿತ್ರ

1 : ರಾಜ್ಯಕ್ಕೆ ಒಂದು ನಿರ್ದೇಶನ ನೀಡಿದೆ

2 : ನೀರನ್ನು ಬಿಡುಗಡೆ ಮಾಡಬೇಕಾಗಿದೆ

3 : 58 ಟಿಎಂಸಿ ನೀರು ಮಾತ್ರ ಸಂಗ್ರಹವಿದೆ

ಪ್ರಕಾರ, ಕಾವೇರಿ ಜಲಾನಯನ ಪ್ರದೇಶದಲ್ಲಿರುವ ನಾಲ್ಕು ಪ್ರಮುಖ ಜಲಾಶಯಗಳಲ್ಲಿ ಒಟ್ಟು 114.57 ಟಿಎಂಸಿ ಅಡಿ ಸಾಮರ್ಥ್ಯವಿದ್ದರೂ, ಪ್ರಸ್ತುತ 58 ಟಿಎಂಸಿ ಅಡಿ ನೀರು ಮಾತ್ರ ಸಂಗ್ರಹವಿದೆ. ಕಳೆದ ವರ್ಷ ಇದೇ ಅವಧಿಯಲ್ಲಿ ಈ ಜಲಾಶಯದಲ್ಲಿ 111.36 ಟಿಎಂಸಿ ಅಡಿ ನೀರು ಇತ್ತು.ಕೆಎಸ್‌ಎನ್‌ಡಿಎಂಸಿ ಮಾಜಿ ನಿರ್ದೇಶಕ ಜಿ.ಎಸ್. ಶ್ರೀನಿವಾಸ ರೆಡ್ಡಿ ಅವರ ಪ್ರಕಾರ, ನೈಋತ್ಯ ಮುಂಗಾರು ಮುಕ್ತಾಯಗೊಳ್ಳುವ ನವೆಂಬರ್ ತಿಂಗಳಲ್ಲಿ, ಕಾವೇರಿ ಜಲಾನಯನ ಪ್ರದೇಶದ ಜಲಾಶಯಗಳು ಸಾಮಾನ್ಯವಾಗಿ ಶೇಕಡಾ 90 ರಷ್ಟು ಅಥವಾ ಅದಕ್ಕಿಂತ ಹೆಚ್ಚು ಭರ್ತಿಯಾಗಿರಬೇಕಿತ್ತು. ಪ್ರಸ್ತುತ, ಜಲಾಶಯಗಳಲ್ಲಿ ಶೇಕಡಾ 44 ರಷ್ಟು ಮಾತ್ರ ನೀರು ಸಂಗ್ರಹವಿದೆ. ಅಕ್ಟೋಬರ್ ವೇಳೆಗೆ ಪ್ರಮುಖ ಮಳೆಗಾಲ ಮುಗಿಯುತ್ತದೆ ಮತ್ತು ಮುಂದಿನ ಎಂಟು ತಿಂಗಳುಗಳಲ್ಲಿ ಹೆಚ್ಚಿನ ಮಳೆಯಾಗುವ ಸಾಧ್ಯತೆಯಿಲ್ಲ.ಸಾಮಾನ್ಯವಾಗಿ ನವೆಂಬರ್ ತಿಂಗಳಲ್ಲಿ ಗರಿಷ್ಠ ಮಟ್ಟವನ್ನು ತಲುಪಬೇಕಿದ್ದ ಅಂತರ್ಜಲ ಮರುಪೂರಣವು ಈ ಬಾರಿ ತೀರಾ ಕಡಿಮೆಯಾಗಿದೆ. ನೈಋತ್ಯ ಮತ್ತು ಈಶಾನ್ಯ ಮುಂಗಾರು ಮಳೆ ದುರ್ಬಲವಾಗಿದ್ದರಿಂದ, ರೈತರು ಮತ್ತು ಇತರ ಬಳಕೆದಾರರು ಕೊಳವೆಬಾವಿಗಳನ್ನು ಹೆಚ್ಚು ಅವಲಂಬಿಸಬೇಕಾಯಿತು. ಪರಿಣಾಮವಾಗಿ, ಅಂತರ್ಜಲವನ್ನು ಹೊರತೆಗೆಯುವ ಪ್ರಮಾಣ ಹೆಚ್ಚಾಗಿದೆ. ಮುಂದಿನ ತಿಂಗಳುಗಳಲ್ಲಿಯೂ ಇದೇ ಪರಿಸ್ಥಿತಿ ಮುಂದುವರಿಯುವ ಸಾಧ್ಯತೆಯಿದ್ದು, ಇದು ನೀರಿನ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸಲಿದೆ.

ಈ ವರ್ಷ ಜಲಾಶಯಗಳಿಗೆ ಒಳಹರಿವು ಕೂಡ ಸುಮಾರು ಶೇಕಡಾ 60 ರಷ್ಟು ಕಡಿಮೆಯಾಗಿದೆ. ನೀರು ಆವಿಯಾಗುವಿಕೆ ಮತ್ತು ಇತರ ಕಾರಣಗಳಿಂದ ನೀರು ನಷ್ಟವಾಗುವುದರಿಂದ, ಲಭ್ಯವಿರುವ ಸಂಗ್ರಹ ಇನ್ನೂ ಕಡಿಮೆಯಾಗಬಹುದು. ಈ ಅಂಕಿಅಂಶಗಳು ಆತಂಕಕಾರಿಯಾಗಿವೆ, ಎಂದು ಅವರು ಹೇಳಿದರು.-ನಿರ್ದೇಶಕ ಜಿ.ಎಸ್. ಶ್ರೀನಿವಾಸ ರೆಡ್ಡಿ

ಮುಂದಿನ ತಿಂಗಳುಗಳಲ್ಲಿ ಕೆಆರ್‌ಎಸ್ ಜಲಾಶಯದಲ್ಲಿ ನೀರಿನ ಸಂಗ್ರಹ ಮಟ್ಟವು ಇನ್ನಷ್ಟು ಕಡಿಮೆಯಾಗುವ ನಿರೀಕ್ಷೆಯಿದೆ. ಬೆಂಗಳೂರು, ಮಂಡ್ಯ, ಮೈಸೂರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಗಳ ಕುಡಿಯುವ ನೀರಿನ ಅಗತ್ಯಗಳನ್ನು ಪೂರೈಸಲು ಪ್ರತಿ ತಿಂಗಳು ಸುಮಾರು 3 ಟಿಎಂಸಿ ಅಡಿ ನೀರು ಬೇಕಾಗುತ್ತದೆ.

ಸಂಪುಟ: 06 ಸಂಚಿಕೆ: 233 ಪುಟಗಳು: 08 ಭಾನುವಾರ 08 ನವೆಂಬರ್ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail. com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035621249
03 ₹5

ಉದಯ ವಾಹಿನಿ

UV
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

ದೀಪಾವಳಿ ವಿಶೇಷಾಂಕ













ಛಲವಾದಿ ನಾರಾಯಣಸ್ವಾಮಿಗೆ ಚಾಕು, ಚೂರಿ ಪಾರ್ಸೆಲ್ ಕಳುಹಿಸಿ ಬೆದರಿಕೆ: ಪೊಲೀಸ್ ಆಯುಕ್ತರಿಗೆ ಬಿಜೆಪಿ ದೂರು

• ಉದಯವಾಹಿನಿ, ಬೆಂಗಳೂರು



ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರ ಮನೆಗೆ ಆನ್‌ಲೈನ್ ಮೂಲಕ ಚಾಕು, ಚೂರಿಗಳನ್ನ ಪಾರ್ಸೆಲ್ ಮಾಡಿರುವುದರ ಕುರಿತು ಬಿಜೆಪಿ ನಾಯಕರು ಬೆಂಗಳೂರು ನಗರ ಪೊಲೀಸ್ ಆಯುಕ್ತರಿಗೆ ದೂರು ಸಲ್ಲಿಸಿದ್ದಾರೆ.

ಬಿಜೆಪಿಯ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಧಾನಸಭೆಯಲ್ಲಿ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಹಾಗೂ ಛಲವಾದಿ ನಾರಾಯಣಸ್ವಾಮಿ ಅವರ ನೇತೃತ್ವದ ನಿಯೋಗವು ಪೊಲೀಸ್ ಆಯುಕ್ತ ಸೀಮಂತ್ ಕುಮಾರ್ ಸಿಂಗ್ ಅವರನ್ನು ಭೇಟಿ ಮಾಡಿ ದೂರು ಸಲ್ಲಿಸಿದೆ.

ಈ ಕೃತ್ಯದಲ್ಲಿ ಭಾಗಿಯಾಗಿರುವವರನ್ನು ಪತ್ತೆ ಹಚ್ಚಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕು ,ನಾಯಕರಿಗೆ ಅಗತ್ಯ ಭದ್ರತೆ ಒದಗಿಸಬೇಕು ಎಂದು ಬಿಜೆಪಿ ನಿಯೋಗ ಪೊಲೀಸ್ ಆಯುಕ್ತರನ್ನ ಒತ್ತಾಯಿಸಿದೆ. ದೂರು ಸಲ್ಲಿಸಿದ ಬಳಿಕ ಮಾತನಾಡಿದ ವಿಪಕ್ಷ ನಾಯಕ ಆರ್.ಅಶೋಕ್, ರಾಜ್ಯದಲ್ಲಿ ಕಳೆದ 3 ವರ್ಷಗಳ ಆಡಳಿತ ನೋಡಿದರೆ ಕಾನೂನು ಸುವ್ಯವಸ್ಥೆಯನ್ನ ಕೇಳೋರೇ ಇಲ್ಲ, ಕಾಂಗ್ರೇಸ್ ಪಕ್ಷದವರು ಚಾಕು ಚೂರಿಗಳನ್ನ ಕಳಿಸುತ್ತಾರೆ ಅಂದರೆ ಇವರಿಗೆ ಏನು ಹೇಳಬೇಕು ಎಂದು ಪ್ರಶ್ನಿಸಿದರು.

ಪೊಲೀಸ್ ಆಯುಕ್ತರ ಕಚೇರಿಗೆ ಕೂಗಳತೆ ದೂರದಲ್ಲೇ, ಮೂರು ಜನ ನ್ಯಾಯಾಧೀಶರು, ನಾಲ್ಕು ಮಂತ್ರಿಗಳ ನಿವಾಸಗಳಿವೆ. ಅಷ್ಟಿದ್ದರೂ ಕೂಡ ಕಾಂಗ್ರೇಸ್‌ನ ಗೂಂಡಾಗಳು ಹೋಗಿ ಅಲ್ಲಿ ಗಲಾಟೆ ಮಾಡುತ್ತಾರೆ. ಚಾಕು, ಚೂರಿ ಪಾರ್ಸೆಲ್ ಕಳಿಸುತ್ತಾರೆ.

ನಾನೂ ಸಹ ಗೃಹಮಂತ್ರಿಯಾಗಿ ಕೆಲಸ ಮಾಡಿದ್ದೇನೆ. ಪೊಲೀಸ್ ಕಾಯ್ದೆಯ ಪ್ರಕಾರ ಇದು ಹತ್ಯೆ ಯತ್ನದ ಪ್ರಕರಣ ಆಗುತ್ತದೆ.

ಪೊಲೀಸರು ನಿಷ್ಪಕ್ಷಪಾತವಾಗಿ ತನಿಖೆ ಮಾಡಿ, ಆರೋಪಿಗಳ ವಿರುದ್ಧ ಹತ್ಯೆ ಯತ್ನದ ಪ್ರಕರಣ ದಾಖಲಿಸಬೇಕು ಎಂದು ಆಗ್ರಹಿಸಿದರು. ಸರ್ಕಾರ, ಮುಖ್ಯಮಂತ್ರಿಗಳಿಗೆ ಏನಾದರೂ ಗೌರವ ಇದ್ದರೆ, ಈ ರೀತಿ ನಡೆದುಕೊಳ್ಳುವ ವ್ಯಕ್ತಿಗಳನ್ನ ಮಟ್ಟ ಹಾಕಬೇಕು. ಇಲ್ಲವಾದರೆ ಇಡೀ ಸರ್ಕಾರ ಗೂಂಡಾಗಳ ಪರ ಸರ್ಕಾರ ಎಂದು ನಾವು ಪೋಸ್ಟರ್ ಅಂಟಿಸಿ ಚಳವಳಿ ಮಾಡುತ್ತೇವೆ. ನೀವು ಜಿರಳೆ ಪಾರ್ಟಿ ಜೊತೆ ಸೇರಿಕೊಂಡು ಜಿರಳೆಗಳ ರೀತಿ ನಡೆದುಕೊಳ್ಳುವುದಾದರೆ ಆ ಜಿರಳೆಗಳಿಗೆ ಹೇಗೆ, ಎಲ್ಲಿ 'ಹಿಟ್' ಹೊಡೆಯಬೇಕು ಎಂದು ನಮಗೂ ಗೊತ್ತಿದೆ. ಈ ರೀತಿ ನೀವು ಮುಂದುವರಿಸಿದರೆ ನಾವು ಕೂಡ ಅದೇ ರೀತಿ ಉತ್ತರವನ್ನ ಕೊಡುತ್ತೇವೆ ಎಂದು ಗುಡುಗಿದರು.ಈ ಸಂದರ್ಭದಲ್ಲಿ ಬಿಜೆಪಿ ಶಾಸಕರಾದ ಮುನಿರತ್ನ, ಭೈರತಿ ಬಸವರಾಜು, ಗೋಪಾಲಯ್ಯ, ಕೃಷ್ಣಪ್ಪ, ಸಿ.ಕೆ. ರಾಮಮೂರ್ತಿ, ಎಸ್.ಆರ್. ವಿಶ್ವನಾಥ್ ಸೇರಿದಂತೆ ಹಲವು ನಾಯಕರು ಉಪಸ್ಥಿತರಿದ್ದರು.

ಸರ್ಕಾರಿ ಶಾಲೆಗಳ ಅಭಿವೃದ್ಧಿ, ದಾಖಲಾತಿ ಹೆಚ್ಚಳಕ್ಕೆ ಆದ್ಯತೆ ನೀಡಿ: ಅಧಿಕಾರಿಗಳಿಗೆ ಸಚಿವ ಮಧು ಬಂಗಾರಪ್ಪ ಸೂಚನೆ

• ಉದಯವಾಹಿನಿ, ಬೆಂಗಳೂರು



ಸರ್ಕಾರಿ ಶಾಲೆಗಳು ಹಾಗೂ ಪದವಿ ಪೂರ್ವ ಕಾಲೇಜುಗಳ ಸಮಗ್ರ ಅಭಿವೃದ್ಧಿ, ಮಕ್ಕಳ ದಾಖಲಾತಿ ಹೆಚ್ಚಳ ಮತ್ತು ಗುಣಮಟ್ಟದ ಶಿಕ್ಷಣ ಒದಗಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ

ಶ್ರೀ ಮಧು ಬಂಗಾರಪ್ಪ ಅವರು ಅಧಿಕಾರಿಗಳಿಗೆ ಸೂಚನೆ ನೀಡಿದರು. ಜಿಲ್ಲಾ ಪಂಚಾಯತ್‌ನ ಅಬ್ದುಲ್ ನಜೀರ್ ಸಾಬ್ ಸಭಾಂಗಣದಲ್ಲಿ ಶನಿವಾರ ನಡೆದ ಶಿಕ್ಷಣ ಇಲಾಖೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳನ್ನು ಮತ್ತಷ್ಟು ಬಲಪಡಿಸುವುದು ಸರ್ಕಾರದ ಆದ್ಯತೆಯಾಗಿದ್ದು, ಈ ನಿಟ್ಟಿನಲ್ಲಿ ಅಧಿಕಾರಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಬೇಕು ಎಂದರು. ನಮ್ಮ ಇಲಾಖೆಯ ಬಹುಮುಖ್ಯ ಉಪಕ್ರಮವಾದ ನಮ್ಮ ಶಾಲೆ – ನಮ್ಮ ಜವಾಬ್ದಾರಿ ಯೋಜನೆಯಡಿ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸುವ ಕುರಿತು ಸಭೆಯಲ್ಲಿ ಚರ್ಚೆ ನಡೆಯಿತು. ಹಳೆ ವಿದ್ಯಾರ್ಥಿಗಳ ಸಹಕಾರದೊಂದಿಗೆ ಸರ್ಕಾರಿ ಶಾಲೆಗಳನ್ನು ಅಭಿವೃದ್ಧಿಪಡಿಸಲು ಮುಂದಾಗಬೇಕು.

ಶಾಲೆಗಳ ಉನ್ನತೀಕರಣಕ್ಕೆ ಕೊಡುಗೆ ನೀಡುವ ದಾನಿಗಳನ್ನು ಗುರುತಿಸಿ ಸನ್ಮಾನಿಸುವ ಮೂಲಕ ಇತರರಿಗೂ ಪ್ರೇರಣೆ ನೀಡಬೇಕು ಎಂದು ತಿಳಿಸಿದರು. ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ದಾಖಲಾತಿ ಹೆಚ್ಚಿಸುವುದು, ಪೂರ್ವ ಪ್ರಾಥಮಿಕ ವಿಭಾಗಗಳನ್ನು ಆರಂಭಿಸುವುದು, ಅಗತ್ಯ ಮೂಲಸೌಕರ್ಯ ಕಲ್ಪಿಸುವುದು, ಶಿಕ್ಷಕರಿಗೆ ಕಾಲಕಾಲಕ್ಕೆ ತರಬೇತಿ ನೀಡುವುದು ಹಾಗೂ ಶಾಲೆಗಳಿಗೆ ಗೈರುಹಾಜರಾಗುವ ಮಕ್ಕಳನ್ನು ಮರಳಿ ಕರೆತರುವ ನಿಟ್ಟಿನಲ್ಲಿ ವಿಶೇಷ ಗಮನಹರಿಸಬೇಕು.

ಅಗತ್ಯವಿರುವ ಕಡೆ ಆಂಗ್ಲ ಮಾಧ್ಯಮ ವಿಭಾಗಗಳನ್ನು ಆರಂಭಿಸುವುದು ಮತ್ತು ಆಯ್ದ ಶಾಲೆಗಳನ್ನು ಮೇಲ್ದರ್ಜೆಗೇರಿಸುವ ಕುರಿತು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಶಿಕ್ಷಕರ ಕೊರತೆ ನೀಗಿಸಲು ಖಾಲಿ ಹುದ್ದೆಗಳ ಭರ್ತಿಗೆ ಕ್ರಮ ವಹಿಸುವುದರ ಜತೆಗೆ, ಅಗತ್ಯ ಇರುವ ಕಡೆ ಅತಿಥಿ ಶಿಕ್ಷಕರ ನೇಮಕಾತಿ ಮಾಡಿಕೊಳ್ಳಬೇಕು. ಶಾಲಾ ಕೊಠಡಿಗಳ ದುರಸ್ತಿ, ಶೌಚಾಲಯ ನಿರ್ಮಾಣ ಸೇರಿದಂತೆ ಮೂಲಸೌಕರ್ಯ ಕಾಮಗಾರಿಗಳನ್ನು ಆದ್ಯತೆಯ ಮೇರೆಗೆ ಪೂರ್ಣಗೊಳಿಸಬೇಕು ಎಂದರು.

ಶಾಲಾ ಪ್ರಾರಂಭದ ವೇಳೆಯಲ್ಲಿಯೇ ಎಲ್ಲಾ ಮಕ್ಕಳಿಗೂ ಪಠ್ಯಪುಸ್ತಕ, ಸಮವಸ್ತ್ರ ಹಾಗೂ ಶೂ ಮತ್ತು ಸಾಕ್ಸ್‌ಗಳನ್ನು ಏಕಕಾಲದಲ್ಲಿ ವಿತರಿಸಬೇಕು.

ಯಾವುದೇ ಮಗು ಸರ್ಕಾರದ ಸೌಲಭ್ಯಗಳಿಂದ ವಂಚಿತವಾಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು. ಪಿಎಂ ಶ್ರೀ ಶಾಲೆಗಳ ಅಭಿವೃದ್ಧಿಗೂ ಹೆಚ್ಚಿನ ಆದ್ಯತೆ ನೀಡಬೇಕು. ಮಧ್ಯಾಹ್ನದ ಬಿಸಿಯೂಟ ಯೋಜನೆಯಲ್ಲಿ ಯಾವುದೇ ವ್ಯತ್ಯಯವಾಗದಂತೆ ಗುಣಮಟ್ಟದ ಆಹಾರ ಪೂರೈಕೆಯನ್ನು ಖಚಿತಪಡಿಸಿಕೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಅಂತರಾಳದಿಂದ..
EDITORIAL

ಆಧಾರ್ ನತ್ತ ಕೇಂದ್ರದ ಕೆಂಗಣ್ಣು ರಾಜಕೀಯದಾಟಕ್ಕೆ ಜನ ಹೈರಾಣ



ಸರಕಾರಿ ಸೌಲಭ್ಯಗಳನ್ನು ಪಡೆಯಲು ಇನ್ನು ಮುಂದೆ ಫಲಾನುಭವಿಗಳ ಆಧಾರ್ ಕಾರ್ಡ್‌ನ ಬದಲಾಗಿ ಮತದಾರರ ಗುರುತಿನ ಚೀಟಿ ಹಾಗೂ ಬಯೋಮೆಟ್ರಿಕ್ ಅನ್ನು ಕಡ್ಡಾಯಗೊಳಿಸಲು ಕೇಂದ್ರ ಸರಕಾರ ಗಂಭೀರ ಚಿಂತನೆ ನಡೆಸಿದೆ. ಕೇಂದ್ರದ ಈ ಚಿಂತನೆಗೆ ನಿರೀಕ್ಷೆಯಂತೆಯೇ ವಿಪಕ್ಷಗಳಿಂದ ತೀವ್ರ ವಿರೋಧ ವ್ಯಕ್ತವಾಗಿದ್ದು ಕೇಂದ್ರ ಸರಕಾರದ ವಿರುದ್ಧ ಮುಗಿಬೀಳಲಾರಂಭಿಸಿವೆ. ಇದೇ ವೇಳೆ ಕೇಂದ್ರ ಸರಕಾರದ ಈ ಚಿಂತನೆ ಆಧಾರ್ ಕಾರ್ಡ್ ಭವಿಷ್ಯದ ಕುರಿತಂತೆ ಸಹಜವಾಗಿಯೇ ಪ್ರಶ್ನೆಗಳನ್ನು ಹುಟ್ಟುಹಾಕಿವೆ. ಈ ಹಿಂದೆ ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರ ಆಧಾರ್ ಕಾರ್ಡ್‌ನ್ನು ಪರಿಚಯಿಸಿದ ವೇಳೆ ಹಾಲಿ ಆಡಳಿತಾರೂಢ ಬಿಜೆಪಿ ಮತ್ತದರ ಮಿತ್ರಪಕ್ಷಗಳು ವ್ಯಾಪಕ ವಿರೋಧ ವ್ಯಕ್ತಪಡಿಸಿದ್ದವು. ಆದರೆ ಅಧಿಕಾರಕ್ಕೇರುತ್ತಿದ್ದಂತೆಯೇ ಆಧಾರ್ ಯೋಜನೆಯಲ್ಲಿ ಕೆಲವು ಸಣ್ಣಪುಟ್ಟ ಮಾರ್ಪಾಡುಗಳನ್ನು ಮಾಡಿ ಅದನ್ನು ಜಾರಿಗೊಳಿಸಿತ್ತು. ಅಷ್ಟು ಮಾತ್ರವಲ್ಲದೆ ಹಂತಹಂತವಾಗಿ ಹಣಕಾಸು ವ್ಯವಹಾರಗಳಿಗೆ ಸಂಬಂಧಿಸಿದ ಎಲ್ಲಾ ಖಾತೆಗಳು, ಸಿಮ್ ಖರೀದಿ, ವಿವಿಧ ತೆರನಾದ ಪರವಾನಿಗೆಗಳ ಸಹಿತ ಎಲ್ಲಾ ಪ್ರಕ್ರಿಯೆಗಳಿಗೂ ಆಧಾರ್ ಸಂಖ್ಯೆ ಜೋಡಣೆಯನ್ನು ಕಡ್ಡಾಯಗೊಳಿಸಿತ್ತು. ದೇಶದಲ್ಲಿ ಡಿಜಿಟಲ್ ವ್ಯವಹಾರಗಳು ಬಿರುಸು ಪಡೆದುಕೊಳ್ಳಲಾರಂಭಿಸಿದ ಬಳಿಕವಂತೂ ಆಧಾರ್ ಕಾರ್ಡ್ ಬಳಕೆ ಸಾರ್ವತ್ರಿಕವಾಯಿತು. ಕೋಟ್ಯಂತರ ರೂ. ವ್ಯಯಿಸಿ ಜಾರಿಗೆ ತರಲಾದ ಮತ್ತು ತನ್ನ ಅಧೀನದ ಸಂಸ್ಥೆಯಿಂದಲೇ ನೀಡಲ್ಪಡುತ್ತಿರುವ ಈ ಆಧಾರ್ ಕಾರ್ಡ್ ಅನ್ನು ಬೀದಿಬದಿಯ ನೋಂದಣಿ ಕೇಂದ್ರಗಳಿಂದ ನಿಮಿಷ ಮಾತ್ರದಲ್ಲಿ ಪಡೆಯಬಹುದು ಎಂಬ ವಾದವನ್ನು ಮುಂದಿಟ್ಟು ಈಗ ಸರಕಾರ ಆಧಾರ್ ಕಾರ್ಡ್ ವಿಷಯದಲ್ಲಿ ಹಿಂದಡಿ ಇರಿಸಲು ಮುಂದಾಗಿದೆ.

> **ಇದೇ ನೆಪದಲ್ಲಿ ಸರಕಾರಿ ಯೋಜನೆಗಳ ಫಲಾನುಭವಿಗಳಿಗೆ ಮತದಾರರ ಗುರುತಿನ ಚೀಟಿ, ಬಯೋಮೆಟ್ರಿಕ್ ಕಡ್ಡಾಯಗೊಳಿಸಲು ಮುಂದಾಗಿದೆ. ಕೇಂದ್ರ ಸರಕಾರದ ಈ ನಡೆ ಮೇಲ್ನೋಟಕ್ಕೆ ವಿವೇಚನಾರ್ಹ ಎಂದೆನಿಸಿದರೂ ಆಧಾರ್ ಕಾರ್ಡ್ ಯೋಜನೆ ವಿಫಲವಾಗಿರುವುದನ್ನು ಪರೋಕ್ಷವಾಗಿ ಸರಕಾರವೇ ಒಪ್ಪಿಕೊಂಡಂತಾಗಿದೆ.**

ಆಧಾರ್ ಕಾರ್ಡ್ ನೀಡಿಕೆಯಲ್ಲಿನ ಲೋಪದೋಷಗಳನ್ನು ಸರಿಪಡಿಸಿ, ಅಕ್ರಮಗಳಿಗೆ ಕಡಿವಾಣ ಹಾಕುವ ಬದಲಾಗಿ ದಶಕದ ಹಿಂದೆ ಬಲು ಮಹತ್ವಾಕಾಂಕ್ಷೆಯಿಂದ ಜಾರಿಗೆ ತರಲಾದ ಯೋಜನೆಗೆ ಈಗ ಪರೋಕ್ಷವಾಗಿ ಎಳ್ಳು-ನೀರು ಬಿಡಲು ಕೇಂದ್ರ ಮುಂದಾಗಿರುವುದು ಎಲ್ಲೋ ಸರಕಾರ ತನ್ನ ಎಡವಟ್ಟನ್ನು ಮರೆಮಾಚುವ ಪ್ರಯತ್ನದಲ್ಲಿ ತೊಡಗಿರುವಂತೆ ತೋರುತ್ತಿದೆ. ಇನ್ನು ಈಗ ಪ್ರಸ್ತಾವಿಸಲಾಗಿರುವ ಮತದಾರರ ಗುರುತಿನ ಚೀಟಿ, ಬಯೋಮೆಟ್ರಿಕ್ ವ್ಯವಸ್ಥೆಗಳ ಸದ್ಯದ ಪರಿಸ್ಥಿತಿಯಂತೂ ದೇವರಿಗೇ ಪ್ರೀತಿ ಎಂಬಂತಿದೆ. ಚುನಾವಣ ಆಯೋಗ ಕೈಗೆತ್ತಿಕೊಂಡಿರುವ ಎಸ್‌ಐಆರ್ ಪ್ರಕ್ರಿಯೆ ಗೊಂದಲಮಯವಾಗಿ ದೇಶಾದ್ಯಂತ ಕೋಟ್ಯಂತರ ಜನರ ಆಕ್ರೋಶಕ್ಕೆ ಗುರಿಯಾಗಿರುವ ಸಂದರ್ಭದಲ್ಲಿ ಇದೇ ಮತದಾರರ ಚೀಟಿಯನ್ನು ಹಾಗೂ ತಾಂತ್ರಿಕವಾಗಿ ಅದರಲ್ಲೂ ದೇಶದ ಗ್ರಾಮೀಣ ಪ್ರದೇಶಗಳು ಇಂದಿಗೂ ಡಿಜಿಟಲ್ ವ್ಯವಸ್ಥೆಯಿಂದ ಹೊರಗುಳಿದಿರುವಾಗ ಸರಕಾರ ಇಂತಹ ಚಿಂತನೆ ನಡೆಸಿರುವುದು ಒಂದಿಷ್ಟು ಆತುರದ ನಡೆಯೇ ಸರಿ.

ದೇಶದ ಹಲವು ರಾಜ್ಯಗಳ ಗ್ರಾಮೀಣ ಪ್ರದೇಶಗಳ ಬಡವರು ಪಡಿತರ ಪಡೆಯಲು ಇ-ಕೆವೈಸಿ ಮಾಡಲು ಹೆಣಗಾಟ ನಡೆಸುತ್ತಿರುವಾಗ ಕೇಂದ್ರ ಬಯೋಮೆಟ್ರಿಕ್ ಕಡ್ಡಾಯಗೊಳಿಸಿದ್ದೇ ಆದಲ್ಲಿ ಸರಕಾರಿ ಜನಕಲ್ಯಾಣ ಯೋಜನೆಗಳಿಂದ ಅರ್ಹ ಫಲಾನುಭವಿಗಳು ವಂಚಿತರಾಗಲಿದ್ದಾರೆ ಎಂಬ ವಿಪಕ್ಷಗಳ ಆತಂಕ ಸಹಜವಾದುದೆ.

ಈ ಎಲ್ಲಾ ಅಂಶಗಳನ್ನು ಕೇಂದ್ರ ಸರಕಾರ ಸಂಯಮದಿಂದ ಪರಿಶೀಲಿಸಿ ಈ ಬಗ್ಗೆ ಅಂತಿಮ ನಿರ್ಧಾರ ಕೈಗೊಳ್ಳಬೇಕು. ಇಲ್ಲವಾದಲ್ಲಿ ಈ ಚಿಂತನೆ ಕೂಡ ಆಧಾರ್ ಮಾದರಿಯಲ್ಲಿಯೇ ಸರಕಾರದ ವೈಫಲ್ಯಗಳ ಪಟ್ಟಿಗೆ ಇನ್ನೊಂದು ಸೇರ್ಪಡೆಯಾಗಲಿದೆಯೇ ಹೊರತು ನೈಜ ಉದ್ದೇಶ ಈಡೇರದು.



ರಾಮಾಯಣ

26. ರಾವಣನು ಕುಂಭಕರ್ಣನನ್ನು ಯುದ್ಧಕ್ಕೆ ಕಳುಹಿಸಿ

• ಹಿಂದಿನ ಸಂಚಿಕೆಯಿಂದ **121ನೆಯ ಅಧ್ಯಾಯ**

ದೇವಕಂಟಕನಾದ ತನ್ನ ಅಣ್ಣನು ಯುದ್ಧದಲ್ಲಿ ಸೋತ ವಿಷಯವನ್ನು ಕೇಳಿದ ಕುಂಭಕರ್ಣನ ಕೋಪ ಆಗಸವನ್ನಡರಿತು. ಭಯಂಕರವಾಗಿ ಗರ್ಜಿಸುತ್ತ ಮೇಲೆದ್ದು, ''ಬೇಗನೆ ಹೋಗಿ ಈ ನರರ ಜೀವವನ್ನು ಜಾರಿಸುತ್ತೇನೆ, ಪ್ಲವಗತತಿಯನ್ನು ಸಂಹರಿಸಿ ರಾಕ್ಷಸಗಣಕ್ಕೆ ಉಣಬಡಿಸುತ್ತೇನೆ, ರಾಮನು ರಾವಣನ ಪದಯುಗಕ್ಕೆ ಬೀಳುವಂತೆ ಮಾಡುತ್ತೇನೆ'' ಎಂದು ಹಲ್ಲುಕಡಿಯುತ್ತ, ಕಣ್ಣುಗಳು ಶಿವನ ಮೂರನೆಯ ಕಣ್ಣನ್ನು ನೆನಪಿಸುವಂತೆ ಉರಿಯುತ್ತಿರಲು, ಮಹೋದರನೆಂಬ ರಕ್ಕಸನು ಕೈಮುಗಿದು. ''ಮಹಾಸ್ವಾಮಿ, ಈ ಭೂಮಿಯಲ್ಲಿ ನಿಮ್ಮನ್ನು ಸಂಗರದಲ್ಲೆದುರಿಸಿ ನಿಲ್ಲುವವರಾರು? ನಿಮ್ಮ ಕೋಪದಿಂದ ಸರಸಿಜಭವಾಂಡವೇ ಕಂಪಿಸುತ್ತದೆ ಅಂಥದರಲ್ಲಿ ನಿಮಗೆ ಅಡ್ಡಿಯೇನಿದೆ? ಆದರೆ ಮೊದಲು ನಿಮ್ಮ ಅಣ್ಣನವರನ್ನು ಕಂಡು ಅವರು ಏನು ಹೇಳುತ್ತಾರೆಂಬುದನ್ನು ಕೇಳಿ ಆನಂತರ ತಮ್ಮ ಮನಬಂದಂತೆ ಮಾಡಿರಿ'' ಎಂದು ವಿನಯದಿಂದ ಬಿನ್ನವಿಸಿಕೊಂಡ. ಕುಂಭಕರ್ಣನು ಆ ಮಾತಿಗೆ ಒಪ್ಪಿಗೆಯಿತ್ತು ರಾವಣನ ಅರಮನೆಯತ್ತ ಹೊರಡಲು ಸಿದ್ಧನಾದ. ಅಷ್ಟರಲ್ಲಿ ಒಬ್ಬ ರಕ್ಕಸನು ದೈತ್ಯನಾಥನ ಬಳಿಗೆ ಹೋಗಿ ಕುಂಭಕರ್ಣನು ಎಚ್ಚೆತ್ತಿರುವ ವಿಷಯವನ್ನು ಅರುಹಿದ. ಅದನ್ನು ಕೇಳಿದ ದನುಜೇಶನು ಸಂತಸಗೊಂಡು ಆ ಘನ ಪರಾಕ್ರಮಿಯನ್ನು ಬೇಗ ಕರೆತರುವಂತೆ ಆಜ್ಞಾಪಿಸಿದ. ಅವನು ವೇಗವಾಗಿ ಕುಂಭಕರ್ಣನ ಮನೆಗೆ ಬಂದು ಕೈಮುಗಿದು ಸ್ತುತಿಸಿ, ''ನಿಮ್ಮ ಅಣ್ಣನವರು ನಿಮ್ಮನ್ನು ಕಾಣಲು ಕಾತರರಾಗಿ ಕಾಯುತ್ತಿದ್ದಾರೆ, ಇದನ್ನು ತಿಳಿಸಲು ನನ್ನನ್ನು ನಿಮ್ಮೆಡೆಗೆ ಕಳುಹಿದ್ದಾರೆ'' ಎಂದು ಬಿನ್ನವಿಸಿಕೊಂಡ. ಆಗ ಆ ದೈತ್ಯನು ತನ್ನ ಅಣ್ಣನ ಆಜ್ಞೆಯನ್ನು ಕೇಳುವ ಕಾತರದಿಂದ ಆಗಸದಲ್ಲಿ ಅಂಡಲೆಯಲು ಎಂಧ್ಯಾಚಲವೆದ್ದು ಬರುವಂತೆ ಮೇಲೆದ್ದು, ಮುಖವನ್ನು ತೊಳೆದುಕೊಂಡು, ಕಂಠಪೂರ್ತಿ ಮದ್ಯವನ್ನು ಕುಡಿದು, ಅಲಂಕಾರ ಮಾಡಿಕೊಂಡು ತನ್ನ ಮನೆಯಿಂದ ಹೊರಟು, ಅಲಂಕೃತಗೊಂಡ ರಾಜಮಾರ್ಗದಲ್ಲಿ ಸಂಚರಿಸುತ್ತ ಅಣ್ಣನನ್ನು ಕಾಣಲು ಉತ್ಸುಕತೆಯಿಂದ ಬಂದ. ಸೂರ್ಯನ ಕಾಂತಿಯನ್ನು ಇಳಿಕೆಗೈವ ಹೊಳಪಿನಿಂದ ರಾರಾಜಿಸುತ್ತಿದ್ದ ಮಣಿಕಿರೀಟವನ್ನು ಧರಿಸಿ ರಾಜಬೀದಿಯಲ್ಲಿ ಬರುತ್ತಿದ್ದ ಅವನನ್ನು ಅಲ್ಲಲ್ಲಿ ಇದ್ದ ಕಪಿನಾಯಕರು ಕಾಣಲು ಅವರ ಮುಖಗಳು ಕಂದಿಹೋದುವು ಕೆಲವರು ಅಲ್ಲಿಯೇ ಉರುಳಿದರು, ಮತ್ತೆ ಕೆಲವರು ಅವನ ಕಣ್ಣಿನಿಂದ ತಪ್ಪಿಸಿಕೊಳ್ಳಲು ಓಡಿ ಹೋಗಿ ಮರೆಯಲ್ಲಿ ಅವಿತುಕೊಂಡರು ಕೆಲ ಮಂದಿ ಕಪಿನಾಯಕರು ಭಯದಿಂದ ನಡುಗುತ್ತ ಸಗರವಂಶಜನಾದ ರಾಮಪುರದರಸನನ್ನು ಮೊರೆವೊಗಲು ಧಾವಿಸಿದರು. ಹಿಮಗಿರಿತನೂಜೆಯೇ ಕೇಳು, ಕುಂಭಕರ್ಣನು ಅಣ್ಣನ ಬಳಿಗೆ ಪ್ರೀತಿಯಿಂದ ಹೋಗುತ್ತಿರಲು ಸೂರ್ಯಚಂದ್ರ, ಅಗ್ನಿಗಳ ತೇಜಸ್ಸು ಮಸುಳಿಸಿತು, ಬ್ರಹ್ಮನು ಕಂಪಿಸಿದ, ಅಮರಸಂದಣಿಯು ಇನ್ನು ತಮ್ಮನ್ನಾರು ಕಾಪಾಡುವವರು ಎಂದು ಮರುಗಿದರು, ಕಪಿಗಳು ಭೀಕರ ಮೂರ್ತಿಯನ್ನು ನೋಡಿ ಭಯಗೊಂಡು ಹಕ್ಕಿರಿದು ಚೀರಿ ದಿಕ್ಕಾಪಾಲಾಗಿ ಓಡಿದುವು.

ನೆಲವನ್ನೇ ನುಂಗುವ ಆಸೆಯಿಂದ ಯಮನು ಭೂತಳಕ್ಕೆ ಬಂದನೋ, ರವಿಶಶಿಗಳನ್ನು ನುಂಗಲು ಕಲ್ಪಾಂತಭೈರವನು ಈ ಭೀಕರಾಕಾರವನ್ನು ತಾಳಿ ನಡೆತಂದನೋ ಎಂಬಂತಿದ್ದ ರಾಕ್ಷಸನನ್ನು ನೋಡಿದ ಭೂಮಿಯ ಅಖಿಲ ಜೀವಜಾತಗಳು ಭೀತಿಯಿಂದ ತತ್ತರಿಸಿದುವು. ಕಪಿಗಳಲ್ಲ ದಿಕ್ಕುದಿಕ್ಕಿಗೆ ಓಡುತ್ತಿರುವುದನ್ನು ಕಂಡ ಜಾಂಬವಂತನೇ ಬೊದಲಾದರವರು ಪುಂಡರೀಕಾಕ್ಷನೆಡೆಗೆ ಧಾವಿಸಿ ಬಂದರು. ಅವರ ಭೀತಿಯನ್ನು ಕಂಡ ಲಕ್ಷ್ಮಣನೊಡನಿದ್ದ ಶ್ರೀರಾಮನು ತನ್ನ ಕೋದಂಡವನ್ನು ಹಿಡಿದುಕೊಂಡು ಪಕ್ಕದಲ್ಲಿದ್ದ ವಿಭೀಷಣನನ್ನು ಕುರಿತು ನಸುನಗುತ್ತ, 'ಹಿಂದೆ ತ್ರಿವಿಕ್ರಮಾವತಾರದಲ್ಲಿ ಆಕಾಶವನ್ನು ಅಳೆಯಲು ತನ್ನ ಪಾದವನ್ನಿಡಲು ಉದ್ಯುಕ್ತನಾದ ವಿಷ್ಣುವಿನಂತೆ ಬರುತ್ತಿರುವ ಈ ಪುರುಷನು ಯಾರು? ಭೂಮಿಯನ್ನೇ ನುಂಗುವ ಕೇತುವಿನಂತೆ ಕಾಣುತ್ತಿದ್ದಾನೆ. ಇವನ ಅಪ್ರತಿಮ ದೇಹವನ್ನು ಕಂಡ ಶಾಖಾಮೃಗಗಳು ದಿಕ್ಕುದಿಕ್ಕಿಗೆ ಓಡುತ್ತಿದ್ದಾರೆ. ಯಾರಿವನು?' ಎಂದು ಕೇಳಿದ. ಆಗ ದೈತ್ಯೇಂದನು, ''ಇವನಿಂದ ಕಾಲನೇ ಯುದ್ಧದಲ್ಲಿ ಭಂಗಿತನಾದ, ಅಗ್ನಿಯು ತನ್ನ ಮನೆಯನ್ನು ಬಿಟ್ಟು ಓಡಿದ, ನಿರುತಿಯು ತನ್ನ ಆಲಯದಲ್ಲಿ ಕಂಗೆಟ್ಟ ಸುರನಾಯಕನೂ ಮುಂಗೆಟ್ಟು ಓಡಿದ.

ಮುಂದುವರಿಯುವುದು...

ಕನ್ನಡ ಹಾಡು ಹಾಡಿದ್ದ ಅರಸೀಕೆರೆ ರಕ್ಷಿತ್ ರಂಗಯ್ಯ ಶೀಘ್ರದಲ್ಲಿ ಬೆಳ್ಳಿತರೆಗೆ ಬರ್ತಾರ !!

• ಉದಯವಾಹಿನಿ ಬೆಂಗಳೂರು

ವಿಶೇಷ ವರದಿ ಉಮೇಶ್ ಬಾಣಾವರ

ಕೆಲವು ದಿನಗಳ ಹಿಂದೆ ತಾಯಿಯ ಬಗ್ಗೆ ಹಾಡನ್ನು ಹಾಡಿ ರಾಜ್ಯ, ಅಂತರ ರಾಜ್ಯ ಹಾಗೂ ವಿದೇಶಗಳಲ್ಲಿಯೂ ಸಹ ಅರಸೀಕೆರೆಯ ರಕ್ಷಿತ್ ರಂಗಯ್ಯ, ಹಾಡಿರುವ ಹಾಡನ್ನು ನೋಡಿ ಸಾಮಾಜಿಕ ಜಾಲತಾಣ ಮುಖಾಂತರ ಲಕ್ಷಾಂತರ ಕನ್ನಡಿಗರು ಹಾಗೂ ಅರಸೀಕೆರೆಯ ನಾಗರಿಕರು ಅತಿ ಹೆಚ್ಚು ಶುಭಾಶಯಗಳು ಹಾರೈಸಿದ್ದರು .

ಈಗ ಮತ್ತೊಮ್ಮೆ ಕನ್ನಡ ರಾಜ್ಯೋತ್ಸವ ಆಚರಣೆಗೆ ಹೆಸರುವಾಸಿಯಾಗಿರುವ ನವೆಂಬರ್ ತಿಂಗಳಲ್ಲಿ ಕನ್ನಡ ನಾಡು ನುಡಿ ಹಾಗೂ ಅರಸೀಕೆರೆಯ ಐತಿಹಾಸಿಕ ಪ್ರಸಿದ್ಧ ಗರುಡನಗಿರಿ ಗುಡ್ಡ ಹಾಗೂ ಹೆಸರುವಾಸಿಯಾದ ಧಾರ್ಮಿಕ ಆಧ್ಯಾತ್ಮಿಕ ಸ್ಥಳಗಳನ್ನು ಸಹ ಪರಿಚಯಿಸಿ ಧನ್ವಂತರಿ ಮೆಡಿಕಲ್ ರಕ್ಷಿತ್ ರಂಗಯ್ಯ ಎಂದು ಕೆಲವೇ ದಿನಗಳಲ್ಲಿ ಸಾಮಾಜಿಕ ಜಾಲತಾಣದ ಮುಖಾಂತರ ಅತಿ ಹೆಚ್ಚು ಅಭಿಮಾನಿಗಳು ಹಾಗೂ ಸಂಗೀತ ಕಲಾ ರಸಿಕರ ಮನೆಗೆದ್ದಿದ್ದಾರೆ .

ಶೀಘ್ರದಲ್ಲೇ ಬೆಳ್ಳಿತೆರೆಗೆ ಬರ್ತಾರ ರಕ್ಷಿತ ರಂಗಯ್ಯ ಹಾಡು ಹಾಡುಗಾರಿಕೆ ಅಲ್ಲದೆ ತಮ್ಮ ಅದ್ಭುತ ನಟನೆಯನ್ನು ಗಮನಿಸಿರುವ ಕನ್ನಡ ಚಿತ್ರರಂಗದ ಹೆಸರಾಂತ ನಿರ್ಮಾಪಕ ನಿರ್ದೇಶಕರೊಬ್ಬರು ರಕ್ಷಿತ್ ರಂಗಯ್ಯನವರನ್ನು ದೂರವಾಣಿ ಮುಖಾಂತರ ಸಂಪರ್ಕಿಸಿ ತಮ್ಮ ಕಲಾ ನೈಪುಣ್ಯತೆಯನ್ನು ಗುರುತಿಸಿ ಶುಭ ಹಾರೈಸಿದ್ದಲ್ಲದೆ ಶೀಘ್ರದಲ್ಲಿಯೇ ಚಲನಚಿತ್ರ ರಂಗಕ್ಕೆ ಆಹ್ವಾನ ನೀಡಿದ್ದಾರೆಂದು ತಿಳಿದು ಬಂದಿದೆ .

ಒಟ್ಟಿನಲ್ಲಿ ಬರುವ ದಿನಗಳಲ್ಲಿ ಅರಸೀಕೆರೆಯ ರಕ್ಷಿತ್ ರಂಗಯ್ಯರವರ ಕಲಾ ನೈಪುಣ್ಯತೆ ಹಾಡುಗಾರಿಕೆ ಹಾಗೂ ಚಲನಚಿತ್ರ ನಟನೆಗೆ ಪಾದರ್ಪಣೆ ಮಾಡುತ್ತಿರುವ ಸಂದರ್ಭದಲ್ಲಿ ಯಶಸ್ವಿಯಾಗಲೆಂದು ಸ್ನೇಹಿತರು ಶುಭ ಹಾರೈಸಿದ್ದಾರೆ.

ಇದಕ್ಕೆ ಪ್ರತಿಕ್ರಿಯಿಸಿರುವ ರಕ್ಷಿತ್ ರಂಗಯ್ಯ ಅರಸೀಕೆರೆ ತಾಲ್ಲೂಕಿನ ಜನತೆಯ ಆಶೀರ್ವಾದ ಹಾಗೂ ನಮ್ಮ ಹಿರಿಯರ ಆಶೀರ್ವಾದದಿಂದ ಅವಕಾಶಗಳು ಬಂದಲ್ಲಿ ಸಂತೋಷವಾಗಿ ಸ್ವೀಕರಿಸುತ್ತೇನೆ ಎಂದು ಪ್ರತಿಕ್ರಿಯಿಸಿದ್ದಾರೆ.





ಪರೀಕ್ಷಾ ಸಂಭ್ರಮ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
(M)8747969381

32

ಕಷ್ಟದ ಪ್ರಶ್ನೆ ಕಂಡ ತಕ್ಷಣ ಗಾಬರಿ ಬೇಡ

ಸುಲಭ ಪ್ರಶ್ನೆಗಳನ್ನು ಬರೆಯುತ್ತಾ ಹೋದಂತೆ ನಿಮ್ಮ ಆತ್ಮವಿಶ್ವಾಸ ಮರಳಿ ಬರುತ್ತದೆ. ಕೊನೆಯ ಹದಿನೈದು ನಿಮಿಷದಲ್ಲಿ ಆ ಕಷ್ಟದ ಪ್ರಶ್ನೆಗೆ ಹಿಂತಿರುಗಿ. ಆಗ ಮೆದುಳು ಹೆಚ್ಚು ಶಾಂತವಾಗಿರುತ್ತದೆ. ಪ್ರಶ್ನೆಯನ್ನು ಸಣ್ಣ ತುಣುಕುಗಳಾಗಿ ಒಡೆಯಿರಿ, ನೆನಪಿರುವ ಒಂದು ಅಂಶವಿದ್ದರೂ ಬರೆಯಿರಿ, ಖಾಲಿ ಬಿಡಬೇಡಿ. ಆಗಲೂ ಅರ್ಧ ಅಂಕವಾದರೂ ದೊರಕುತ್ತದೆ.

ಪರೀಕ್ಷಾ ಕೊಠಡಿಯಲ್ಲಿ ಒಂದು ಕಠಿಣ ಪ್ರಶ್ನೆ ಕಣ್ಣಿಗೆ ಬಿದ್ದ ಕೂಡಲೇ ಎದೆ ಬಡಿತ ಹೆಚ್ಚುತ್ತದೆ, ಇದನ್ನು ಓದಿಯೇ ಇಲ್ಲ ಎಂಬ ಆತಂಕ ಮನವನ್ನು ಆವರಿಸುತ್ತದೆ. ಬೆವರು, ಕೈ ನಡುಕ ಶುರುವಾಗಿ, ಆ ಒಂದು ಪ್ರಶ್ನೆಯಿಂದಾಗಿ ತಿಳಿದಿದ್ದ ಸುಲಭ ಪ್ರಶ್ನೆಗಳೂ ಮರೆತು ಹೋಗುತ್ತವೆ. ಇದು ಪರೀಕ್ಷೆಯಲ್ಲಿ ಮಾಡುವ ದೊಡ್ಡ ತಪ್ಪು.

ನೆನಪಿಡಿ, ಪ್ರಶ್ನೆ ಕಠಿಣವೆಂದರೆ ಅದು ಎಲ್ಲರಿಗೂ ಕಠಿಣ, ನಿಮಗೊಂದೇ ಅಲ್ಲ. ಅದನ್ನು ಕಂಡು ಹೆದರಬೇಡಿ. ಮೊದಲು ಅದರ ಸುತ್ತ ಗುರುತು ಹಾಕಿ, ಲೇಖನಿ ಕೆಳಗಿಟ್ಟು ಹತ್ತು ಸೆಕೆಂಡು ಆಳವಾಗಿ ಉಸಿರಾಡಿ.

ಈಗಲ್ಲ, ಸ್ವಲ್ಪ ನಂತರ ಎಂದು ಮನಸ್ಸಿಗೆ ಹೇಳಿ ಮುಂದೆ ಸಾಗಿ. ನಿಮಗೆ ಆತ್ಮವಿಶ್ವಾಸವಿರುವ, ಚೆನ್ನಾಗಿ ಬರುವ ಪ್ರಶ್ನೆಗಳಿಗೆ ಮೊದಲು ಉತ್ತರಿಸಿ. ಪರೀಕ್ಷೆ



ಎಂದರೆ ನೂರಕ್ಕೆ ನೂರು ಗಳಿಸುವುದಲ್ಲ, ತಿಳಿದಷ್ಟನ್ನು ಸಮರ್ಪಕವಾಗಿ ಬರೆಯುವುದು. ಒಂದು ಕಠಿಣ ಪ್ರಶ್ನೆ ನಿಮ್ಮ ಇಡೀ ಫಲಿತಾಂಶವನ್ನು ನಿರ್ಧರಿಸುವುದಿಲ್ಲ. ಶಾಂತವಾಗಿ, ಚಾಣಾಕ್ಷತೆಯಿಂದ ಆಡಿದರೆ ಕಠಿಣವೂ ಅಂಕವಾಗಿ ಪರಿವರ್ತನೆಯಾಗುತ್ತದೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

''ಕೆಲವು ದಿನಗಳು ಕ್ಯಾಲೆಂಡರ್‌ನ ದಿನಾಂಕಗಳಾಗಿ ಉಳಿಯುವುದಿಲ್ಲ; ಅವು ಬದುಕಿನ ಮರೆಯಲಾಗದ ನೆನಪುಗಳಾಗಿ ಮನಸ್ಸಿನಾಳದಲ್ಲಿ ಶಾಶ್ವತವಾಗಿ ನೆಲೆಸುತ್ತವೆ. ನವೆಂಬರ್ 7 ಮತ್ತು 9 ನನ್ನ ಬದುಕಿನಲ್ಲಿ ಅಂತಹ ಎರಡು ಭಾವನಾತ್ಮಕ ದಿನಗಳು.'' ನವೆಂಬರ್ ತಿಂಗಳು ನನ್ನ ಪಾಲಿಗೆ ವಿಶೇಷವಾದದ್ದು. ಅದರಲ್ಲೂ ನವೆಂಬರ್ 7 ನನ್ನ ಮುದ್ದಿನ ಮಗಳು ಚಿನ್ಮಯಿಯ ಜನ್ಮದಿನವಾದರೆ, ನವೆಂಬರ್ 9 ನನ್ನ ಬದುಕಿನ ಅವಿಭಾಜ್ಯ ಅಂಗವಾಗಿದ್ದ ಪ್ರೀತಿಯ ಪತ್ನಿ ಚೈತ್ರ ದೇವಿಯ ಜನ್ಮದಿನ. ಒಮ್ಮೆ ಈ ಎರಡು ದಿನಗಳು ನಮ್ಮ ಕುಟುಂಬದಲ್ಲಿ ಸಂಭ್ರಮ, ನಗು, ಪ್ರೀತಿ ಮತ್ತು ಆತ್ಮೀಯತೆಯ ಹೊನಲನ್ನೇ ಹರಿಸುತ್ತಿದ್ದವು. ಇಂದು ಅದೇ ದಿನಗಳು ನೆನಪುಗಳ ಭಾರವನ್ನು ಹೊತ್ತು ತರುತ್ತಿವೆ.

ನವೆಂಬರ್‌ನ ಎರಡು ದಿನಗಳು: ಒಂದು ಆಸ್ಪತ್ರೆಯಲ್ಲಿ, ಮತ್ತೊಂದು ನೆನಪುಗಳಲ್ಲಿ!

ಚೈತ್ರ ಬದುಕಿದ್ದಾಗ ಮಗಳ ಹುಟ್ಟುಹಬ್ಬದ ಸಂಭ್ರಮಕ್ಕೆ ಅಮ್ಮನ ಪ್ರೀತಿಯೂ ಬೆರೆತಿರುತ್ತಿತ್ತು. ಮನೆಯಲ್ಲಿನ ಸಿದ್ಧತೆಗಳು, ಕೇಕ್, ಶುಭಾಶಯಗಳು, ನಗು ಮತ್ತು ಸಂತೋಷದ ಕ್ಷಣಗಳು ಇಂದಿಗೂ ಕಣ್ಣಮುಂದೆ ಸುಳಿಯುತ್ತವೆ. ಆದರೆ ಕಾಲದ ನಿರ್ಧಾರ ಬೇರೆಯಾಯಿತು. ಇಂದು ಚೈತ್ರ ನನ್ನೊಂದಿಗಿಲ್ಲ. ಅವಳು ದೈಹಿಕವಾಗಿ ದೂರವಾಗಿದ್ದರೂ, ಅವಳ ಪ್ರೀತಿ, ಕಾಳಜಿ ಮತ್ತು ನೆನಪುಗಳು ಪ್ರತಿದಿನವೂ ನನ್ನ ಬದುಕಿನೊಂದಿಗೆ ಹೆಜ್ಜೆ ಹಾಕುತ್ತಿವೆ.ಈ ಬಾರಿಯ ನವೆಂಬರ್ 7ರ ಸಂಭ್ರಮವೂ ಹಿಂದಿನಂತಿಲ್ಲ. ಅಪಘಾತದಿಂದ ಗಾಯಗೊಂಡಿರುವ ನನ್ನ ಮಗಳು ಚಿನ್ಮಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಹುಟ್ಟುಹಬ್ಬದಂದು ಅವಳ ಕೈಯಲ್ಲಿ ಕೇಕ್ ಇರಬೇಕಾಗಿತ್ತು ,ಆದರೆ ಇಂದು ಚಿಕಿತ್ಸೆಯ ನೋವನ್ನು ಸಹಿಸಿಕೊಳ್ಳುವ ಅನಿವಾರ್ಯತೆ ಎದುರಾಗಿದೆ. ಒಬ್ಬ ತಂದೆಯಾಗಿ ಮಗಳ ಮುಖದಲ್ಲಿ ನಗು ಕಾಣಬೇಕೆಂಬ ಆಸೆಯಿದ್ದರೂ, ಆಸ್ಪತ್ರೆಯ ಹಾಸಿಗೆಯಲ್ಲಿ ಅವಳನ್ನು ನೋಡುವಾಗ ಮನಸ್ಸು ಮೌನವಾಗಿ ಮರುಗುತ್ತದೆ. ಅವಳು ಸಂಪೂರ್ಣವಾಗಿ ಗುಣಮುಖಳಾಗಿ ಮತ್ತೆ ತನ್ನ ಕನಸುಗಳ ಹಾದಿಯಲ್ಲಿ ಮುನ್ನಡೆಯಲಿ ಎಂಬುದೇ ನನ್ನ ಪ್ರಾರ್ಥನೆ. ನವೆಂಬರ್ 9ರಂದು ಚೈತ್ರಳ ಜನ್ಮದಿನ. ಒಮ್ಮೆ ನನ್ನೊಂದಿಗೆ ಬದುಕಿನ ಪ್ರತಿಯೊಂದು ಸಂಭ್ರಮವನ್ನೂ ಹಂಚಿಕೊಂಡಿದ್ದ ಜೀವ ಇಂದು ನೆನಪುಗಳ ರೂಪದಲ್ಲಿ ಮಾತ್ರ ನನ್ನೊಂದಿಗಿದೆ. ಮಗಳ ನೋವಿನ ಸಂದರ್ಭದಲ್ಲಿ ಅಮ್ಮನ ಸಾಂತ್ವನದ ಸ್ಪರ್ಶ ಎಷ್ಟೊಂದು ಅಮೂಲ್ಯವಾಗಿರುತ್ತಿತ್ತು ಎಂಬ ಭಾವನೆ ಮನಸ್ಸನ್ನು ಮತ್ತಷ್ಟು ಭಾರವಾಗಿಸುತ್ತದೆ. ಬದುಕಿನಲ್ಲಿ ಕೆಲವು ಖಾಲಿತನಗಳನ್ನು ಯಾರಿಂದಲೂ ತುಂಬಲು ಸಾಧ್ಯವಿಲ್ಲ. ಕಾಲ ಎಲ್ಲಾ ನೋವುಗಳನ್ನೂ ಮರೆಸುವುದಿಲ್ಲ ಕೆಲವು ನೋವುಗಳೊಂದಿಗೆ ಬದುಕುವುದನ್ನು ಮಾತ್ರ ಕಲಿಸುತ್ತದೆ. ಚೈತ್ರಳ ನೆನಪು ನನ್ನ ಬದುಕಿನ ಶಾಶ್ವತ ಭಾಗವಾದರೆ, ಚಿನ್ಮಯಿಯ ನಗು ನನ್ನ ಮುಂದಿನ ಬದುಕಿನ ಭರವಸೆ. ಈ ನವೆಂಬರ್‌ನಲ್ಲಿ ಒಂದು ದಿನ ಆಸ್ಪತ್ರೆಯಲ್ಲಿ ಮಗಳ ಬಳಿಯಿರುವ ತಂದೆಯ ಮನಸ್ಸು, ಮತ್ತೊಂದು ದಿನ ಪತ್ನಿಯ ನೆನಪುಗಳಲ್ಲಿ ಮೌನವಾಗುವ ಪತಿಯ ಹೃದಯ ನನ್ನದಾಗಿದೆ.

ಒಬ್ಬಳು ನನ್ನ ಮುಂದಿನ ಬದುಕಿನ ಭರವಸೆ ಮತ್ತೊಬ್ಬಳು ನನ್ನ ಬದುಕಿನ ಮರೆಯಲಾಗದ ನೆನಪು. ಈ ಎರಡರ ನಡುವೆಯೇ ನನ್ನ ಬದುಕಿನ ಪಯಣ ಮುಂದುವರಿಯುತ್ತಿದೆ. ಚಿನ್ಮಯಿ ಮತ್ತೆ ಮೊದಲಿನಂತೆ ನಗುತ್ತಾ ಬದುಕಲಿ. ಚೈತ್ರಳ ನೆನಪುಗಳು ಸದಾ ನನ್ನ ಬದುಕಿಗೆ ಶಕ್ತಿಯಾಗಿರಲಿ.

1,000ಕ್ಕೂ ಹೆಚ್ಚು ಯುವ ಸೃಜನಶೀಲರು ವೇದಿಕೆಯಲ್ಲಿ ಮಿಂಚಿದರು

• ಉದಯವಾಹಿನಿ, ಬೆಂಗಳೂರು

ಡಬ್ಲ್ಯೂ.ಟಿ.ಎಫ್ (ವಿಟ್ನೆಸಿಂಗ್ ಟ್ರೂ ಫ್ಯಾಷನ್) ಪ್ರಸ್ತುತಪಡಿಸಿದ ಮತ್ತು ಇಗ್ನೈಟ್ ಇಂಡಿಯಾ ಬೆಂಬಲದೊಂದಿಗೆ ನಡೆದ 13ನೇ ಆವೃತ್ತಿಯ ಇಗ್ನೈಟ್ ಮೆರಾಕಿ 2026 – ದಿ ನ್ಯೂ ವೇವ್ 2.0 ಮತ್ತು ಇಗ್ನೈಟ್ ಕೆರಿಯರ್ ಫೆಸ್ಟ್ 2026 ಬೆಂಗಳೂರಿನ ಹೋಟೆಲ್ ಕೋರ್ಟ್‌ಯಾರ್ಡ್‌ನಲ್ಲಿ ಯಶಸ್ವಿಯಾಗಿ ಸಂಪನ್ನಗೊಂಡಿತು. ಈ ಕಾರ್ಯಕ್ರಮಕ್ಕೆ 1,000ಕ್ಕೂ ಹೆಚ್ಚು ನೋಂದಣಿಗಳು ಬಂದಿದ್ದವು, 500ಕ್ಕೂ ಹೆಚ್ಚು ಫೈನಲಿಸ್ಟ್‌ಗಳು ಭಾಗವಹಿಸಿದ್ದರು ಮತ್ತು 400 ಲೈವ್ ಪ್ರಾಜೆಕ್ಟ್ ಪ್ರಸ್ತುತಿಗಳು ನಡೆದವು. ಇದು ಉದಯೋನ್ಮುಖ ವಿನ್ಯಾಸಕರು ಮತ್ತು ನಾವೀನ್ಯಕಾರರಿಗೆ ಇದರ ಮಹತ್ವವನ್ನು ಸಾಬೀತುಪಡಿಸಿತು.

ದಿನವಿಡೀ ನಡೆದ ಈ ಉತ್ಸವದಲ್ಲಿ ಫ್ಯಾಷನ್ ವ್ಯಾಗಿಂಗ್, ಯುಎಕ್ಸ್/ಯುಐ ಡಿಸೈನ್, ಎಐ ವಿಷುಯಲ್ ಡಿಸೈನ್, ಎಐ ಫಿಲ್ಮ್ ಮೇಕಿಂಗ್, ಪ್ರಾಡಕ್ಟ್ ಡಿಸೈನ್, ಕಾನೂನು ಮತ್ತು ನಿರ್ವಹಣೆ, ಕ್ರಿಯೇಟಿವ್ ಜರ್ನಲಿಂಗ್ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಸೇರಿದಂತೆ ಎಂಟು ವಿಭಾಗಗಳಲ್ಲಿ 500ಕ್ಕೂ ಹೆಚ್ಚು ಫೈನಲಿಸ್ಟ್‌ಗಳು ಮತ್ತು 400 ಲೈವ್ ಪ್ರಾಜೆಕ್ಟ್ ಪ್ರಸ್ತುತಿಗಳು ಇದ್ದವು.ಎಂಐಟಿ ಐಡಿ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ (ಪುಣೆ), ಪರ್ಲ್ ಅಕಾಡೆಮಿ, ಇಸ್ಟಿಟುಟೊ ಮರಂಗೋನಿ, ಯುಐಡಿ, ಡಿವೈ ಪಾಟೀಲ್ ಡಿಸೈನ್ ಪುಣೆ, ಆರ್‌ವಿ ಕಾಲೇಜು ಮತ್ತು ಡಬ್ಲ್ಯೂಡಬ್ಲ್ಯೂಐ, ಜಿಎಲ್ಎಸ್ ಅಹಮದಾಬಾದ್, ಯುಡಿಐಟಿ ಯೂನಿವರ್ಸಿಟಿ ದೆಹಲಿ ಎನ್‌ಸಿಆರ್ ಸೇರಿದಂತೆ 11ಕ್ಕೂ ಹೆಚ್ಚು ಪ್ರಮುಖ ಸಂಸ್ಥೆಗಳು ಕೆರಿಯರ್ ಫೆಸ್ಟ್‌ನಲ್ಲಿ ಮಳಿಗೆಗಳನ್ನು ತೆರೆದು ವಿನ್ಯಾಸ, ನಿರ್ವಹಣೆ ಇತರ ಸೃಜನಶೀಲ ಕ್ಷೇತ್ರಗಳಲ್ಲಿ ವೃತ್ತಿ ಅವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದವು. ಎಚ್



ಡಿಎಫ್‌ಸಿ, ಫೋನ್‌ಪೇ, ಹೆಚ್‌ಪಿ, ಎಸ್‌ಎಪಿ ಲ್ಯಾಬ್ಸ್ ಮತ್ತು ಮಿಂತ್ರಾದ ವಿನ್ಯಾಸಕರು ಮತ್ತು ಪ್ರಾಡಕ್ಟ್ ನಾಯಕರನ್ನೊಳಗೊಂಡ ಉದ್ಯಮ ತೀರ್ಪುಗಾರರ ಸಮಿತಿಯು ಕಾರ್ಯಕ್ರಮವನ್ನು ತೀರ್ಪು ನೀಡಿತು. ಮಿಹಿರ್ ಸಿಂಗ್, ಸೋಮಾಂಶು, ಶಾಂಭವಿ ಸಿಂಗ್, ಅಂಕಿತ್ ಆನಂದ್, ಅಂಕನ್ ಸೇನ್ ಗುಪ್ತಾ, ಜಯಶ್ರೀ ಮತ್ತು ನವೀನ್ ಯಾದವ್ ತೀರ್ಪುಗಾರರಾಗಿದ್ದರು. ನಟ, ಸೂಪರ್‌ಮಾಡೆಲ್ ಮತ್ತು ಫಿಟ್‌ನೆಸ್ ಕೋಚ್ ಕೆ.ಸಿ. ಮೈಕಲ್ ಮತ್ತು ಉದ್ಯಮಿ, ನಟ ಮತ್ತು ಮೋಟಾರ್‌ಸ್ಪೋರ್ಟ್ ಉತ್ಸಾಹಿ ಸಂತೋಷ್ ರೆಡ್ಡಿ, ಮಾಡೆಲ್-ನಟಿ ಸಪ್ನಾ ಸಿಂಗ್ ಮತ್ತು ಮಾಡೆಲ್ ಸಿಮ್ರಾನ್ ಚೆಟ್ರಿ ಅವರೊಂದಿಗೆ ಬಹುನಿರೀಕ್ಷಿತ ಇಗ್ನೈಟ್ ಮೆರಾಕಿ ಫ್ಯಾಷನ್ ಶೋವನ್ನು ತೀರ್ಪು ನೀಡಿದರು.

ವಿಜೇತರು – ಫ್ಯಾಷನ್ ಶೋ: 1ನೇ – ಸ್ಯಾಂಗ್ವಿನರಿ (ಡಿಪಿಎಸ್ ಬೆಂಗಳೂರು ಈಸ್ಟ್); 2ನೇ – ನೆಕ್ರೊನೊವಾ (ಡಿಪಿಎಸ್ ಬೆಂಗಳೂರು ಈಸ್ಟ್) ಮತ್ತು ಡಿಸ್ಕ್ವೈಟಿಂಗ್ ಮಾರೋ (ಆರ್ಮಿ ಪಬ್ಲಿಕ್ ಸ್ಕೂಲ್); 3ನೇ – ಥ್ರೋನ್ಸ್ (ಪ್ರೈಮಸ್ ಪಿಯು) ಮತ್ತು ವಿಚಸ್ ಆಫ್ ದಿ ಪಾಸ್ಟ್ (ಜೈನ್ ಕಾಲೇಜು, ಜಯನಗರ). ಫ್ಯಾಷನ್ ವ್ಯಾಗಿಂಗ್: 1ನೇ – ಮೈರಾ ಮೊಹಾಂತಿ (ಆರ್ಮಿ ಪಬ್ಲಿಕ್ ಸ್ಕೂಲ್); 2ನೇ – ಅರ್ಕ ಪ್ರಸಾದ್ (ಜ್ಯೋತಿ ನಿವಾಸ್ ಕಾಲೇಜು); 3ನೇ – ಮರಿಯಾ ಕುಲ್ಸುಮ್ (ಆರ್ಮಿ ಪಬ್ಲಿಕ್ ಸ್ಕೂಲ್). ಪ್ರಾಡಕ್ಟ್ ಡಿಸೈನ್: 1ನೇ – ಅನುಷ್ಕಾ ಬ್ಯಾನರ್ಜಿ ಮತ್ತು ಅರ್ಶ್ (ವಾಗ್ದೇವಿ ವಿಲಾಸ್ ಸ್ಕೂಲ್); 2ನೇ – ಐಶ್ವರ್ಯ ಕಾರ್ತಿಕ್ (ಎನ್‌ಪಿಎಸ್ ಮರತಹಳ್ಳಿ); 3ನೇ – ಸಾಶಾ ರವಿಕುಮಾರ್ ಪಾಟೀಲ್ ಮತ್ತು ಶ್ರಾವಣಿ (ಡಿಪಿಎಸ್ ಬೆಂಗಳೂರು ಈಸ್ಟ್). ಕ್ರಿಯೇಟಿವ್ ಜರ್ನಲಿಂಗ್: ಆನ್ಯಾ ಶಾ (ಡಿಪಿಎಸ್ ಬೆಂಗಳೂರು ಈಸ್ಟ್), ಸುಹಾನಾ ಖಾನ್ (ಫ್ರೀಡಂ ಇಂಟರ್‌ನ್ಯಾಷನಲ್ ಸ್ಕೂಲ್), ರೆಬೆಕಾ ಲಿನು (ಎನ್‌ಪಿಎಸ್ ಮರತಹಳ್ಳಿ). ಯುಐ/ಯುಎಕ್ಸ್ ಡಿಸೈನ್: ವೇಧ ಶ್ರೀ ಮತ್ತು ಶ್ರೀ ಅಂಶು (ಟಿಸಿಐಎಸ್ ಹರಳೂರು). ವಿಜ್ಞಾನ ಮತ್ತು ತಂತ್ರಜ್ಞಾನ: ಲೋಕಜಿತ್ ಶ್ರೀನಿವಾಸನ್ (ಎನ್‌ಪಿಎಸ್ ಮರತಹಳ್ಳಿ). ಈ ಸಂದರ್ಭದಲ್ಲಿ ಮಾತನಾಡಿದ ಡಬ್ಲ್ಯೂ.ಟಿ.ಎಫ್ ಸಂಸ್ಥಾಪಕ ಗೋವಿಂದ್ ಕುಮಾರ್ ಸಿಂಗ್, ಇಗ್ನೈಟ್ ಮೆರಾಕಿ ಯುವ ಸೃಜನಶೀಲರಿಗೆ ಧೈರ್ಯದಿಂದ ತಮ್ಮ ಆಲೋಚನೆಗಳನ್ನು ವ್ಯಕ್ತಪಡಿಸಲು ಮತ್ತು ಸೃಜನಶೀಲತೆಯನ್ನು ವೃತ್ತಿಯಾಗಿ ಪರಿವರ್ತಿಸಲು ವೇದಿಕೆ ನೀಡುತ್ತದೆ ಎಂದು ಹೇಳಿದರು. ಇಗ್ನೈಟ್ ಇಂಡಿಯಾ ಎಜುಕೇಶನ್‌ನ ಸಹ-ಸಂಸ್ಥಾಪಕ ಮತ್ತು ಸಿಒಒ ಕೃಷ್ಣನಂದ್ ಸಿಂಗ್, ವಿದ್ಯಾರ್ಥಿಗಳು, ಮಾರ್ಗದರ್ಶಕರು ಮತ್ತು ಪಾಲುದಾರರ ಶಕ್ತಿಯು ಭಾರತಕ್ಕಾಗಿ ಬಲವಾದ ವಿನ್ಯಾಸ ಪರಿಸರ ವ್ಯವಸ್ಥೆಯನ್ನು ನಿರ್ಮಿಸುತ್ತಿದೆ ಎಂದು ಹೇಳಿದರು.

ಕರುನಾಡು ಸಾಧಕರಿಗೆ ಡಾ||ಪುನೀತ್ ರಾಜ್ ಕುಮಾರ್ ಪ್ರಶಸ್ತಿ ಪ್ರದಾನ ಸಮಾರಂಭ

ಪಾಲಿಕೆ ಆಡಳಿತದಲ್ಲಿ ಪ್ರಥಮ ಆದ್ಯತೆ ಕನ್ನಡ, ನಾಡಿನಲ್ಲಿ ವಾಸ ಮಾಡುವ ಎಲ್ಲರು ಕನ್ನಡ ಬಳಸಬೇಕು-ಮುಖ್ಯ ಆಯುಕ್ತ ಎಂ.ಮಹೇಶ್ವರರಾವ್

• ಉದಯವಾಹಿನಿ, ಬೆಂಗಳೂರು

ಜಿಬಿಎ ಕೇಂದ್ರ ಕಛೇರಿ:ಗ್ರೇಟರ್ ಬೆಂಗಳೂರು ಪ್ರಾಧಿಕಾರ-ಪಾಲಿಕೆಗಳ ನೌಕರರ ಕನ್ನಡ ಸಂಘದ ವತಿಯಿಂದ 71ನೇ ಕನ್ನಡ ರಾಜ್ಯೋತ್ಸವ ಮತ್ತು ಕರುನಾಡು ಸಾಧಕ/ ಸಾಧಕೀಯರಿಗೆ ಕರ್ನಾಟಕ ರತ್ನ ಡಾ||ಪುನೀತ್ ರಾಜ್ ಕುಮಾರ್ ಪ್ರಶಸ್ತಿ ಪ್ರದಾನ ಸಮಾರಂಭ. ಮುಖ್ಯ ಆಯುಕ್ತರಾದ ಎಂ.ಮಹೇಶ್ವರರಾವ್ ರವರು, ನಟ, ನಿರ್ದೇಶಕ ಟಿ.ಎಸ್.ನಾಗಭರಣ, ನಟ, ನಿರ್ದೇಶಕ ಎಸ್.ನಾರಾಯಣ್, ಗೌರವಾಧ್ಯಕ್ಷರು, ಮಾಜಿ ಮಹಾಪೌರರಾದ ಜೆ.ಹುಚ್ಚಪ್ಪ, ನಿವೃತ್ತ ಐಎಎಸ್ ಅಧಿಕಾರಿ ಡಾ||ಸಿ.ಸೋಮಶೇಖರ್, ಕನ್ನಡ ಪರ ಹೋರಾಟಗಾರ ಎಂ.ತಿಮ್ಮಯ್ಯ, ಹಾಸ್ಯನಟ ಮೂ.ಗು.ಸುರೇಶ್, ಜಿಬಿಎ-ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ಅಧ್ಯಕ್ಷರಾದ ಎ.ಅಮೃತ್ ರಾಜ್ ರವರು, ಕನ್ನಡ ಸಂಘದ ಅಧ್ಯಕ್ಷರಾದ ಹೆಚ್.ನಂಜಪ್ಪ, ಗೌರವ ಕಾರ್ಯದರ್ಶಿ ಪಿ.ದಯಾನಂದ್ ರವರು ದೀಪ ಬೆಳಗಿಸಿ ಉದ್ಘಾಟನೆ ಮಾಡಿದರು. ಮುಖ್ಯ ಆಯುಕ್ತರಾದ ಎಂ.ಮಹೇಶ್ವರರಾವ್ ರವರು ಮಾತನಾಡಿ ಪಾಲಿಕೆ ಕನ್ನಡ ಸಂಘದಲ್ಲಿ 71ನೇ ಕನ್ನಡ ರಾಜ್ಯೋತ್ಸವ ಆಚರಿಸಲಾಗುತ್ತಿದೆ. ಆಡಳಿತ ಕಛೇರಿ ಮತ್ತು ನಾಡಿನಲ್ಲಿ ವಾಸಿಸುವ ಎಲ್ಲರು ಕನ್ನಡ ಭಾಷೆ ಬಳಸಬೇಕು. ಪಾಲಿಕೆಯಲ್ಲಿ ಕನ್ನಡ ಭಾಷೆಗೆ ಪ್ರಥಮ ಆದ್ಯತೆ ನೀಡಲಾಗಿದೆ. ಕಲೆ, ಸಾಹಿತ್ಯ ಮತ್ತು ಪಾಲಿಕೆ ಅಧಿಕಾರಿ, ನೌಕರರಿಗೆ ಪುನೀತ್ ರಾಜ್ ಕುಮಾರ್ ಪ್ರಶಸ್ತಿ ನೀಡಲಾಗುತ್ತಿದೆ.

ಪಾಲಿಕೆಯ ಅಧಿಕಾರಿ ಮತ್ತು ನೌಕರರು ಉತ್ತಮ ಕೆಲಸ ಮಾಡುತ್ತಿದ್ದಾರೆ ಅದ್ದರಿಂದ ಇಂದು ಬೆಂಗಳೂರು ನಗರ ವಿಶ್ವಮಾನ್ಯವಾಗಿದೆ ಎಂದು ಹೇಳಿದರು.

ಟಿ.ಎಸ್.ನಾಗಭರಣ ರವರು ಮಾತನಾಡಿ ಕನ್ನಡ ನಿತ್ಯೋತ್ಸವ ಮತ್ತು ಕರ್ನಾಟಕ ರಾಜ್ಯೋತ್ಸವ ಆಚರಿಸಬೇಕು. ನಮ್ಮ ನಾಡಿಗೆ ಪರಂಪರೆ, ಅದ್ಭುತ ಇತಿಹಾಸವಿದೆ. ಭವಿಷ್ಯದಲ್ಲಿ ಕನ್ನಡಿಗರ ಸವಾಲುಗಳು ಏನು ಎಂಬುದು ಚಿಂತಿಸಬೇಕು.ಶಿಕ್ಷಣದಲ್ಲಿ ಕನ್ನಡ ಭಾಷೆ ಉಳಿಸಿಕೊಳ್ಳಬೇಕು. ಪಾಲಿಕೆಯಲ್ಲಿ ಶಾಲೆಗಳು ಉತ್ತಮವಾಗಿದೆ. ಅಂಗ್ಲ ಶಾಲೆ ಹೆಚ್ಚಾಗಿದೆ. ಮಕ್ಕಳ ಮನಸ್ಸಿನಲ್ಲಿ ಕನ್ನಡ ಉಳಿಸಿ, ಬೆಳಸಬೇಕು. ಪಾಲಿಕೆ ಮನಸ್ಸು ಮಾಡಿದರೆ ನಗರದಲ್ಲಿ ಕನ್ನಡ ಭಾಷೆ ಉಳಿಸಿ, ಬೆಳಸಬಹುದು. ಅವರಲ್ಲಿ ಆ ಶಕ್ತಿ ಇದೆ. ಅನ್ಯ ಭಾಷಿಕರಿಗೆ ಪ್ರೀತಿಯಿಂದ ಕನ್ನಡ ಕಲಿಸಿ. ಶಿಕ್ಷಣ, ಉದ್ಯೋಗ, ವ್ಯವಹಾರಿಕೆಯಲ್ಲಿ ಕನ್ನಡ ಭಾಷೆ ಬಳಸಿ. ಎಂದು ಹೇಳಿದರು.ಎಸ್.ನಾರಾಯಣ್ ರವರು ಮಾತನಾಡಿ ಬೆಂಗಳೂರುನಗರ ಸುಂದರ, ಸ್ವಚ್ಛವಾಗಿ ಇರಲು ಪಾಲಿಕೆ ಶ್ರಮವಿದೆ. ಪೌರ ಕಾರ್ಮಿಕರು ಸ್ವಚ್ಛತಾ ವಾರಿಯರ್ಸ್‌ಗಳು ಏಕೀಕರಣಕ್ಕೆ ಶ್ರಮಿಸಿದ ಹೋರಾಟಗಾರರಿಗೆ ಸ್ಮರಣೆ ಮಾಡುವ ದಿನವಾಗಿದೆ.ಕನ್ನಡ ಬೆಳಯುತ್ತಿದೆ ಚಿಂತನೆ ಮಾಡಬೇಡಿ, ಕನ್ನಡ ಬಳಸಿ ಸಾಕು. ಮನೆಯಲ್ಲಿಯೆ ಕನ್ನಡ ಭಾಷೆ ಬಳಸುವ ಅಭ್ಯಾಸ ಮಾಡಿಸಿಕೊಳ್ಳಬೇಕು. ಕನ್ನಡ ಭಾಷೆ ಶ್ರೀಮಂತ ಭಾಷೆ, ಮಾತನಾಡಲು ಚನ್ನ. ಪುನೀತ್ ರಾಜ್ ಕುಮಾರ್ ಅವರು ಜೀವಂತವಾಗಿ ಇರಬೇಕಾಗಿತ್ತು. ಇನ್ನು ಹೆಚ್ಚು ಚಲನಚಿತ್ರಗಳಲ್ಲಿ ಅಭಿನಯಿಸಬೇಕಿತ್ತು ಎಂಬುದು ಕನ್ನಡಿಗರ ಆಶಯವಾಗಿತ್ತು. ಡಾ.ರಾಜ್ ಕುಮಾರ್ ಅವರ ಕುಟುಂಬದ ಎಲ್ಲರು ಸರಳತೆಯ ಮೂರ್ತಿಯಾಗಿದ್ದರು. ಪುನೀತ್ ರಾಜ್ ಕುಮಾರ್‌ರವರಲ್ಲಿ ದೈವಿಕ ಅಂಶವಿತ್ತು ಅದ್ದರಿಂದ ಇಷ್ಟು ಜನರ ಪ್ರೀತಿಗಳಿಸಲು ಸಾಧ್ಯವಾಯಿತು.ಜೆ.ಹುಚ್ಚಪ್ಪರವರು ಮಾತನಾಡಿ ನಮ್ಮ ಕನ್ನಡ ಸಂಘ ಸ್ಥಾಪನೆಯಾಗಿ 30ವರ್ಷಗಳು ಸಂದಿದೆ. ಸ್ವಂತ ವೆಚ್ಚದಲ್ಲಿ ನಡೆಯುತ್ತಿದೆ. ಅಂತರಾಷ್ಟ್ರ, ರಾಷ್ಟ್ರ ಮಟ್ಟದಲ್ಲಿ ಕನ್ನಡ ರಾಜ್ಯೋತ್ಸವ ನಮ್ಮ ಸಂಘ ಅಚರಿಸುತ್ತಿದೆ. ಕನ್ನಡ ಭಾಷೆ ಗೌರವ ಕೊಡುವುದು ತಾಯಿಗೆ ಗೌರವ ಕೊಟ್ಟಂತೆ. ಅನ್ಯ ಭಾಷಿಕರು ಕನ್ನಡ ಭಾಷೆ ಕಲಿಯಬೇಕು. ಹಳೆಯ ಕನ್ನಡ ಚಲನಚಿತ್ರಗಳು ಜೀವನಕ್ಕೆ





ಹತ್ತಿರವಾಗಿತ್ತು ಇಂದಿನ ಚಲನಚಿತ್ರಗಳು ಸಮಾಜಕ್ಕೆ ಮಾರಕವಾಗಿದೆ. ನಾಡಿನ ಸಾಧಕರ ಜೊತೆಯಲ್ಲಿ ಪಾಲಿಕೆ ಉತ್ತಮ ಅಧಿಕಾರಿ, ನೌಕರರಿಗೆ ಡಾ.ಪುನೀತ್ ರಾಜ್ ಕುಮಾರ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತಿದೆ ಎಂದು ಹೇಳಿದರು.ಎ.ಅಮೃತ್ ರಾಜ್ ರವರು ಮಾತನಾಡಿ ಪಾಲಿಕೆ ಕನ್ನಡ ಸಂಘವು ಪವರ್ ಸ್ಟಾರ್ ಡಾ.ಪುನೀತ್ ರಾಜ್ ಕುಮಾರ್ ರವರ ಸ್ಮರಣೆಯಲ್ಲಿ ನಾಡು, ನುಡಿ ಮತ್ತು ಕಲೆ, ಸಾಹಿತ್ಯ ಸೇವೆ ಮಾಡಿದವರನ್ನ ಗುರುತಿಸಿ ಗೌರವಿಸಿ ಸನ್ಮಾನಿಸಲಾಗುತ್ತಿದೆ. ಅಂತರಾಷ್ಟ್ರ, ರಾಷ್ಟ್ರ ಮತ್ತು ರಾಜ್ಯ ಮಟ್ಟದಲ್ಲಿ ಕರ್ನಾಟಕ ರಾಜ್ಯೋತ್ಸವ ಅಚರಿಸಿ ಕನ್ನಡ ಭಾಷೆಯನ್ನು ಉಳಿಸಿ, ಬೆಳಸಲಾಗುತ್ತಿದೆ ಎಂದು ಹೇಳಿದರು.

ಕರ್ನಾಟಕ ರತ್ನ ಡಾ.ಪುನೀತ್ ರಾಜ್ ಕುಮಾರ್ ಪ್ರಶಸ್ತಿಯನ್ನು ನಟ ಬಾಲರಾಜ್, ಜಾನಪದ ಗಾಯಕ ಗುರುರಾಜ್ ಹೊಸಕೋಟೆ, ನಟ ಶರತ್ ಲೋಹಿತಾಶ್ವ, ನಟಿ ಭವಾನಿ ಪ್ರಕಾಶ್, ಕನ್ನಡ ಪರ ಹೋರಾಟಗಾರರು, ಸಾಹಿತ್ಯ, ಸಂಗೀತ ಸೇವೆ ಮತ್ತು ಪತ್ರಕರ್ತರಿಗೆ ಹಾಗೂ ಪಾಲಿಕೆಯ ಅಧಿಕಾರಿ, ನೌಕರರಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ಅವಘಡಗಳಿಂದ ಕಬ್ಬಿನ ಬೆಳೆ ಬೆಂಕಿಗೆ ಆಹುತಿಯಾಗಿ ರೈತರು ಅಪಾರ ಪ್ರಮಾಣದ ನಷ್ಟ ಅನುಭವಿಸಿದ್ದಾರೆ

ರೈತರು, ಗ್ರಾಮೀಣ ಜನರ ಸಮಸ್ಯೆಗಳಿಗೆ ಆದ್ಯತೆ ನೀಡಿ

• **ಉದಯವಾಹಿನಿ ಬೀದರ್:**

ಬೀದರ್ ದಕ್ಷಿಣ ವಿಧಾನಸಭಾ ಕ್ಷೇತ್ರದ ರೈತರು, ಗ್ರಾಮೀಣ ಭಾಗದ ಜನರು ಹಾಗೂ ಸಾರ್ವಜನಿಕರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸಿ ಪರಿಹಾರ ಕಲ್ಪಿಸಬೇಕು. ರೈತರ ಬೆಳೆ ನಷ್ಟ, ವಿದ್ಯುತ್ ಅವಘಡ, ಕುಡಿಯುವ ನೀರಿನ ಸಮಸ್ಯೆ, ಪಶುಗಳಿಗೆ ಮೇವಿನ ಕೊರತೆ ಹಾಗೂ ಮಹಾನಗರ ಪಾಲಿಕೆಗೆ ಸೇರ್ಪಡೆಗೊಂಡ ಗ್ರಾಮಗಳ ಅಭಿವೃದ್ಧಿ ಕಾಮಗಾರಿಗಳ ವಿಳಂಬ ಸೇರಿದಂತೆ ಹಲವು ಪ್ರಮುಖ ವಿಷಯಗಳನ್ನು ಬೀದರ್ ದಕ್ಷಿಣ ಕ್ಷೇತ್ರದ ಶಾಸಕರಾದ ಡಾ. ಶೈಲೇಂದ್ರ ಬೆಲ್ದಾಳೆ ಅವರು ಜಿಲ್ಲಾ ಕೆಡಿಪಿ ಸಭೆಯಲ್ಲಿ ಪ್ರಸ್ತಾಪಿಸಿ, ಉಸ್ತುವಾರಿ ಸಚಿವರು ಹಾಗೂ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳ ಗಮನಕ್ಕೆ ತಂದರು. ಸಭೆಯಲ್ಲಿ ಕ್ಷೇತ್ರದ ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಿದ ಶಾಸಕರು, ಕೇವಲ ಅನುದಾನ ಬಿಡುಗಡೆ ಮಾಡಿದರೆ ಸಾಲದು, ಬಿಡುಗಡೆಯಾದ ಅನುದಾನ ಸಮರ್ಪಕವಾಗಿ ಬಳಕೆಯಾಗಬೇಕು ಹಾಗೂ ಸಾರ್ವಜನಿಕರಿಗೆ ಅದರ ಪ್ರಯೋಜನ ತಲುಪುವಂತೆ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳ್ಳಬೇಕು ಎಂದು ಒತ್ತಾಯಿಸಿದರು.

1: ನಷ್ಟ ಅನುಭವಿಸಿದ ರೈತರಿಗೆ ತಕ್ಷಣ ಪರಿಹಾರ ನೀಡಿ

2: ಅಪಾಯ ವಿದ್ಯುತ್ ತಂತಿಗಳನ್ನು ತಕ್ಷಣ ಸರಿಪಡಿಸಿ

3: ಕುಡಿಯುವ ನೀರಿಗಾಗಿ ಅಗತ್ಯ ಅನುದಾನ ಬಿಡುಗಡೆ

ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ವಿದ್ಯುತ್ ಅವಘಡಗಳಿಂದ ಕಬ್ಬಿನ ಬೆಳೆ ಬೆಂಕಿಗೆ ಆಹುತಿಯಾಗಿ ರೈತರು ಅಪಾರ ಪ್ರಮಾಣದ ನಷ್ಟ ಅನುಭವಿಸಿದ್ದಾರೆ. ವರ್ಷಪೂರ್ತಿ ಕಷ್ಟಪಟ್ಟು ಬೆಳೆದ ಬೆಳೆ ಕಣ್ಣೆದುರೇ ಸುಟ್ಟುಹೋಗಿರುವುದರಿಂದ ರೈತರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದಾರೆ. ಇಂತಹ ಸಂತ್ರಸ್ತ ರೈತರಿಗೆ ಸರ್ಕಾರ ತಕ್ಷಣ ಪರಿಹಾರ ಒದಗಿಸಬೇಕು. ಬೆಳೆ ನಷ್ಟ ಸಮೀಕ್ಷೆ ನಡೆದು ಬರ ಘೋಷಣೆ ಆಗಿದೆ ರೈತರಿಗೆ ಪರಿಹಾರ ವಿತರಿಸಲು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಗ್ರಾಮೀಣ ಪ್ರದೇಶಗಳಲ್ಲಿ ಜಮೀನುಗಳ ಮೇಲೆ ಹಾದುಹೋಗಿರುವ ವಿದ್ಯುತ್ ತಂತಿಗಳು ಹಾಗೂ ಹಾನಿಗೊಳಗಾದ ವಿದ್ಯುತ್ ಕಂಬಗಳಿಂದ ಅಪಘಾತಗಳ ಸಂಭವ ಹೆಚ್ಚಾಗುವ ಆತಂಕವಿದೆ. ರೈತರ ಬೆಳೆಗಳಿಗೆ ಬೆಂಕಿ ತಗಲುವ ಘಟನೆಗಳನ್ನು ತಡೆಗಟ್ಟಲು ವಿದ್ಯುತ್ ಇಲಾಖೆಯ ಅಧಿಕಾರಿಗಳು ಕ್ಷೇತ್ರದಾದ್ಯಂತ ಪರಿಶೀಲನೆ ನಡೆಸಿ, ಅಪಾಯಕಾರಿ ತಂತಿಗಳನ್ನು ತಕ್ಷಣ ದುರಸ್ತಿಗೊಳಿಸಬೇಕು. ರೈತರು ಮತ್ತು ಸಾರ್ವಜನಿಕರ ಜೀವ ಹಾಗೂ ಆಸ್ತಿಗೆ ಹಾನಿಯಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು ಎಂದು ಒತ್ತಾಯಿಸಿದರು.


ಉದಯವಾಹಿನಿ ಚಿತ್ರ

ಅಕಾಲಿಕವಾಗಿ ಜೀವ ಕಳೆದುಕೊಂಡವರ ಕುಟುಂಬಗಳು ಆರ್ಥಿಕ ಹಾಗೂ ಮಾನಸಿಕ ಸಂಕಷ್ಟ ಎದುರಿಸುತ್ತಿವೆ. ಇಂತಹ ಸಂದರ್ಭದಲ್ಲಿ ಸರ್ಕಾರ ಸಂತ್ರಸ್ತ ಕುಟುಂಬಗಳ ನೆರವಿಗೆ ಧಾವಿಸಬೇಕು. ಮಾನವೀಯ ದೃಷ್ಟಿಯಿಂದ ತಲಾ 5 ಲಕ್ಷ ಆರ್ಥಿಕ ಪರಿಹಾರ ಒದಗಿಸಿ, ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಒದಗಿಸಬೇಕು ಎಂದು ಸಭೆಯಲ್ಲಿ ಪ್ರಸ್ತಾಪಿಸಿದರು.
-ಶಾಸಕ ಡಾ. ಶೈಲೇಂದ್ರ ಬೆಲ್ದಾಳೆ

ರಾಜಗೀರ ಗ್ರಾಮದಲ್ಲಿ ಸಂಭವಿಸಿದ ಅಪಘಾತದಲ್ಲಿ ಮೃತಪಟ್ಟವರ 7 ಕುಟುಂಬಗಳಿಗೆ ಹಾಗೂ ಮಾಂಜಾ ದಾರದಿಂದ ಸಂಭವಿಸಿದ ದುರಂತದಲ್ಲಿ ಮೃತಪಟ್ಟ ಕುಟುಂಬಕ್ಕೆ ತಲಾ 5 ಲಕ್ಷ ಪರಿಹಾರ ನೀಡಬೇಕು ಎಂದು ಸರ್ಕಾರವನ್ನು ಒತ್ತಾಯಿಸಿದರು.

ಬೇಸಿಗೆ ಹಾಗೂ ತೀವ್ರ ಬರ ಪರಿಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶದ ಜನರು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ನಿರ್ಮಾಣವಾಗದಂತೆ ಮುನ್ನೆಚ್ಚರಿಕೆ ವಹಿಸಬೇಕು. ಪ್ರತಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ಗುರುತಿಸಿ, ಅಗತ್ಯವಿರುವ ಕಡೆ ಬೋರ್‌ವೆಲ್ ದುರಸ್ತಿ, ಪೈಪ್‌ಲೈನ್ ಕಾಮಗಾರಿ ಹಾಗೂ ಟ್ಯಾಂಕರ್ ಮೂಲಕ ನೀರು ಪೂರೈಕೆಗೆ ಅಗತ್ಯ ಅನುದಾನ ಬಿಡುಗಡೆ ಮಾಡಬೇಕು.

ಜನರಿಗೆ ಶುದ್ಧ ಕುಡಿಯುವ ನೀರು ದೊರೆಯುವಂತೆ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು ಎಂದು ತಿಳಿಸಿದರು. ಬರ ಪರಿಸ್ಥಿತಿಯಿಂದ ಜಾನುವಾರುಗಳಿಗೂ ತೊಂದರೆಯಾಗುವ ಸಾಧ್ಯತೆ ಇರುವುದರಿಂದ ಪಶುಗಳಿಗೆ ಅಗತ್ಯ ಪ್ರಮಾಣದಲ್ಲಿ ಮೇವು ಲಭ್ಯವಾಗುವಂತೆ ಕ್ರಮ ಕೈಗೊಳ್ಳಬೇಕು. ಜಾನುವಾರುಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸುವುದರ ಜೊತೆಗೆ, ಮೇವಿನ ಕೊರತೆ ಉಂಟಾಗದಂತೆ ಮುಂಚಿತವಾಗಿ ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು. ರೈತರ ಜಾನುವಾರುಗಳ ಸಂರಕ್ಷಣೆಗೆ ಸರ್ಕಾರ ವಿಶೇಷ ಗಮನ ಹರಿಸಬೇಕು ಎಂದು ಒತ್ತಾಯಿಸಿದರು.

ಕಥೆ ಹೇಳುವ ಸ್ಪರ್ಧೆಯಲ್ಲಿ ಬಹುಮಾನ ಪಡೆದ ಕು .ದಿಯಾಗೌಡಕೆ. ಆರ್

• **ಉದಯವಾಹಿನಿ ಹಾಸನ**


ಉದಯವಾಹಿನಿ ಚಿತ್ರ

ನಗರದ ಉದಯ ಗಿರಿ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಇತ್ತೀಚಿಗೆ ನಡೆದ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಸಾಹಿತಿ. ಶಿಕ್ಷಕಿ.ಹೆಚ್. ಎಸ್. ಪ್ರತಿಮಾ ಹಾಸನ್ ರವರ ಮಗಳು ಆದಿ ಚುಂಚನಗಿರಿ ಶಾಲೆಯಲ್ಲಿ ಓದುತ್ತಿರುವ 3ನೇ ತರಗತಿಯ ವಿದ್ಯಾರ್ಥಿನಿ ಕು ದಿಯಾ ಗೌಡ ಕೆ. ಆರ್. ರವರು ಕಥೆ ಹೇಳುವ ಸ್ಪರ್ಧೆಯಲ್ಲಿ ಎರಡನೇ ಬಹುಮಾನ ಪಡೆದಿರುತ್ತಾರೆ. ಕಾರ್ಯಕ್ರಮದಲ್ಲಿ ಹಲವಾರು ಶಿಕ್ಷಕ ವೃಂದ ಹಾಗೂ ಸ್ಪರ್ಧೆಯ ವಿದ್ಯಾರ್ಥಿಗಳು ಇದ್ದರು. ಬಹುಮಾನ ಪಡೆದಂತಹ ಕು ದಿಯಾ ಗೌಡ ಕೆ ಆರ್ ಗೆ ಅಜ್ಜಿ ಶ್ರೀಮತಿ ನೀಲಮ್ಮ ಸುರೇಶ್ ರವರು, ಮಾಮಾ ಮಂಜುನಾಥ್ ಹೆಚ್ ಎಸ್ ಆರೋಗ್ಯ ನಿರೀಕ್ಷಣಾಧಿಕಾರಿ, ಮತ್ತು ಪತ್ರಿಕಾ ಬಳಗದವರು, ಪ್ರತಿಮಾ ಸಾಮಾಜಿಕ ಸಾಂಸ್ಕೃತಿಕ ಟ್ರಸ್ಟ್ ನ ಪದಾಧಿಕಾರಿಗಳು, ಇನ್ನು ಹಲವರು ಅಭಿನಂದನೆಗಳನ್ನು ತಿಳಿಸಿದ್ದಾರೆ.

ವಿಜೃಂಭಣೆಯಿಂದ ನಡೆದ ಪ್ರತಿಭಾ ಕಾರಂಜಿ

• **ಉದಯವಾಹಿನಿ ವಿಜಯಪುರ:**



ಉದಯವಾಹಿನಿ ಚಿತ್ರ

ಪ್ರತಿಭಾಕಾರಂಜಿ ಮಕ್ಕಳಲ್ಲಿನ ಪ್ರತಿಭೆಗಳನ್ನು ಹೊರತರುವ ವೇದಿಕೆಯಾಗಿದೆ. ಇಂತಹ ವೇದಿಕೆಯಲ್ಲಿ ನಡೆಯುವ ಸ್ಪರ್ಧೆಗಳಲ್ಲಿ ವಿದ್ಯಾರ್ಥಿಗಳು ಹೆಚ್ಚೆಚ್ಚು ಭಾಗವಹಿಸಿ, ರಾಜ್ಯ, ರಾಷ್ಟ್ರಮಟ್ಟದಲ್ಲಿ ಪ್ರಶಸ್ತಿಗಳನ್ನು ಗಿಟ್ಟಿಸಿಕೊಳ್ಳಬೇಕೆಂದು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ರಾಘವೇಂದ್ರ ಹೊಸುರು ಅವರು ಹೇಳಿದರು.

ನಗರದ ಚಿನ್ಮಯಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ, ಕೆ.ಬಿ.ಎಸ್ ನಂ-28ರ ವ್ಯಾಪ್ತಿಯಕ್ಲಸ್ಟರ್ ಮಟ್ಟದ ಪ್ರತಿಭಾಕಾರಂಜಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. 35ನೇ ವಾರ್ಡ್ ಮೆಂಬರ್ ಅವರಾದ ರಾಜುಕುರಿಯವರು ಮಕ್ಕಳಲ್ಲಿನ ಪ್ರತಿಭೆಗಳನ್ನು ಹೊರಗೆತರಲಿಕ್ಕೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳು ಹೆಚ್ಚು ಮಹತ್ವದ್ದಾಗಿದೆ. ಪ್ರತಿಭೆಗಳನ್ನು ಚಿಕ್ಕಂದರಿಂದಲ್ಲೇ ಗುರುತಿಸುವುದರಿಂದ ಮಕ್ಕಳಿಗೆ ಉತ್ತಮ ಕಲಾವಿದರನ್ನಾಗಿ ರೂಪಿಸಲು ಸಾಧ್ಯವಾಗುತ್ತದೆ. ಶಿಕ್ಷಕರು ಮಕ್ಕಳಲ್ಲಿನ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸಬೇಕು ಎಂದು ಹೇಳಿದರು.

ಚಿನ್ಮಯಿ ಶಾಲೆಯ ಪ್ರಾಂಶುಪಾಲರಾದ ಪ್ರತಿಭಾ ಪಾಟೀಲ ಮಾತನಾಡಿ, ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಮಕ್ಕಳು ಆ ವಿಷಯದಲ್ಲಿ 100ರಷ್ಟು ಶ್ರಮ ನೀಡಬೇಕು. ಸೋಲು-ಗೆಲುವು ಒಂದೇ ನಾಣ್ಯದಎರಡು ಮುಖಗಳಿದ್ದಂತೆ ಸೋಲಿಗೆ ಕುಗ್ಗದೆ ಗೆಲುವಿಗೆ ಹಿಗ್ಗದೇಎರಡನ್ನು ಸಮಾನವಾಗಿ ಸ್ವೀಕರಿಸಿಬೇಕು ಎಂದರು.

ಪ್ರತಿಭಾಕಾರಂಜಿ ಅಂಗವಾಗಿ ಶಾಲೆಯ ಆವರಣವನ್ನು ತೆಂಗು ಹಾಗೂ ಮಾವಿನ ತಳಿರು ತೋರಣಗಳಿಂದ ಅಲಂಕಾರ ಮಾಡಲಾಗಿತ್ತು. ಬೆಳಗ್ಗೆಯಿಂದ ಸಂಜೆವರೆಗೂ ವಿದ್ಯಾರ್ಥಿಗಳು ನಾನಾ ಸ್ಪರ್ಧೆಗಳಲ್ಲಿ ಪಾಲ್ಗೊಂಡು ಗಮನಸೆಳೆದರು. 1 ರಿಂದ 4ನೇ ತರಗತಿ, 5 ರಿಂದ 7 ಮತ್ತು 8 ರಿಂದ 12ನೇ ತರಗತಿ ಈ ಮೂರು ವಿಭಾಗಗಳಲ್ಲಿ ವಿವಿಧ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

30 ಶಾಲೆಯ ವಿದ್ಯಾರ್ಥಿಗಳು ಆಶುಭಾಷಣ ಸ್ಪರ್ಧೆ, ಕನ್ನಡ, ಹಿಂದಿ, ಇಂಗ್ಲೀಷ್‌ಕಂಠಪಾಠ ಸ್ಪರ್ಧೆ, ಧಾರ್ಮಿಕ ಪಠಣ, ಲಘು ಸಂಗೀತ, ಕಥೆ ಹೇಳುವುದು, ಚಿತ್ರಕಲೆ ಮತ್ತು ಬಣ್ಣ ಹಚ್ಚುವಿಕೆ, ಅಭಿನಯಗೀತೆ, ಭಕ್ತಿಗೀತೆ, ಆಶುಭಾಷಣ, ಮಿಮಿಕ್ರಿ, ಕವನ ವಾಚನ, ಜನಪದಗೀತೆ ಸೇರಿದಂತೆ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದರು.

ಕಂಕನವಾಡಿ ಕ್ರಾಸ್‌ನಲ್ಲಿ ರೈತರ ಆಕ್ರೋಶ ಸ್ಫೋಟ!

• **ಉದಯವಾಹಿನಿ ಜಮಖಂಡಿ:**

ಕಬ್ಬಿಗೆ ಪ್ರತಿ ಟನ್‌ಗೆ 5,500 ಬೆಲೆ ನಿಗದಿಪಡಿಸಬೇಕೆಂದು ಆಗ್ರಹಿಸಿ ನಡೆದ ರೈತರ ಹೋರಾಟಕ್ಕೆ ಇನ್ನೂ ಸ್ಪಷ್ಟ ಅಂತಿಮ ನಿರ್ಧಾರ ಸಿಗದ ಹಿನ್ನೆಲೆಯಲ್ಲಿ, ಜಮಖಂಡಿ ತಾಲ್ಲೂಕಿನ ಕಂಕನವಾಡಿ ಕ್ರಾಸ್‌ನಲ್ಲಿ ರೈತರು ಕಬ್ಬು ತುಂಬಿಕೊಂಡು ಸಾಗುತ್ತಿದ್ದ ಟ್ರ್ಯಾಕ್ಟರ್ ಗಳನ್ನು ತಡೆದು ಪ್ರತಿಭಟನೆ ನಡೆಸಿದರು.

ಕಾರ್ಖಾನೆ ಮಾಲೀಕರ ಧೋರಣೆ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿದ ರೈತರು, ನ್ಯಾಯಯುತ ದರ ನಿಗದಿಯಾಗುವವರೆಗೆ ಕಬ್ಬು ಕಟಾವು ಮಾಡಬಾರದು ಎಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಮಾತನಾಡಿದ ರೈತ ಮುಖಂಡ ಸದಾಶಿವ ಕವಟಗಿ, ಜಮಖಂಡಿ ತಾಲ್ಲೂಕಾಡಳಿತ ಸೌಧದ ಎದುರು ಸತತ 11 ದಿನಗಳ ಕಾಲ ನಡೆದ ರೈತರ ಹೋರಾಟವು ಕೇವಲ ಒಂದು ಜಿಲ್ಲೆಯ ಹೋರಾಟವಾಗಿರಲಿಲ್ಲ, ಬೆಳಗಾವಿ, ಬಾಗಲಕೋಟೆ ಹಾಗೂ ವಿಜಯಪುರ ಸೇರಿದಂತೆ ರಾಜ್ಯದ ವಿವಿಧ ಭಾಗಗಳ ರೈತರು ಒಗ್ಗಟ್ಟಿನಿಂದ ಪ್ರತಿ ಟನ್ ಕಬ್ಬಿಗೆ 5,500 ಬೆಲೆ ನೀಡುವಂತೆ ಆಗ್ರಹಿಸಿದ್ದರು. ಆದರೆ ರೈತರ ಪ್ರಮುಖ ಬೇಡಿಕೆ ಇನ್ನೂ ಈಡೇರಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.



ಉದಯವಾಹಿನಿ ಚಿತ್ರ

ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಕಾರ್ಖಾನೆ ಮಾಲೀಕರು ಮೊದಲ ಕಂತಾಗಿ ಪ್ರತಿ ಟನ್‌ಗೆ 3,600 ನೀಡುವುದಾಗಿ ಒಪ್ಪಿಕೊಂಡಿದ್ದರು.ಕಾರ್ಖಾನೆಗಳನ್ನು ಆರಂಭಿಸಿದ ನಂತರ ಸರ್ಕಾರದ ನಿರ್ಧಾರಕ್ಕೆ ಅನುಗುಣವಾಗಿ ಮುಂದಿನ ಹಣ ಪಾವತಿಸುವ ಭರವಸೆ ನೀಡಿದ್ದರು. ಈ ಒಪ್ಪಂದದ ಆಧಾರದ ಮೇಲೆ ರೈತರು ಹೋರಾಟವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಒಪ್ಪಿಕೊಂಡಿದ್ದರು ಎಂದು ತಿಳಿಸಿದರು.

ಜಿಲ್ಲಾಡಳಿತದ ಸಮ್ಮುಖದಲ್ಲಿ 3,600 ನೀಡುವುದಾಗಿ ಒಪ್ಪಿಕೊಂಡಿದ್ದ ಕಾರ್ಖಾನೆ ಮಾಲೀಕರು ಈಗ ಮಾತು ಬದಲಿಸುತ್ತಿರುವುದು ಸರಿಯಲ್ಲ ಎಂದು ಕವಟಗಿ ಕಿಡಿಕಾರಿದರು.

ಭದ್ರಾ ನದಿ ಸೇತುವೆ ಪುನರ್ ನಿರ್ಮಾಣಕ್ಕೆ 42 ಕೋಟಿ ಅನುಮೋದನೆ

• **ಉದಯವಾಹಿನಿ ಭದ್ರಾವತಿ:**


ಉದಯವಾಹಿನಿ ಚಿತ್ರ

'ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಸಿದ್ದಾರೂಢ ನಗರಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಯಲ್ಲಿ ಭದ್ರಾ ನದಿಗೆ ಅಡ್ಡಲಾಗಿ ಕಟ್ಟಿರುವ ಸೇತುವೆಯನ್ನು ?42 ಕೋಟಿ ವೆಚ್ಚದಲ್ಲಿ ಪುನರ್ ನಿರ್ಮಾಣ ಮಾಡಲು ಈಚೆಗೆ ನಡೆದ ರಾಜ್ಯ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ' ಎಂದು ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಯಮಿತದ ಅಧ್ಯಕ್ಷ ಹಾಗೂ ಶಾಸಕ ಬಿ.ಕೆ. ಸಂಗಮೇಶ್ವರ ಹೇಳಿದ್ದಾರೆ. 'ಪ್ರಸ್ತುತ ಇರುವ ಸೇತುವೆ ಮಳೆಗಾಲದಲ್ಲಿ ಭದ್ರಾ ಜಲಾಶಯದಿಂದ ಹೆಚ್ಚುವರಿ ನೀರು ಬಿಡುಗಡೆ ಮಾಡಿದಾಗ ಮುಳುಗಡೆಯಾಗುತ್ತದೆ.

ಸೇತುವೆಯ ಅಗಲವೂ ಕಿರಿದಾಗಿರುವುದರಿಂದ ಸಂಚಾರಕ್ಕೆ ಅನನುಕೂಲವಾಗುತ್ತಿತ್ತು. ಆದ್ದರಿಂದ ಸೇತುವೆ ಪುನರ್ ನಿರ್ಮಾಣ ಮಾಡಲು ಪ್ರಸ್ತಾವ ಸಲ್ಲಿಸಲಾಗಿತ್ತು' ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪುನರ್ ನಿರ್ಮಾಣವಾಗಲಿರುವ ಸೇತುವೆಯ ಉದ್ದ 210 ಮೀಟರ್, ಅಗಲ 19.61 ಮೀಟರ್ ಇರುತ್ತದೆ. ಆರ್‌ಸಿಸಿ ಡಕ್ ಸ್ಲ್ಯಾಬ್ ಅಳವಡಿಸಿಕೊಂಡು ಸೇತುವೆ ಪುನರ್ ನಿರ್ಮಾಣ ಮಾಡಲಾಗುತ್ತದೆ ಎಂದು ಹೇಳಿದ್ದಾರೆ.

ನ.30ರವರೆಗೆ ಕಾಲುವೆಗಳಿಗೆ ನೀರು ಹರಿಸದಿದ್ದರೆ ಉಗ್ರ ಹೋರಾಟ

• **ಉದಯವಾಹಿನಿ ಯಾದಗಿರಿ:**


ನಾರಾಯಣಪುರ ಜಲಾಶಯದ ಎಡದಂಡೆ ಹಾಗೂ ಬಲದಂಡೆ ಕಾಲುವೆಗಳಿಗೆ ನವೆಂಬರ್ 30ರವರೆಗೆ ನಿರಂತರವಾಗಿ ನೀರು ಹರಿಸಿ ರೈತರ ಬೆಳೆಗಳನ್ನು ಉಳಿಸಲು ಸರ್ಕಾರ ತಕ್ಷಣ ಕ್ರಮ ಕೈಗೊಳ್ಳಬೇಕು. ಇಲ್ಲವಾದಲ್ಲಿ ಮುಂದಿನ ದಿನಗಳಲ್ಲಿ ಹೋರಾಟವನ್ನು ಮತ್ತಷ್ಟು ತೀವ್ರಗೊಳಿಸಲಾಗುವುದು ಎಂದು ಮಾಜಿ ಸಚಿವ ನರಸಿಂಹ ನಾಯಕ (ರಾಜುಗೌಡ) ರಾಜ್ಯ ಸರ್ಕಾರಕ್ಕೆ ಎಚ್ಚರಿಕೆ ನೀಡಿದರು.

ಕಾಲುವೆಗಳಿಗೆ ನೀರು ಹರಿಸುವಂತೆ ಆಗ್ರಹಿಸಿ ಹಮ್ಮಿಕೊಂಡಿದ್ದ ಯಾದಗಿರಿ ಬಂದ್ ಹಾಗೂ ಬೃಹತ್ ಪ್ರತಿಭಟನೆಯ ಬಹಿರಂಗ ಸಭೆಯಲ್ಲಿ ಮಾತನಾಡಿದ ಅವರು, ರೈತರ ಹಿತಾಸಕ್ತಿ ಕಾಪಾಡುವಲ್ಲಿ ರಾಜ್ಯ ಸರ್ಕಾರ ಮತ್ತು ಜಿಲ್ಲೆಯ ಜನಪ್ರತಿನಿಧಿಗಳು ವಿಫಲರಾಗಿದ್ದಾರೆ ಎಂದು ಆರೋಪಿಸಿದರು.

ಕೃಷ್ಣಾ ನದಿಯಲ್ಲಿ ನೀರಿದ್ದರೂ ಜಿಲ್ಲೆಯ ರೈತರಿಗೆ ನೀರು ಒದಗಿಸಲು ಸಾಧ್ಯವಾಗುತ್ತಿಲ್ಲ. ಬೆಳೆಗಳನ್ನು ಉಳಿಸಿಕೊಳ್ಳಲು ರೈತರು ಬೀದಿಗಿಳಿದು ಹೋರಾಟ ನಡೆಸುವ ಪರಿಸ್ಥಿತಿ ನಿರ್ಮಾಣವಾಗಿರುವುದು ದುರದೃಷ್ಟಕರ. ತೆಲಂಗಾಣಕ್ಕೆ ನೀರು ಹರಿಸಲು ಸಾಧ್ಯವಾಗುವುದಾದರೆ ನಮ್ಮ ಭಾಗದ ರೈತರಿಗೆ ನೀರು ನೀಡಲು ಏಕೆ ಸಾಧ್ಯವಿಲ್ಲ ಎಂದು ಪ್ರಶ್ನಿಸಿದರು. ಕುಡಿಯುವ ನೀರಿನ ಉದ್ದೇಶಕ್ಕಾಗಿ ತೆಲಂಗಾಣಕ್ಕೆ ನೀರು ಹರಿಸಲಾಗಿದೆ ಎಂಬ ಸಮರ್ಥನೆಯನ್ನು ಒಪ್ಪಲು ಸಾಧ್ಯವಿಲ್ಲ. ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಕೈಗೊಂಡ ನಿರ್ಧಾರಗಳನ್ನು ರೈತರ ಹಿತದೃಷ್ಟಿಯಿಂದ ಮರುಪರಿಶೀಲಿಸಲು ಅವಕಾಶವಿದೆ. ಈ ಹಿಂದೆ ರೈತರ ಅನುಕೂಲಕ್ಕಾಗಿ ನಿರ್ಧಾರಗಳನ್ನು ಬದಲಾಯಿಸಿ ನೀರು ಹರಿಸಿದ ಉದಾಹರಣೆಗಳಿವೆ. ಆದರೆ ಈಗಿನ ಸರ್ಕಾರ ರೈತರ ಸಮಸ್ಯೆಗೆ ಸ್ಪಂದಿಸುತ್ತಿಲ್ಲ ಎಂದು ಟೀಕಿಸಿದರು.

ಬಿಜೆಪಿ ವಾಹನ ಜಾಥಾಕ್ಕೆ ಶಾಸಕ ಎ. ಕಿರಣ್ ಕುಮಾರ್ ಕೊಡ್ಲಿ ಚಾಲನೆ

• **ಉದಯವಾಹಿನಿ ಕುಂದಾಪುರ:**


ಉದಯವಾಹಿನಿ ಚಿತ್ರ

'ಪ್ರಜಾಪ್ರಭುತ್ವ ಉಳಿಸಿ, ಅರಾಜಕತೆ ಅಳಿಸಿ' ಘೋಷ ವಾಕ್ಯದಡಿ ಮಂಗಳೂರಿನಲ್ಲಿ ಆಯೋಜಿಸಿರುವ ಪಾದಯಾತ್ರೆ, ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಲು ಕುಂದಾಪುರ ವಿಧಾನಸಭಾ ಕ್ಷೇತ್ರದಿಂದ ತೆರಳಿದ ವಾಹನ ಜಾಥಾಕ್ಕೆ ಶಾಸಕ ಎ. ಕಿರಣ್ ಕುಮಾರ್ ಕೊಡ್ಗಿ ಚಾಲನೆ ನೀಡಿದರು. ವಾಹನಗಳಿಗೆ ಪಕ್ಷದ ಸ್ಟಿಕರ್ ಅಂಟಿಸಿ, ಧ್ವಜ ವಿತರಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇದು ಪಾದಯಾತ್ರೆ ಮಾತ್ರವಲ್ಲ, ದೇಶ ಉಳಿಸುವ ಸಂಕಲ್ಪ ಯಾತ್ರೆ. ಪ್ರಜಾಪ್ರಭುತ್ವದ ರಕ್ಷಣೆ, ರಾಜ್ಯದಲ್ಲಿ ಹೆಚ್ಚುತ್ತಿರುವ ಅರಾಜಕತೆ ಕೊನೆಗಾಣಿಸುವ ಉದ್ದೇಶದಿಂದ ನಡೆಯುತ್ತಿರುವ ಈ ಹೋರಾಟದಲ್ಲಿ ಎಲ್ಲಾ ಕಾರ್ಯಕರ್ತರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಕುಂದಾಪುರದಿಂದ ಅಪಾರ ಸಂಖ್ಯೆಯ ಕಾರ್ಯಕರ್ತರು ಮಂಗಳೂರಿಗೆ ತೆರಳುತ್ತಿರುವುದು ಪಕ್ಷದ ಸಂಘಟನಾ ಶಕ್ತಿಯನ್ನು ತೋರಿಸುತ್ತದೆ' ಎಂದರು.

ಬಿಜೆಪಿ ಕುಂದಾಪುರ ಮಂಡಲ ಅಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ, ನಿಕಟಪೂರ್ವ ಅಧ್ಯಕ್ಷ ಶಂಕರ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ಜಿಲ್ಲಾ ಉಪಾಧ್ಯಕ್ಷ ಸುರೇಶ್ ಶೆಟ್ಟಿ ಕಾಡೂರು, ಜ್ಯೋತಿ ಉದಯ ಪೂಜಾರಿ, ಜಿಲ್ಲಾ ಕಾರ್ಯದರ್ಶಿ ಸದಾನಂದ ಬಳ್ಕೂರು, ರಾಜ್ಯ ಒಬಿಸಿ ಮೋರ್ಚಾ ಉಪಾಧ್ಯಕ್ಷ ಐರೋಡಿ ವಿಠಲ್ ಪೂಜಾರಿ, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಪೃಥ್ವಿರಾಜ್ ಶೆಟ್ಟಿ ಬಿಲ್ಲಾಡಿ, ಮಂಡಲ, ಜಿಲ್ಲಾ ಮಟ್ಟದ ಪದಾಧಿಕಾರಿಗಳು, ಪಕ್ಷದ ಪ್ರಮುಖರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ಆಯೋಜನೆ - ಶಾಸಕ ಯಶ್‌ಪಾಲ್ ಸುವರ್ಣ ಹೇಳಿಕೆ

• **ಉದಯವಾಹಿನಿ ಉಡುಪಿ:**

ದೇಶದ ಯುವಜನರಿಗೆ ಸರಿಯಾದ ಮಾರ್ಗದರ್ಶನ, ಅವಕಾಶ ಸಿಗುವಂತಾಗಬೇಕು. ಆ ನಿಟ್ಟಿನಲ್ಲಿ ಯುವ ಸಂಸತ್ತು ಪೂರಕವಾಗಲಿದೆ ಎಂದು ಶಾಸಕ ಯಶ್‌ಪಾಲ್ ಸುವರ್ಣ ಹೇಳಿದರಆಯೋಜನೆ - ಶಾಸಕ ಯಶ್‌ಪಾಲ್ ಸುವರ್ಣ ಹೇಳಿಕೆ ಕೇಂದ್ರ ಸರ್ಕಾರದ ಯುವ ವ್ಯವಹಾರಗಳು ಮತ್ತು ಕ್ರೀಡಾ ಸಚಿವಾಲಯದ ವತಿಯಿಂದ ಎಂಜಿಎಂ ಕಾಲೇಜಿನ ನೂತನ ರವೀಂದ್ರ ಮಂಟಪದಲ್ಲಿ ಶುಕ್ರವಾರ ಆಯೋಜಿಸಿದ್ದ ಯುವ ಸಂಸತ್ ಉದ್ಘಾಟಿಸಿ ಅವರು ಮಾತನಾಡಿದರು. ಅಜ್ಜರಕಾಡು ಜಿ. ಶಂಕರ್ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಮತ್ತು ಸ್ನಾತಕೋತ್ತರ ಅಧ್ಯಯನ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಸಂತೋಷ್ ಪ್ರಭು, ಪತ್ರಕರ್ತ ಕಿರಣ್ ಮಂಜನಬೈಲ್, ಮಾಹೆ ಸಂಶೋಧನಾರ್ಥಿ ಶ್ರೇಯಸ್ ಜಿ. ಕೋಟ್ಯಾನ್, ಅಭಿಜ್ಞಿಯ ಎನ್.ಎಸ್., ಜೆಸಿಐ ರಾಷ್ಟ್ರೀಯ ತರಬೇತುದಾರೆ ಜ್ಯೋತಿ ಪ್ರಶಾಂತ್ ತೀರ್ಪುಗಾರರಾಗಿ ಪಾಲ್ಗೊಂಡಿದ್ದರು. ಜಿಲ್ಲಾ ಮೈ ಭಾರತ್ ಪ್ರಭಾರ ನಿರ್ದೇಶಕ ಉಲ್ಲಾಸ್ ಕೆ.ಟಿ.ಕೆ. ಸ್ವಾಗತಿಸಿದರು. ಎಂಜಿಎಂ ಕಾಲೇಜಿನ ಎನ್‌ಎಸ್‌ಎಸ್ ಅಧಿಕಾರಿ ಸುಚಿತ್ ಕೋಟ್ಯಾನ್

ಉದಯವಾಹಿನಿ ಚಿತ್ರ


ಎಸ್‌ಬಿಐ: 30 ಲಕ್ಷ ಅಪಘಾತ ವಿಮಾ ಪರಿಹಾರ ವಿತರಣೆ

• **ಉದಯವಾಹಿನಿ ಶಿವಮೊಗ್ಗ:**

ಶಿವಮೊಗ್ಗದ ಶಾಂತಲಾ ಸ್ಪೇರೋ ಕಾಸ್ಟ್ ಪ್ರೈವೇಟ್ ಲಿಮಿಟೆಡ್‌ನಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ತೇಜು ಟಿ. ಅವರ ಕುಟುಂಬಕ್ಕೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ವತಿಯಿಂದ 30 ಲಕ್ಷ ಮೊತ್ತದ ಅಪಘಾತ ವಿಮಾ ಪರಿಹಾರದ ಚೆಕ್ ಅನ್ನು ಹಸ್ತಾಂತರಿಸಲಾಯಿತು. ಟಿ.ತೇಜು ಅವರು ಸ್ನೇಹಿತರ ಮನೆಗೆ ತೆರಳುತ್ತಿದ್ದ ಸಂದರ್ಭದಲ್ಲಿ, ಅವರ ಬೈಕ್ ಹಂದಿಗೆ ಡಿಕ್ಕಿ ಹೊಡೆದ ಪರಿಣಾಮ ನಿಯಂತ್ರಣ ತಪ್ಪಿ ಅಪಘಾತ ಸಂಭವಿಸಿತ್ತು. ಈ ವೇಳೆ ತಲೆಗೆ ಗಂಭೀರ ಗಾಯವಾಗಿ ಅವರು ಮೃತಪಟ್ಟಿದ್ದರು.ಮೃತರ ಬ್ಯಾಂಕ್ ಖಾತೆಯು ಭಾರತೀಯ ಸ್ಟೇಟ್ ಬ್ಯಾಂಕ್ ನ ವೇತನ ಪ್ಯಾಕೇಜ್ ಅಡಿಯಲ್ಲಿ ಇದ್ದುದರಿಂದ, ಬ್ಯಾಂಕಿನ ವಿಶೇಷ ವಿಮಾ ಯೋಜನೆಯಡಿ ಅವರ ಕುಟುಂಬಕ್ಕೆ 30 ಲಕ್ಷ ಅಪಘಾತ ವಿಮಾ ಪರಿಹಾರ ಲಭಿಸಿದೆ.

ಚೆಕ್ ಹಸ್ತಾಂತರ ಕಾರ್ಯಕ್ರಮ: ಎಸ್‌ಬಿಐನ ಪ್ರಾದೇಶಿಕ ವ್ಯವಸ್ಥಾಪಕರಾದ ಅರಿಂದಮ್ ಪಾತ್ರ ಅವರು ಮೃತರ ಕುಟುಂಬದ ಸದಸ್ಯರಿಗೆ 30 ಲಕ್ಷ ಮೊತ್ತದ ವಿಮಾ ಪರಿಹಾರದ ಚೆಕ್ ಅನ್ನು ಹಸ್ತಾಂತರಿಸಿದರು.

ಈ ಸಂದರ್ಭದಲ್ಲಿ ಶಾಂತಲಾ ಸ್ಪೇರೋ ಕಾಸ್ಟ್ ಪ್ರೈವೇಟ್ ಲಿಮಿಟೆಡ್‌ನ ಉಪಾಧ್ಯಕ್ಷ (ಆಪರೇಷನ್ಸ್) ವೀರಶೇಖರಪ್ಪ, ಅಕೌಂಟ್ಸ್ ಮ್ಯಾನೇಜರ್ ಸತೀಶ್, ಎಸ್‌ಬಿಐ ಅಧಿಕಾರಿಗಳಾದ ಗಿರೀಶ್ ಸಿ. ಸಾಣೆನಹಳ್ಳಿ ಹಾಗೂ ಶಶಿಕುಮಾರ್ ಎಚ್.ಆರ್. ಉಪಸ್ಥಿತರಿದ್ದರು.

ವಿಜ್ಞಾನ ಕ್ಷೇತ್ರದಲ್ಲಿ 'ಬೆಳಕು' ಮೂಡಿಸಿದ ರಾಮನ್

• **ಉದಯವಾಹಿನಿ ಕಲಬುರಗಿ:**


ಉದಯವಾಹಿನಿ ಚಿತ್ರ

ವಿಜ್ಞಾನ ಕ್ಷೇತ್ರದಲ್ಲಿ 'ಬೆಳಕು' ಮೂಡಿಸುವ ಮೂಲಕ ಸರ್.ಸಿ.ವಿ.ರಾಮನ್ ಇಡೀ ವಿಶ್ವವೇ ಭಾರತದೆಡೆಗೆ ತಿರುಗಿ ನೋಡುವ ಅದ್ಭುತ ಸಾಧನೆ ಮಾಡಿದ್ದಾರೆ.

ಅವರ ಸಂಶೋಧನೆಯಾದ 'ರಾಮನ್ ಪರಿಣಾಮ'ವು ಸಮುದ್ರದ ನೀಲಿ ಬಣ್ಣಕ್ಕೆ ಬೆಳಕಿನ ಚದುರುವಿಕೆಯ ಕಾರಣವೆಂದು ತೋರಿಸಿತು. ಈ ಸಂಶೋಧನೆಗೆ ವಿಶ್ವದ ಶ್ರೇಷ್ಠ ಪ್ರಶಸ್ತಿಯಾದ ನೋಬಲ್ ಪಾರಿತೋಷಕವನ್ನು 1930ರಲ್ಲಿ ಪಡೆದು ನಮ್ಮ ದೇಶದ ಕೀರ್ತಿಯನ್ನು ವಿಶ್ವದೆಲ್ಲೆಡೆ ಪಸರಿಸುವಂತೆ ಮಾಡಿದರು. 'ಏಷ್ಯಾ ಖಂಡದಲ್ಲಿಯೇ ನೋಬೆಲ್ ಪ್ರಶಸ್ತಿ ಪಡೆದ ಪ್ರಥಮ ವಿಜ್ಞಾನಿ' ಎಂಬ ಹೆಗ್ಗಳಿಕೆ ಇವರದಾಗಿದೆ ಎಂದು ಉಪನ್ಯಾಸಕ ಎಚ್.ಬಿ.ಪಾಟೀಲ ಅಭಿಮತಪಟ್ಟರು. ನಗರದ ಖಾದ್ರಿ ಚೌಕ್ ಹತ್ತಿರವಿರುವ 'ಸಕ್ಸಸ್ ಕಂಪ್ಯೂಟರ ತರಬೇತಿ ಕೇಂದ್ರ'ದಲ್ಲಿ 'ಬಸವೇಶ್ವರ ಸಮಾಜ ಸೇವಾ ಬಳಗ'ದ ವತಿಯಿಂದ ಜರುಗಿದ 'ಸರ್ ಸಿ.ವಿ.ರಾಮನ್‌ರ 138ನೇ ಜನ್ಮದಿನಾಚರಣೆ'ಯ ಕಾರ್ಯಕ್ರಮದಲ್ಲಿ ಭಾವಚಿತ್ರಕ್ಕೆ ಪುಷ್ಪನಮನಗಳನ್ನು ಸಲ್ಲಿಸಿ ಅವರು ಮಾತನಾಡುತ್ತಿದ್ದರು.

ಯಾವುದೇ ರಾಷ್ಟ್ರದ ಅಭಿವೃದ್ಧಿ, ಆ ರಾಷ್ಟ್ರದ ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯ ಮೇಲೆ ನಿಂತಿದೆ. ರಷ್ಯಾ, ಅಮೇರಿಕ ಸೇರಿದಂತೆ ಮುಂತಾದ ಸುಪರ್ ಪವರ್ ರಾಷ್ಟ್ರಗಳು ಇಂದು ಆ ಮಟ್ಟಕ್ಕೆ ಬೆಳೆಯಬೇಕಾದರೆ, ಆ ರಾಷ್ಟ್ರದಲ್ಲಿನ ವಿಜ್ಞಾನ ಉತ್ತುಂಗ ಶಿಖರವನ್ನು ತಲುಪಿದೆ. ನಮ್ಮ ದೇಶದ ವಿಜ್ಞಾನ ಕ್ಷೇತ್ರದ ಬೆಳವಣಿಗೆಗೆ ಸಿ.ವಿ.ರಾಮನ್‌ರು ಅವಿಸ್ಮರಣೀಯವಾದ ಕೊಡುಗೆಯನ್ನು ನೀಡಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಅಧ್ಯಕ್ಷ ಅಸ್ಲಾಂ ಶೇಖ್, ಕರಾವಿಪ ಗ್ರಾಮೀಣ ಘಟಕದ ಮಾಜಿ ಸಂಚಾಲಕ ಶಿವಯೋಗೆಪ್ಪಾ ಎಸ್.ಬಿರಾದಾರ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಮಹಿಳೆಯರು ತಯಾರಿಸಿದ ಉತ್ಪನ್ನಗಳಿಗೆ ಆದ್ಯತೆ ನೀಡಿ

• **ಉದಯವಾಹಿನಿ ಔರಾದ್ :**

ಸ್ವಸಹಾಯ ಸಂಘದ ಮಹಿಳೆಯರು ಸ್ವಾವಲಂಬಿಗಳಾಗಿ ಆರ್ಥಿಕವಾಗಿ ಸದೃಢರಾಗಲು ಸಾರ್ವಜನಿಕರು ಅವರು ತಯಾರಿಸಿದ ಉತ್ಪನ್ನಗಳನ್ನು ಖರೀದಿಸುವ ಮೂಲಕ ಪ್ರೋತ್ಸಾಹಿಸಬೇಕು ಎಂದು ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಕಿರಣ ಪಾಟೀಲ್ ಹೇಳಿದರು. ಪಟ್ಟಣದಲ್ಲಿ ಜಿಲ್ಲಾ ಪಂಚಾಯತ್ ಹಾಗೂ ತಾಲ್ಲೂಕು ಪಂಚಾಯತ್ ಸಹಯೋಗದಲ್ಲಿ ಎನ್‌ಆರ್‌ಎಲ್‌ಎಂ ಯೋಜನೆಯಡಿ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ಮಣ್ಣಿನ ಹಣತೆಗಳು ಹಾಗೂ ವಿವಿಧ ಕರಕುಶಲ ಉತ್ಪನ್ನಗಳ ಮಾರಾಟ ಮಳಿಗೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ಸ್ವಸಹಾಯ ಸಂಘದ ಮಹಿಳೆಯರು ತಮ್ಮ ಸ್ವಂತ ಪರಿಶ್ರಮದಿಂದ ವಿವಿಧ ಬಗೆಯ ಉತ್ಪನ್ನಗಳನ್ನು ತಯಾರಿಸಿ ಸ್ವಾವಲಂಬನೆಯತ್ತ ಹೆಜ್ಜೆ ಇಡುತ್ತಿರುವುದು ಸಂತಸದ ಸಂಗತಿಯಾಗಿದೆ. ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ತಯಾರಿಸಿರುವ ಮಣ್ಣಿನ ಹಣತೆಗಳು, ಚೆಂಡು ಹೂವುಗಳು, ಪೇಪರ್ ಪ್ಲೇಟ್, ಚಿಕ್ಕಿ, ಬಾಗಿಲು ಪರದೆ, ಪಾಪಡ ಹಾಗೂ ವಿವಿಧ ಗೃಹ ಅಲಂಕಾರಿಕ ವಸ್ತುಗಳು ಮಾರಾಟಕ್ಕೆ ಲಭ್ಯವಿವೆ. ಸಾರ್ವಜನಿಕರು ಮಾರುಕಟ್ಟೆಯಲ್ಲಿ ದೊರೆಯುವ ವಸ್ತುಗಳ ಜೊತೆಗೆ ಸ್ಥಳೀಯ ಸ್ವಸಹಾಯ ಸಂಘದ ಮಹಿಳೆಯರು ತಯಾರಿಸಿದ ಉತ್ಪನ್ನಗಳನ್ನೂ ಖರೀದಿಸಬೇಕು. ಇದರಿಂದ ಮಹಿಳೆಯರ ಆದಾಯ ಹೆಚ್ಚುವುದರ ಜೊತೆಗೆ ಅವರ ಉದ್ಯಮಶೀಲತೆಗೂ ಉತ್ತೇಜನ ದೊರೆಯಲಿದೆ ಎಂದರು.

ತಾಲ್ಲೂಕು ಪಂಚಾಯತ ಸಹಾಯಕ ನಿರ್ದೇಶಕ (ಗ್ರಾ.ಉ) ಶಿವಕುಮಾರ ಘಾಟೆ ಅವರು ಮಾತನಾಡಿ, ಎನ್ ಆರ್‌ಎಲ್‌ಎಂ ಯೋಜನೆಯು ಗ್ರಾಮೀಣ ಮಹಿಳೆಯರಿಗೆ ಸ್ವಉದ್ಯೋಗ ಹಾಗೂ ಆರ್ಥಿಕ ಸ್ವಾವಲಂಬನೆ ಸಾಧಿಸಲು ಉತ್ತಮ ವೇದಿಕೆಯಾಗಿದೆ. ಮಹಿಳೆಯರು ತಮ್ಮಲ್ಲಿರುವ ಕೌಶಲ್ಯವನ್ನು ಬಳಸಿಕೊಂಡು ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಿ ಮಾರುಕಟ್ಟೆ ಸೌಲಭ್ಯ ಪಡೆದುಕೊಳ್ಳಬೇಕು.

ರಾಜ್ಯದ 4 ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತ ಐವಿಎಫ್ ಘಟಕ ಸ್ಥಾಪನೆ

• **ಉದಯವಾಹಿನಿ ಮಂಗಳೂರು:**


ಉದಯವಾಹಿನಿ ಚಿತ್ರ

ರಾಜ್ಯದ ಬಡ ಹಾಗೂ ಮಧ್ಯಮ ವರ್ಗದ ನಿಸ್ಸಂತಾನ ದಂಪತಿಗಳಿಗೆ ಅತ್ಯಾಧುನಿಕ ಚಿಕಿತ್ಸೆ ಕೈಗೆಟುಕುವಂತೆ ಮಾಡಲು ರಾಜ್ಯದ ಪ್ರಮುಖ ನಾಲ್ಕು ಸರ್ಕಾರಿ ಆಸ್ಪತ್ರೆಗಳಲ್ಲಿ ಸುಸಜ್ಜಿತ ಉಚಿತ 'ಐವಿಎಫ್' ಘಟಕಗಳನ್ನು ಆರಂಭಿಸಲು ಆರೋಗ್ಯ ಇಲಾಖೆ ತೀರ್ಮಾನಿಸಿದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ಘೋಷಿಸಿದ್ದಾರೆ. ಮಂಗಳೂರಿನಲ್ಲಿ ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಯೋಜನೆಯಡಿ ಕರಾವಳಿಯ ಪ್ರಮುಖ ಹೆರಿಗೆ ಆಸ್ಪತ್ರೆಯಾದ ಮಂಗಳೂರಿನ ಲೇಡಿಗೋಷನ್ ಆಸ್ಪತ್ರೆಯಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ನೂತನ ಐವಿಎಫ್ ಘಟಕ ತಲೆ ಎತ್ತಲಿದೆ ಎಂದು ಮಾಹಿತಿ ನೀಡಿದರು.

ಮಕ್ಕಳಿಲ್ಲದ ಕಾರಣಕ್ಕೆ ಸಮಾಜದಲ್ಲಿ ಎಷ್ಟೋ ಮಹಿಳೆಯರು ನಿರಂತರವಾಗಿ ಅವಮಾನ, ಮಾನಸಿಕ ಯಾತನೆ ಹಾಗೂ ಕೌಟುಂಬಿಕ ನೋವುಗಳನ್ನು ಅನುಭವಿಸುತ್ತಿದ್ದಾರೆ. ಖಾಸಗಿ ಆಸ್ಪತ್ರೆಗಳಲ್ಲಿ ಐವಿಎಫ್ ಚಿಕಿತ್ಸೆಗೆ ಕನಿಷ್ಠ ರೂ. 2 ಲಕ್ಷದಿಂದ 4 ಲಕ್ಷದವರೆಗೆ ವೆಚ್ಚವಾಗುತ್ತದೆ. ಬಡವರಿಗೆ ಇದು ಗಗನಕುಸುಮವಾಗಿದೆ. ಸರ್ಕಾರವು ಎಬಿ - ಆರ್‌ಕೆ (ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ) ಅಡಿ ರೂ. 60,000 ಪ್ಯಾಕೇಜ್ ನಿಗದಿಪಡಿಸಿದ್ದರೂ ಖಾಸಗಿ ಆಸ್ಪತ್ರೆಗಳು ಈ ದರದಲ್ಲಿ ಚಿಕಿತ್ಸೆ ನೀಡಲು ಮುಂದೆ ಬರುತ್ತಿಲ್ಲ ಎಂದರು.ಆದ್ದರಿಂದ ಸರ್ಕಾರವೇ ನೇರವಾಗಿ ಖಾಸಗಿ ಆಸ್ಪತ್ರೆಗಳ ದರ್ಜೆಯ ಸುಧಾರಿತ ಲ್ಯಾಬ್, ಅತ್ಯಾಧುನಿಕ ವೈದ್ಯಕೀಯ ಉಪಕರಣ ಹಾಗೂ ತಜ್ಞ ವೈದ್ಯರ ಸೌಲಭ್ಯವನ್ನು ಉಚಿತವಾಗಿ ಒದಗಿಸಲು ಮುಂದಾಗಿದೆ. ಮಂಗಳೂರಿನ ಲೇಡಿಗೋಷನ್, ಬೆಂಗಳೂರು, ಮೈಸೂರು ಹಾಗೂ ಹುಬ್ಬಳ್ಳಿಯಲ್ಲಿ ಪ್ರಥಮ ಹಂತದಲ್ಲಿ ಈ ಐವಿಎಫ್ ಘಟಕಗಳು ಕಾರ್ಯಾರಂಭ ಮಾಡಲಿವೆ ಎಂದು ಸಚಿವರು ತಿಳಿಸಿದರು.

ಅನುಮತಿ ಇಲ್ಲದೇ ಚಿತ್ರೀಕರಣ ಮಾಡಿದರೂ ಕ್ರಮದ ಎಚ್ಚರಿಕೆ

ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್‌ಗಳು ಹಾಗೂ ಕಂಟೆಂಟ್ ಕ್ರಿಯೇಟರ್‌ಗಳಿಗೂ ಮಠದ ಆಡಳಿತ ಮಂಡಳಿ ನಿಯಮಗಳನ್ನು ಸ್ಪಷ್ಟಪಡಿಸಿದೆ.

• **ಉದಯವಾಹಿನಿ ಹುಬ್ಬಳ್ಳಿ:**


ಸದ್ಗುರು ಶ್ರೀ ಸಿದ್ಧಾರೂಢ ಸ್ವಾಮಿಗಳ ಭಾವಚಿತ್ರ ಹಾಗೂ ವಿಡಿಯೋಗಳನ್ನು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿ ಎಡಿಟ್ ಮಾಡುವುದಕ್ಕೆ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮಿ ಮಠದ ಟ್ರಸ್ಟ್ ಕಮಿಟಿ ಕಟ್ಟುನಿಟ್ಟಿನ ನಿಷೇಧ ಹೇರಿದೆ. ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಎಐ ತಂತ್ರಜ್ಞಾನ ಬಳಸಿ ಸಿದ್ಧಾರೂಢ ಶ್ರೀಗಳ ಮೂಲ ಚಿತ್ರಗಳನ್ನು ತಿರುಚಿ, ವಿವಿಧ ರೀತಿಯ ವಿಚಿತ್ರ ಫೋಟೋ ಹಾಗೂ ವಿಡಿಯೋಗಳನ್ನು ಸೃಷ್ಟಿಸಿ ಹರಿಬಿಡುತ್ತಿರುವುದಕ್ಕೆ ಭಕ್ತರಿಂದ ತೀವ್ರ ಆಕ್ಷೇಪ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ ಮಠದ ಆಡಳಿತ ಮಂಡಳಿ ಈ ನಿರ್ಧಾರ ಕೈಗೊಂಡಿದೆ.

1: ಪಾವಿತ್ರ್ಯತೆಗೆ ಧಕ್ಕೆ- ಮಠದ ಆಕ್ಷೇಪ

2: ವಿಡಿಯೋಗಳನ್ನು ಡಿಲೀಟ್ ಮಾಡಿ

3: ವಿಡಿಯೋ ಶೂಟಿಂಗ್ ಗೂ ನಿರ್ಬಂಧ

ಸಿದ್ಧಾರೂಢ ಶ್ರೀಗಳ ಮೂಲ ಭಾವಚಿತ್ರಗಳನ್ನು ಬಳಸಿಕೊಂಡು ಎಐ ಮೂಲಕ ಮುಖಭಾವ ಬದಲಾಯಿಸುವುದು, ಶ್ರೀಗಳು ಮಾತನಾಡದ ಮಾತುಗಳನ್ನು ಆಡಿದಂತೆ ಬಿಂಬಿಸುವುದು ಹಾಗೂ ಐತಿಹಾಸಿಕ ಘಟನೆಗಳನ್ನು ತಿರುಚುವ ರೀತಿಯಲ್ಲಿ ವಿಡಿಯೋಗಳನ್ನು ಸೃಷ್ಟಿಸುವುದು ಮಠದ ಗಮನಕ್ಕೆ ಬಂದಿದೆ. ಇಂತಹ ಕೃತ್ಯಗಳು ಶ್ರೀಗಳ ಚರಿತ್ರೆ, ವ್ಯಕ್ತಿತ್ವ ಹಾಗೂ ಆಧ್ಯಾತ್ಮಿಕ ಪಾವಿತ್ರ್ಯತೆಗೆ ಧಕ್ಕೆ ತರುವ ಸಾಧ್ಯತೆಯಿದೆ ಎಂಬುದು ಟ್ರಸ್ಟ್ ಕಮಿಟಿಯ ಆಕ್ಷೇಪವಾಗಿದೆ. ಶ್ರೀ ಸಿದ್ಧಾರೂಢ ಸ್ವಾಮಿಗಳನ್ನು ಆರಾಧಿಸುವ ದೇಶ-ವಿದೇಶಗಳ ಕೋಟ್ಯಂತರ ಭಕ್ತರ ಧಾರ್ಮಿಕ ಭಾವನೆಗಳಿಗೆ ಇಂತಹ ವಿಡಿಯೋಗಳು ನೋವುಂಟು ಮಾಡುತ್ತಿವೆ. ಭಕ್ತರ ಭಾವನೆ ಮತ್ತು ಮಠದ ಧಾರ್ಮಿಕ ಪರಂಪರೆಯನ್ನು ಗಮನದಲ್ಲಿಟ್ಟುಕೊಂಡು ಎಐ ಬಳಸಿ ಶ್ರೀಗಳ ಚಿತ್ರ ಹಾಗೂ ವಿಡಿಯೋಗಳನ್ನು ತಿರುಚುವುದನ್ನು ತಡೆಯಲು ಆಡಳಿತ ಮಂಡಳಿ ಮುಂದಾಗಿದೆ.


ಉದಯವಾಹಿನಿ ಚಿತ್ರ

ಶ್ರೀಗಳ ಹೆಸರಿನಲ್ಲಿ ಸುಳ್ಳು ಮಾಹಿತಿ ಅಥವಾ ತಪ್ಪು ಸಂದೇಶಗಳನ್ನು ಹರಡುವುದಕ್ಕೂ ಅವಕಾಶ ನೀಡಬಾರದು ಎಂಬ ನಿಲುವನ್ನು ಮಠದ ಆಡಳಿತ ಮಂಡಳಿ ಹೊಂದಿದೆ. ಈ ಕುರಿತಂತೆ ಮಠದ ಟ್ರಸ್ಟ್ ಕಮಿಟಿ ಸದಸ್ಯರು ಹುಬ್ಬಳ್ಳಿ -ಧಾರವಾಡ ಪೊಲೀಸ್ ಕಮಿಷನರ್ ಭೂಷಣ್ ಬೊರಸೆಯವರನ್ನು ಭೇಟಿಯಾಗಿ ಮನವಿಯನ್ನು ಸಲ್ಲಿಸಿದೆ .
-ಮಠದ ಟ್ರಸ್ಟ್ ಕಮಿಟಿ

ಸಾಮಾಜಿಕ ಜಾಲತಾಣಗಳಲ್ಲಿ ಈಗಾಗಲೇ ಪ್ರಕಟವಾಗಿರುವ ಇಂತಹ ಎಐ ಆಧಾರಿತ ಫೋಟೋ ಮತ್ತು ವಿಡಿಯೋಗಳನ್ನು ತಕ್ಷಣವೇ ಅಳಿಸುವಂತೆ ಮಠದ ಟ್ರಸ್ಟ್ ಭಕ್ತರಲ್ಲಿ ಮನವಿ ಮಾಡಿದೆ. ಇಂತಹ ಆಕ್ಷೇಪಾರ್ಹ ಪೋಸ್ಟ್‌ಗಳು ಕಂಡುಬಂದಲ್ಲಿ ಸಂಬಂಧಪಟ್ಟ ಸಾಮಾಜಿಕ ಜಾಲತಾಣಗಳ ಪೇಜ್ ಅಡ್ಮಿನ್‌ಗಳ ಗಮನಕ್ಕೆ ತಂದು ಅವುಗಳನ್ನು ತೆಗೆದುಹಾಕುವಂತೆ ಮನವಿ ಮಾಡುವುದಕ್ಕೂ ಸೂಚಿಸಲಾಗಿದೆ.

ಮಠದ ಪೂರ್ವಾನುಮತಿ ಪಡೆಯದೇ ಶ್ರೀ ಸಿದ್ಧಾರೂಢ ಸ್ವಾಮಿಗಳ ಭಾವಚಿತ್ರಗಳನ್ನು ದುರ್ಬಳಕೆ ಮಾಡಿಕೊಂಡು ನಕಲಿ ಅಥವಾ ತಿರುಚಿದ ವಿಡಿಯೋಗಳನ್ನು ಸೃಷ್ಟಿಸುವವರ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಟ್ರಸ್ಟ್ ಕಮಿಟಿ ಎಚ್ಚರಿಕೆ ನೀಡಿದೆ.

ಎಐ ವಿಡಿಯೋಗಳ ವಿವಾದದ ನಡುವೆಯೇ ಯೂಟ್ಯೂಬರ್‌ಗಳು, ಸಾಮಾಜಿಕ ಜಾಲತಾಣದ ಇನ್‌ಫ್ಲುಯೆನ್ಸರ್‌ಗಳು ಹಾಗೂ ಕಂಟೆಂಟ್ ಕ್ರಿಯೇಟರ್‌ಗಳಿಗೂ ಮಠದ ಆಡಳಿತ ಮಂಡಳಿ ನಿಯಮಗಳನ್ನು ಸ್ಪಷ್ಟಪಡಿಸಿದೆ. ಮಠದ ಆವರಣದೊಳಗೆ ಆಡಳಿತ ಮಂಡಳಿಯ ಅನುಮತಿ ಇಲ್ಲದೇ ಯಾವುದೇ ರೀತಿಯ ವಿಡಿಯೋ ಚಿತ್ರೀಕರಣ ಮಾಡುವಂತಿಲ್ಲ ಎಂದು ನಿರ್ಬಂಧ ವಿಧಿಸಲು ಮುಂದಾಗಿದೆ.

ಎಐ ತಂತ್ರಜ್ಞಾನದ ಹೆಸರಿನಲ್ಲಿ ಸಿದ್ಧಾರೂಢ ಸ್ವಾಮೀಜಿ ಫೋಟೋಗಳಿಗೆ ಎಐ ತಂತ್ರಜ್ಞಾನ ಬಳಸಿ ಅಸಭ್ಯವಾದ ಚಿತ್ರಗಳನ್ನು ಸಾಮಾಜಿಮ ಜಾಲತಾಣದಲ್ಲಿ ತೋರಿಸಲಾಗುತ್ತಿದೆ. ಇದನ್ನು ಟ್ರಸ್ಟ್ ಕಮಿಟಿ ಖಂಡಿಸಿದೆ. ಸಿದ್ಧಾರೂಢ ಶ್ರೀಗಳು ದೇವರು. ಧಾರ್ಮಿಕ ಪರಂಪರೆ, ಐತಿಹಾಸಿಕ ವ್ಯಕ್ತಿತ್ವ ಹಾಗೂ ಭಕ್ತರ ನಂಬಿಕೆಗೆ ಧಕ್ಕೆ ಉಂಟಾಗಿದೆ. ಇಂತ ಎಐ ಚಿತ್ರ ಮಾಡಿದವರ ಮೇಲೆ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ಕೊಡಲಾಗಿದೆ ಎಂದರು. ಮಠಕ್ಕೆ ಭೇಟಿ ನೀಡಿ ಚಿತ್ರೀಕರಿಸಿದವರ ಸಂಪೂರ್ಣ ಮಾಹಿತಿಯನ್ನು ಕೂಡ ಪೊಲೀಸರಿಗೆ ನೀಡಲಾಗಿದೆ. ದೇಶ ವಿದೇಶದಲ್ಲಿ ಸಿದ್ಧಾರೂಢ ಸ್ವಾಮೀಜಿ ಭಕ್ತರಿದ್ದಾರೆ. ಇದು ಭಕ್ತರ ಭಾವನೆಗೆ ಧಕ್ಕೆಯಾಗಿದೆ. ಸಾಮಾಜಿಕ ಜಾಲತಾಣಗಳಲ್ಲಿ ಧಾರ್ಮಿಕ ವ್ಯಕ್ತಿತ್ವಗಳ ಚಿತ್ರಣವನ್ನು ಬಳಸುವಾಗ ಜವಾಬ್ದಾರಿ ಮತ್ತು ಗೌರವ ಕಾಪಾಡಿಕೊಳ್ಳಬೇಕು ಎಂದು ತಿಳಿಸಿದರು.

ದಿನ ಭವಿಷ್ಯ

ರಾಹುಕಾಲ	ಸಂಜೆ	04:30 ರಿಂದ 06:00
ಗುಳಿಕ ಕಾಲ	ಮಧ್ಯಾಹ್ನ	03:00 ರಿಂದ 04:30
ಯಮಗಂಡ ಕಾಲ	ಮಧ್ಯಾಹ್ನ	12:00 ರಿಂದ 01:30

ಮೇಷ ಒಬ್ಬ ಸಂತನ ಆಶೀರ್ವಾದದಿಂದ ಮನಶ್ಶಾಂತಿ. ಬ್ಯಾಂಕ್ ವ್ಯವಹರಗಳಲ್ಲಿ ಕಾಳಜಿ ವಹಿಸಬೇಕು. ಹಳೆಯ ಸಂಪರ್ಕಗಳು ಮತ್ತು ಸಂಬಂಧಗಳ ಪುನಶ್ಚೇತನಕ್ಕೆ ಒಳ್ಳೆಯ ದಿನ. ಪ್ರಣಯ ನಿಮ್ಮ ಹೃದಯವನ್ನು ಆಳುತ್ತದೆ. ಈ ರಾಶಿಚಕ್ರದ ಮಕ್ಕಳು ಇಂದು ಕ್ರೀಡೆಯಲ್ಲಿ ದಿನವನ್ನು ಕಳೆಯಬಹುದು,

ವೃಷಭ ನಿಮ್ಮ ಪ್ರಚಂಡ ಪ್ರಯತ್ನ ಹಾಗೂ ಕುಟುಂಬದ ಸದಸ್ಯರ ಸಕಾಲಿಕ ಬೆಂಬಲ ಬಯಸಿದ ಫಲಿತಾಂಶಗಳು ತರುತ್ತದೆ. ಆದರೆ ಪ್ರಸ್ತುತ ಚೇತನವನ್ನು ಕಾಯ್ದುಕೊಳ್ಳಲು ಶ್ರಮಿಸುತ್ತಿರಿ. ದೀರ್ಘಕಾಲದವರೆಗೆ ಆರ್ಥಿಕ ಬಿಕ್ಕಟ್ಟಿನಲ್ಲಿ ಸಿಲುಕಿದ್ದವರು, ಅವರು ಇಂದು ಎಲ್ಲಿಂದಲಾದರೂ ಹಣವನ್ನು ಪಡೆಯಬಹುದು,

ಮಿಥುನ ನಿಮ್ಮ ಕುಟುಂಬದ ಸದಸ್ಯರ ಭಾವನೆಗಳನ್ನು ನೋಯಿಸುವುದನ್ನು ತಪ್ಪಿಸುವ ಮೂಲಕ ನಿಮ್ಮ ಕೋಪವನ್ನುನಿಯಂತ್ರಿಸಿ. ನಿಮ್ಮ ಪ್ರೀತಿಯ ಕಥೆ ಇಂದು ಒಂದು ಹೊಸ ತಿರುವು ತೆಗೆದುಕೊಳ್ಳಬಹುದು, ಇಂದು ನಿಮ್ಮ ಸಂಗಾತಿ ಮದುವೆಯ ಬಗ್ಗೆ ನಿಮ್ಮೊಂದಿಗೆ ಮಾತನಾಡಬಹುದು.

ಕಟಕ ಇಂದು ನೀವು ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು, ಮಾದಕತೆಯ ಸಂದರ್ಭದಲ್ಲಿ ನೀವು ಯಾವುದೇ ಬೆಲೆಬಾಳುವ ವಸ್ತುಗಳನ್ನು ಕಳೆದುಕೊಳ್ಳಬಹುದು. ಅತಿಥಿಗಳು ನಿಮ್ಮ ಮನೆಯನ್ನು ಒಂದು ಆಹ್ಲಾದಕರ ಮತ್ತು ಅದ್ಭುತ ಸಂಜೆಗಾಗಿ ಬಳಸಿಕೊಳ್ಳುತ್ತಾರೆ.

ಸಿಂಹ ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ನೀವು ಪ್ರಯಾಣ ಮಾಡುತ್ತಿದ್ದರೆ ನಿಮ್ಮ ಅಮೂಲ್ಯ ವಸ್ತುಗಳ ಬಗ್ಗೆ ವಿಶೇಷ ಗಮನ ಹರಿಸಿ, ನೀವು ಇದನ್ನು ಮಾಡದಿದ್ದರೆ ಸರಕುಗಳು ಕದಿಯುವ ಸಾಧ್ಯತೆಯಿದೆ.

ಕನ್ಯಾ ಹಳೆಯ ಸ್ನೇಹಿತರ ಜೊತೆಗಿನ ಒಂದು ಪುನರ್ಮಿಲನ ನಿಮ್ಮನ್ನು ಚೇತೋಹಾರಿಯಾಗಿರಿಸುತ್ತದೆ. ನಿಮ್ಮ ಜೀವನ ಸಂಗಾತಿಯೊಂದಿಗೆ ಹಣದ ಯಾವುದೇ ವಿಷಯದ ಬಗ್ಗೆ ಇಂದು ನಿಮ್ಮ ಜಗಳವಾಗಬಹುದು. ಆದಾಗ್ಯೂ ನೀವು ನಿಮ್ಮ ಶಾಂತ ಸ್ವಭಾವದಿಂದ ಎಲ್ಲವನ್ನು ಸರಿಗೊಳಿಸಬಹುದು.

ತುಲಾ ಇಂದು ನಿಮ್ಮ ವ್ಯಕ್ತಿತ್ವ ಒಂದು ಸುಗಂಧದಂತೆ ಕೆಲಸ ಮಾಡುತ್ತದೆ. ಎಲ್ಲಾ ಬದ್ಧತೆಗಳು ಮತ್ತು ಆರ್ಥಿಕ ವ್ಯವಹಾರಗಳನ್ನು ಎಚ್ಚರಿಕೆಯಿಂದ ನಿರ್ವಹಿಸಬೇಕು. ಯುವಕರನ್ನು ಹೊಂದಿರುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಒಳ್ಳೆಯ ಸಮಯ. ಪ್ರಣಯ ರೋಮಾಂಚಕಾರಿಯಾಗಿರುತ್ತದೆ

ವೃಶ್ಚಿಕ ನಿಮ್ಮ ಹೆಂಡತಿಯ ಜೊತೆ ಕುಟುಂಬದ ಸಮಸ್ಯೆಗಳನ್ನು ಹಂಚಿಕೊಳ್ಳಿ. ನಮ್ಮನ್ನು ನೀವೇ ಒಂದು ಪ್ರೀತಿಯ ಪೋಷಿಸುವ ಜೋಡಿಯೆನ್ನುವುದನ್ನು ಪುನಃ ಕಂಡುಹಿಡಿಯಲು ಸ್ವಲ್ಪ ಸಮಯ ಖರ್ಚು ಮಾಡಿ. ನಿಮ್ಮ ಮಕ್ಕಳೂ ಕೂಡ ಮನೆಯಲ್ಲಿನ ಶಾಂತಿ ಸಾಮರಸ್ಯದ ವಾತಾವರಣವನ್ನು ಆವಾಹಿಸಿಕೊಳ್ಳುತ್ತಾರೆ.

ಧನಸ್ಸು ವಿಜಯೋತ್ಸವವು ನಿಮಗೆ ಪ್ರಚಂಡ ಸಂತೋಷವನ್ನು ನೀಡುತ್ತದೆ. ನಿಮ್ಮ ಸಂತೋಷವನ್ನು ಅನುಭವಿಸಲು ನೀವಿದನ್ನು ನಿಮ್ಮ ಸ್ನೇಹಿತರ ಜೊತೆ ಹಂಚಿಕೊಳ್ಳಬಹುದು. ವ್ಯಾಪರದಲ್ಲಿ ಪ್ರಯೋಜನ ಇಂದು ಅನೇಕ ವ್ಯಾಪಾರಿಗಳ ಮುಖದ ಮೇಲೆ ಸಂತೋಷವನ್ನು ತರಬಹುದು.

ಮಕರ ಆಶಾವಾದಿಗಳಾಗಿರಿ ಮತ್ತು ಜೀವನದ ಉಜ್ವಲ ಬದಿಯನ್ನು ನೋಡಿ. ನಿಮ್ಮ ಆತ್ಮವಿಶ್ವಾಸಭರಿತ ನಿರೀಕ್ಷೆಗಳು ನಿಮ್ಮ ಭರವಸೆಗಳು ಮತ್ತು ಆಸೆಗಳನ್ನು ಸಾಕ್ಷಾತ್ಕಾರಗೊಳಿಸಲು ಸಹಾಯ ಮಾಡುತ್ತವೆ. ವಿದೇಶದಲ್ಲಿ ಮಲಗಿರುವ ನಿಮ್ಮ ಭೂಮಿಯನ್ನು ಇಂದು ಉತ್ತಮ ಬೆಲೆಗೆ ಮಾರಾಟ ಮಾಡಬಹುದು,

ಕುಂಭ ಅತಿಯಾಗಿ ತಿನ್ನುವುದು ಮತ್ತು ಹೆಚ್ಚಿನ ಕ್ಯಾಲೊರಿ ಆಹಾರವನ್ನು ತಪ್ಪಿಸಬೇಕು. ಇಂದು ಹಣ ನಿಮ್ಮ ಕೈಯಲ್ಲಿ ಉಳಿಯುದಿಲ್ಲ, ಇಂದು ನೀವು ಹಣವನ್ನು ಉಳಿಸುವಲ್ಲಿ ಅನೇಕ ತೊಂದರೆಗಳನ್ನು ಎದುರಿಸಬೇಕಾಗುತ್ತದೆ ಮನೆಯ ಸೌಂದರ್ಯದ ಜೊತೆಗೆ ಮಕ್ಕಳ ಅಗತ್ಯಗಳನ್ನೂ ನೋಡಿಕೊಳ್ಳಿ.

ಮೀನ ನಿಮ್ಮ ಅಪಾರ ವಿಶ್ವಾಸ , ಸುಲಭದ ಕೆಲಸದ ವೇಳಾಪಟ್ಟಿ ವಿಶ್ರಾಂತಿಗೆ ಸಾಕಷ್ಟು ಸಮಯ ನೀಡುತ್ತದೆ. ಉದ್ಯೋಗಕ್ಕೆ ಸಂಬಂಧಿಸಿರುವ ಜನರಿಗೆ ಇಂದು ಹಣದ ಬಹಳಷ್ಟು ಅಗತ್ಯವಿರುತ್ತದೆ.

ಪ್ರಮುಖ ಆರೋಪಿ ಸಮೀರ್ ಮುಲ್ಲಾನ ಕಾಲಿಗೆ ಗುಂಡಿಕ್ಕಿ ಬಂಧನ

• **ಉದಯವಾಹಿನಿ, ವಿಜಯಪುರ:**



ಉದಯವಾಹಿನಿ ಚಿತ್ರ

ಎರಡು ದಿನಗಳ ಹಿಂದೆ ನಗರದ ಗಾಂಧಿ ಚೌಕ್ ಪೊಲೀಸ್ ಠಾಣಾ ವ್ಯಾಪ್ತಿಯ ಮುಂಡೇವಾಡಿ ಆಸ್ಪತ್ರೆ ಹತ್ತಿರ ನಡೆದಿದ್ದ ಗುಂಡಿನ ದಾಳಿ ಹಾಗೂ ಯಾಸೀನ್ ಝುಬೇರ್ ಎಂಬಾತನ ಹತ್ಯೆ ಪ್ರಕರಣದ ಪ್ರಮುಖ ಆರೋಪಿಯ ಕಾಲಿಗೆ ಗುಂಡಿಕ್ಕಿ ಪೊಲೀಸರು ಬಂಧಿಸಿದ್ದಾರೆ. ಸಮೀರ್ ಮುಲ್ಲಾ ಬಂಧಿತ ಆರೋಪಿ. ಬಂಧನ ಕಾರ್ಯಾಚರಣೆ ವೇಳೆ ಪಿಸ್ತೂಲ್ ತೋರಿಸಲು ಆರೋಪಿ ಸಮೀರ್ ಪರಾರಿಯಾಗಲು ಯತ್ನಿಸಿದ್ದಾನೆ, ಈ ವೇಳೆ ಪೊಲೀಸರು ಮುಲ್ಲಾನ ಕಾಲಿಗೆ ಗುಂಡು ಹಾರಿಸಿದ್ದಾರೆ. ಈ ವೇಳೆ ವಿಜಯಪುರ ಗ್ರಾಮೀಣ ಪೊಲೀಸ್ ಠಾಣೆಯ ಓರ್ವ ಪೊಲೀಸ್ ಸಿಬ್ಬಂದಿಗೆ ಗಾಯಗಳಾಗಿವೆ. ಸದ್ಯ. ಗಾಯಗೊಂಡ ಆರೋಪಿ ಮತ್ತು ಪೊಲೀಸ್ ಸಿಬ್ಬಂದಿ ಇಬ್ಬರೂ ಪ್ರಸ್ತುತ ಸ್ಥಿರ ಸ್ಥಿತಿಯಲ್ಲಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪೊಲೀಸರ ಪ್ರಕಾರ, ವಿಜಯಪುರ ತಾಲ್ಲೂಕಿನ ಟಕ್ಕೇ ಗ್ರಾಮದ ನಿವಾಸಿ ಯಾಸೀನ್ ಝುಬೇರ್ ಎಂಬಾತನನ್ನು ನವೆಂಬರ್ 5ರ ಸಂಜೆ ಮುಂಡೆವಾಡಿ ಆಸ್ಪತ್ರೆಯ ಹೊರಗೆ ದುಷ್ಕರ್ಮಿಗಳ ಗುಂಪೊಂದು ಗುಂಡಿಕ್ಕಿ ಕೊಂದಿತ್ತು. ತನ್ನ ಪತ್ನಿಗೆ ವೈದ್ಯಕೀಯ ತಪಾಸಣೆ ಮಾಡಿಸಿ ಆಸ್ಪತ್ರೆಯಿಂದ ಹೊರಬರುತ್ತಿದ್ದಾಗ ಈ ಘಟನೆ ನಡೆದಿತ್ತು.

ಮೊಬೈಲ್ ಹ್ಯಾಕ್ ಮಾಡಿ 2.82 ಲಕ್ಷ ರೂ.ವಂಚನೆ

• **ಉದಯವಾಹಿನಿ, ಕಲಬುರಗಿ,-**

ಸೈಬರ್ ವಂಚಕರು ಇಬ್ಬರು ವ್ಯಕ್ತಿಗಳ ಮೊಬೈಲ್ ಹ್ಯಾಕ್ ಮಾಡಿ ಅವರ ಬ್ಯಾಂಕ್ ಖಾತೆಯಿಂದ 2.82 ಲಕ್ಷ ರೂ.ವರ್ಗಾವಣೆ ಮಾಡಿಕೊಂಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಮೂಲತ ಯಾದಗಿರಿ ಜಿಲ್ಲೆಯವರಾದ ಸೇಡಂ ರಸ್ತೆಯ ವಿರೇಶ ನಗರದಲ್ಲಿರುವ ತಮ್ಮ ಸಹೋದರಿಯ ಮನೆಯಲ್ಲಿ ವಾಸವಿರುವ ಶರಣಬಸಪ್ಪ ಕಾಡಾನೂರ ಎಂಬುವವರ ಮೊಬೈಲ್ ಹ್ಯಾಕ್ ಆಗಿದ್ದು, ಸುಮಾರು ಒಂದು ಗಂಟೆಯವರೆಗೆ ಮೊಬೈಲ್ ಬಳಸಲು ಬಾರದೆ ರೀತಿಯಾಗಿದೆ. ನಂತರ ಮೊಬೈಲ್ ಆನ್ ಆದ ಮೇಲೆ ಅವರ ಒಂದು ಬ್ಯಾಂಕ್ ಖಾತೆಯಿಂದ 47 ಸಾವಿರ ಮತ್ತು ಇನ್ನೊಂದು ಬ್ಯಾಂಕ್ ಖಾತೆಯಿಂದ 99 ಸಾವಿರ ರೂಪಾಯಿ ಸೇರಿ 1.46 ಲಕ್ಷ ರೂ.ವರ್ಗಾವಣೆಯಾಗಿರುವುದು ಬೆಳಕಿಗೆ ಬಂದಿದೆ. ಇನ್ನೊಂದು ಪ್ರಕರಣದಲ್ಲಿ ವ್ಯಕ್ತಿಯೊಬ್ಬರ ವ್ಯಾಟ್ಸಪ್‌ಗೆ ಸೈಬರ್ ವಂಚಕ ಎಪಿಕೆ ಲಿಂಕ್ ಕಳುಹಿಸಿದ್ದು, ಅವರು ಆ ಲಿಂಕ್ ಮೇಲೆ ಕ್ಲಿಕ್ ಮಾಡಿದಾಗ ಮೊಬೈಲ್ ಹ್ಯಾಕ್ ಅಗಿದೆ. ಸೈಬರ್ ವಂಚಕರು ಇವರ ಬ್ಯಾಂಕ್ ಖಾತೆಯಿಂದ 1,36,500 ರೂ.ವರ್ಗಾವಣೆ ಮಾಡಿಕೊಂಡಿದ್ದಾರೆ. ಈ ಎರಡೂ ಪ್ರಕರಣಗಳ ಬಗ್ಗೆ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿದ್ದು, ತನಿಖೆ ನಡೆದಿದೆ.



ಉದಯವಾಹಿನಿ ಚಿತ್ರ

• **ಉದಯವಾಹಿನಿ ಕಾರಟಗಿ:**

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಕಾರಟಗಿ ಘಟಕ) ವತಿಯಿಂದ ಪುಲ್ವಾಮಾ ದಾಳಿಯಲ್ಲಿ ಹುತಾತ್ಮರಾದ ಯೋಧರ ಸ್ಮರಣಾರ್ಥ ಕಾರ್ಯಕ್ರಮವನ್ನು ಭಾವಪೂರ್ಣವಾಗಿ ಆಯೋಜಿಸಲಾಯಿತು. ಕಾರ್ಯಕ್ರಮದಲ್ಲಿ ಅಭಿಷೇಕ ಹೀರೆಮಠ ಅವರು ಪುಲ್ವಾಮಾ ದಾಳಿಯ ಹಿನ್ನೆಲೆ ಹಾಗೂ ಅದರ ಮಹತ್ವದ ಕುರಿತು ಮಾತನಾಡಿ, ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದ ಯೋಧರ ಬಲಿದಾನವನ್ನು ಯುವ ಪೀಳಿಗೆ ಎಂದಿಗೂ ಮರೆಯಬಾರದು ಎಂದು ಕರೆ ನೀಡಿದರು. ನಂತರ ಹುತಾತ್ಮ ಯೋಧರಿಗೆ ಗೌರವ ಸೂಚಿಸಿ ಒಂದು ನಿಮಿಷ ಮೌನಾಚರಣೆ ನಡೆಸಲಾಯಿತು. ಬಳಿಕ ಪಟ್ಟಣದ ಎಂ.ಕೆ. ಮಿಲ್ಲಿನಿಂದ ಬಸ್ ನಿಲ್ದಾಣದವರೆಗೂ ಪಂಜಿನ ಮೆರವಣಿಗೆ ನಡೆಸಲಾಯಿತು. ಪಂಜು ಹಿಡಿದು ಸಾಗಿದ ಕಾರ್ಯಕರ್ತರ ಘೋಷಣೆಗಳಿಂದ ಪಟ್ಟಣದಾದ್ಯಂತ ದೇಶಭಕ್ತಿಯ ವಾತಾವರಣ ನಿರ್ಮಾಣವಾಯಿತು. ಕಾರ್ಯಕ್ರಮದಲ್ಲಿ ಮಾಜಿ ಸೈನಿಕರಾದ ಏರಿಸ್ವಾಮಿ, ಎಬಿವಿಪಿ ರಾಜ್ಯ ಸಹ ಸಂಚಾಲಕರಾದ ಅಭಿಷೇಕ ಕಿರೆಮಠ, ದಯಶಂಕರ್ ಮಟಪತಿ, ಶಂಕರಗೌಡ, ಮಂಜುನಾಥ ಮಸ್ಕಿ, ಸಾತ್ವಿಕ ಹೀರೆಮಠ, ನವೀನ್ ಸೇರಿದಂತೆ ಇತರ ಕಾರ್ಯಕರ್ತರು ಉಪಸ್ಥಿತರಿದ್ದರು.

ಕಾಮಗಾರಿಗಳು ಕೂಡ ನಿರೀಕ್ಷಿತ ರೀತಿಯಲ್ಲಿ ನಡೆಯುತ್ತಿಲ್ಲ. ಕೆಲವು ಕಡೆ ಕಾಮಗಾರಿಗಳಲ್ಲಿ ಲೋಪದೋಷಗಳಿದ್ದು, ಜನರಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ.

ಕುಡಿಯುವ ನೀರಿನ ಕಾಮಗಾರಿಗಳನ್ನು ತ್ವರಿತಗೊಳಿಸಿ

• **ಉದಯವಾಹಿನಿ, ಬೀದರ್**

ಔರಾದ(ಬಿ) ಮತಕ್ಷೇತ್ರದಲ್ಲಿ ಪ್ರತಿವರ್ಷ ಎದುರಾಗುತ್ತಿರುವ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಮಂಜೂರಾಗಿರುವ ಪ್ರಮುಖ ಕುಡಿಯುವ ನೀರಿನ ಯೋಜನೆಗಳ ಕಾಮಗಾರಿಗಳನ್ನು ತ್ವರಿತಗೊಳಿಸಬೇಕು ಎಂದು ಶಾಸಕ ಪ್ರಭು ಬಿ. ಚವ್ಹಾಣ ಅವರು ಒತ್ತಾಯಿಸಿದರು. ನಗರದ ಜಿಲ್ಲಾ ಪಂಚಾಯತ ಕಚೇರಿ ಸಭಾಂಗಣದಲ್ಲಿ ನಡೆದ

1 : ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತಿದೆ
2 : 560 ಕೋಟಿ, ಕೆರೆಗಳನ್ನು ತುಂಬಿಸುವ ಯೋಜನೆ
3 : ಕುಡಿಯುವ ನೀರು ಪೂರೈಸುವ 84 ಕೋಟಿ ವೆಚ್ಚ

ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಔರಾದ(ಬಿ) ಪಟ್ಟಣ ಸೇರಿದಂತೆ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿನ ಕುಡಿಯುವ ನೀರು, ವಿದ್ಯುತ್, ಸಾರಿಗೆ, ರಸ್ತೆ ಹಾಗೂ ಆರೋಗ್ಯ ಸೇವೆಗಳ ಸಮಸ್ಯೆಗಳ ಕುರಿತು ಅವರು ಅಧಿಕಾರಿಗಳ ಗಮನ ಸೆಳೆದರು. ವಿವಿಧ ಇಲಾಖೆಗಳ ಕಾಮಗಾರಿಗಳ ಪ್ರಗತಿ ಕುರಿತು ಮಾಹಿತಿ ಪಡೆದು, ಜನರು


ಉದಯವಾಹಿನಿ ಚಿತ್ರ

ಎದುರಿಸುತ್ತಿರುವ ಸಮಸ್ಯೆಗಳಿಗೆ ತಕ್ಷಣ ಪರಿಹಾರ ಕಲ್ಪಿಸುವಂತೆ ತಿಳಿಸಿದರು.

ಔರಾದ(ಬಿ) ಮತಕ್ಷೇತ್ರದಲ್ಲಿ ಪ್ರತಿವರ್ಷ ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ 560 ಕೋಟಿ ವೆಚ್ಚದ 36 ಕೆರೆಗಳನ್ನು ತುಂಬಿಸುವ ಯೋಜನೆ ಹಾಗೂ ಕಾರಂಜಾ ಜಲಾಶಯದಿಂದ ಔರಾದ(ಬಿ) ಪಟ್ಟಣ ಸೇರಿದಂತೆ ವಿವಿಧ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸುವ 84 ಕೋಟಿ ವೆಚ್ಚದ ಯೋಜನೆಯನ್ನು ಮಂಜೂರು ಮಾಡಿಸಿ ತಂದಿದ್ದೇನೆ.

ಬೀದರನ್ನ ಬ್ರಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ ಆಗಮಿಸುವ ರೋಗಿಗಳು ಎದುರಿಸುತ್ತಿರುವ ವಿವಿಧ ಸಮಸ್ಯೆಗಳು, ಆಸ್ಪತ್ರೆಯಲ್ಲಿನ ವೈದ್ಯಕೀಯ ಸೇವೆಗಳು ಹಾಗೂ ರೋಗಿಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆಯೂ ಸಭೆಯಲ್ಲಿ ಪ್ರಸ್ತಾಪಿಸಿ, ಆರೋಗ್ಯ ಸೇವೆಗಳಲ್ಲಿ ಸುಧಾರಣೆ ತರುವಂತೆ ಒತ್ತಾಯಿಸಿದರು.-ಶಾಸಕ ಪ್ರಭು ಬಿ. ಚವ್ಹಾಣ

ಈ ಯೋಜನೆಗಳು ನಿಗದಿತ ಸಮಯದಲ್ಲಿ ಪೂರ್ಣಗೊಂಡಿದ್ದರೆ ಇಂದು ಜನರು ಕುಡಿಯುವ ನೀರಿಗಾಗಿ ಪರದಾಡುವ ಪರಿಸ್ಥಿತಿ ಎದುರಾಗುತ್ತಿರಲಿಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಅಲ್ಲದೇ ನಿರ್ಲಕ್ಷ್ಯ ತೋರುವ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಒತ್ತಾಯಿಸಿದರು.

ಜಲಜೀವನ್ ಮಿಷನ್ ಯೋಜನೆಯ ಕಾಮಗಾರಿಗಳು ಕೂಡ ನಿರೀಕ್ಷಿತ ರೀತಿಯಲ್ಲಿ ನಡೆಯುತ್ತಿಲ್ಲ. ಕೆಲವು ಕಡೆ ಕಾಮಗಾರಿಗಳಲ್ಲಿ ಲೋಪದೋಷಗಳಿದ್ದು, ಜನರಿಗೆ ಸಮರ್ಪಕವಾಗಿ ನೀರು ಪೂರೈಕೆಯಾಗುತ್ತಿಲ್ಲ. ಬರಗಾಲದ ಹಿನ್ನೆಲೆಯಲ್ಲಿ ಕುಡಿಯುವ ನೀರಿಗೆ ತೀವ್ರ ತೊಂದರೆಯಾಗಿದ್ದು, ಬಾಕಿ ಇರುವ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸುವಂತೆ ಸಚಿವರಿಗೆ

ಕುಡಿಯುವ ನೀರು, ವಿದ್ಯುತ್, ಸಾರಿಗೆ, ರಸ್ತೆ ಮತ್ತು ಆರೋಗ್ಯದಂತಹ ಅಗತ್ಯ ಸೇವೆಗಳಲ್ಲಿ ಯಾವುದೇ ನಿರ್ಲಕ್ಷ್ಯ ತೋರಬಾರದು. ಜನರ ಸಮಸ್ಯೆಗಳಿಗೆ ಕೇವಲ ಭರವಸೆ ನೀಡದೆ, ಕಾಲಮಿತಿಯಲ್ಲಿ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಬೇಕು ಎಂದು ಶಾಸಕ ಪ್ರಭು ಚವ್ಹಾಣ ಅವರು ಸಭೆಯಲ್ಲಿ ಆಗ್ರಹಿಸಿದರು.

ಹಾಗೂ ಅಧಿಕಾರಿಗಳಿಗೆ ಒತ್ತಾಯಿಸಿದರು.

ಇದೇ ವೇಳೆ ಚೊಂಡಿಮುಖೇಡ ಗ್ರಾಮದಲ್ಲಿನ ವಿದ್ಯುತ್ ಸಮಸ್ಯೆ ಪರಿಹರಿಸಬೇಕು. ಗ್ರಾಮಸ್ಥರ ಅನುಕೂಲಕ್ಕಾಗಿ ಸಮರ್ಪಕ ಬಸ್ ಸಾರಿಗೆ ವ್ಯವಸ್ಥೆ ಕಲ್ಪಿಸಬೇಕು ಎಂದು ಆಗ್ರಹಿಸಿದರು. ಕ್ಷೇತ್ರದ ಜನರ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಅಧಿಕಾರಿಗಳು ಹೆಚ್ಚಿನ ಜವಾಬ್ದಾರಿಯಿಂದ ಕಾರ್ಯನಿರ್ವಹಿಸಬೇಕು.

ಗ್ರಾಮೀಣ ಭಾಗದಲ್ಲಿ ಹದಗೆಟ್ಟಿರುವ ರಸ್ತೆಗಳ ದುರಸ್ತಿಗೆ ಆದ್ಯತೆ ನೀಡಬೇಕು. ತೇಗಂಪೂರ ಕೆರೆಯಿಂದ ನೀರು ಸರಬರಾಜು ಮಾಡುವ ವ್ಯವಸ್ಥೆಯನ್ನು ಸಮರ್ಪಕಗೊಳಿಸಿ, ಔರಾದ(ಬಿ) ಪಟ್ಟಣದ ಕುಡಿಯುವ ನೀರಿನ ಸಮಸ್ಯೆಗೆ ಪರಿಹಾರ ಕಲ್ಪಿಸಬೇಕು ಎಂದು ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರು.

ಹಂಪಿಯ ಸುಗ್ರೀವ ಗುಹೆ ಬಳಿ ಶವ ಪತ್ತೆ ಸೂಕ್ಷ್ಮ ಸ್ಥಳಗಳಲ್ಲಿ CCTV

• **ಉದಯವಾಹಿನಿ, ಹೊಸಪೇಟೆ:**

ಐತಿಹಾಸಿಕ ಹಂಪಿ ಪರಂಪರೆಯ ತಾಣದಲ್ಲಿ, ವಿಶೇಷವಾಗಿ ಸುಗ್ರೀವ ಗುಹೆಯ ಸುತ್ತಮುತ್ತ, ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸಬೇಕೆಂದು ಸಾಮಾಜಿಕ ಕಾರ್ಯಕರ್ತರು ಮತ್ತು ವಿವಿಧ ಸಂಘಟನೆಗಳು ಅಧಿಕಾರಿಗಳನ್ನು ಒತ್ತಾಯಿಸಿವೆ.

ಇತ್ತೀಚೆಗೆ ಸುಗ್ರೀವ ಗುಹೆಯ ಬಳಿ ಗುರುತು ಪತ್ತೆಯಾಗದ ಮಹಿಳೆಯೊಬ್ಬರ ಕೊಳೆತ ಸ್ಥಿತಿಯಲ್ಲಿದ್ದ ಮೃತದೇಹ ಪತ್ತೆಯಾಗಿದ್ದು, ಇದು ನಿಧಿ ಶೋಧನೆಯ ಪ್ರಯತ್ನಕ್ಕೆ ಸಂಬಂಧಿಸಿರಬಹುದೇ ಎಂಬ ಅನುಮಾನಗಳನ್ನು ಹುಟ್ಟುಹಾಕಿದೆ. ಸುಗ್ರೀವ ಗುಹೆಯ ಬಳಿ ಟ್ರೆಕ್ಕಿಂಗ್ (ಪಾದಯಾತ್ರೆ) ಮಾಡುತ್ತಿದ್ದ ಇಬ್ಬರು ವಿದೇಶಿ ಪ್ರವಾಸಿಗರಿಗೆ ಮಹಿಳೆಯ ಮೃತದೇಹ ಸಿಕ್ಕ ನಂತರ, ಸಿಸಿಟಿವಿ ಬೇಡಿಕೆ ತೀವ್ರಗೊಂಡಿದೆ. ಈ ಘಟನೆಯು ಯುನೆಸ್ಕೋ ವಿಶ್ವ ಪರಂಪರೆಯ ತಾಣವಾದ ಹಂಪಿಯಲ್ಲಿ ಪ್ರವಾಸಿಗರ ಸುರಕ್ಷತೆ ಮತ್ತು ಭದ್ರತೆಯ ಬಗ್ಗೆ ಗಂಭೀರ ಕಳವಳಗಳನ್ನು ಉಂಟುಮಾಡಿದೆ ಅಲ್ಲದೆ, ಇಲ್ಲಿನ ನಿರ್ಜನ ಪ್ರದೇಶಗಳಲ್ಲಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆಯೂ ಪ್ರಶ್ನೆಗಳನ್ನು ಎತ್ತಿದೆ.


ಉದಯವಾಹಿನಿ ಚಿತ್ರ

ಹಂಪಿಯಲ್ಲಿರುವ ಗುಹೆಗಳು, ಏಕಾಂತದಲ್ಲಿರುವ ಸ್ಮಾರಕಗಳು ಮತ್ತು ಪ್ರವಾಸಿಗರು ಸಾಮಾನ್ಯವಾಗಿ ಸಂಚರಿಸುವ ಮಾರ್ಗಗಳಿಂದ ದೂರವಿರುವ ಹಲವು ಸ್ಥಳಗಳಲ್ಲಿ ಸೂಕ್ತ ನಿಗಾ ವ್ಯವಸ್ಥೆ ಇಲ್ಲದಿರುವುದು ಆತಂಕಕಾರಿ ಎಂದು ಕಾರ್ಯಕರ್ತರು ಮತ್ತು ವಿವಿಧ ಸಂಘಟನೆಗಳ ಪ್ರತಿನಿಧಿಗಳು ಹೇಳಿದ್ದಾರೆ.

ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ, ಅಲ್ಲಿ ಸಿಸಿಟಿವಿ ಕ್ಯಾಮೆರಾಗಳನ್ನು ಅಳವಡಿಸುವ ಮೂಲಕ ಅನುಮಾನಾಸ್ಪದ ಚಟುವಟಿಕೆಗಳ ಮೇಲೆ ನಿಗಾ ಇಡಬೇಕೆಂದು ಅವರು ಜಿಲ್ಲಾಡಳಿತ, ಪೊಲೀಸ್ ಇಲಾಖೆ ಮತ್ತು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯನ್ನು ಆಗ್ರಹಿಸಿದ್ದಾರೆ.

ಕಬ್ಬು ಬೆಳೆಗಾರರ ಹೋರಾಟಕ್ಕೆ ಮಠಾಧಿಪತಿಗಳ ಬೆಂಬಲ

• **ಉದಯವಾಹಿನಿ, ಕಲಬುರಗಿ,**

ನಗರದ ರಾಮಮಂದಿರ ವೃತ್ತದಲ್ಲಿ ರೈತ ಸಂಘಟನೆಯ ಒಕ್ಕೂಟದಿಂದ ನಡೆಸುತ್ತಿರುವ ಅಹೋರಾತ್ರಿ ಧರಣಿ ಸತ್ಯಾಗ್ರಹವು ಇಂದು 8ನೇ ದಿನಕ್ಕೆ ಕಾಲಿಟ್ಟಿದೆ. ರೈತರ ನ್ಯಾಯಯುತ ಬೇಡಿಕೆಗಳಿಗೆ ಬೆಂಬಲಿಸಿ ವಿವಿಧ ಮಠಾಧೀಶರು ಹಾಗೂ ಹಿರಿಯ ಮುಖಂಡರು ಹೋರಾಟದ ಅಖಾಡಕ್ಕಿಳಿದಿರುವುದರಿಂದ ಪ್ರತಿಭಟನೆ ಮತ್ತಷ್ಟು ಕಾವು ಪಡೆದುಕೊಂಡಿದೆ.

7ನೇ ದಿನದ ಧರಣಿಯಲ್ಲಿ ಪೂಜ್ಯ ಪಾಳಾ ಶ್ರೀಗಳು ಹಾಗೂ ಪೂಜ್ಯ ಸರಡಗಿ ಶ್ರೀಗಳು ನೇರವಾಗಿ ಪಾಲ್ಗೊಂಡು ಧರಣಿ ನಿರತ ರೈತರಿಗೆ ಆಶೀರ್ವಾದ ಮತ್ತು ಬೆಂಬಲ ಸೂಚಿಸಿದರು. ಅವರೊಂದಿಗೆ ಮುಖಂಡರಾದ ಎಂ.ಎಸ್. ಪಾಟೀಲ ನರಿಬೋಳ, ಸಿದ್ದು ಹಿರೇಮಠ, ಮಹಾಂತಗೌಡ ನಂದಿಹಾಳ ಹಾಗೂ ಕರೆಪ್ಪಾ ಬಸವರಾಜ ಕೋರಿ ಮಂಜುಳಾ ಬಜಂತ್ರಿ ಮಾದೇವಿ ಬಜಂತ್ರಿ ಚಂದ್ರು ಕೋಳಕೂರ ಅಣವಿರಗೌಡ ಬಿರಾದಾರ ಕರೆಪ್ಪಾ ಶರಣು ಪರತಾಬಾದಸೇರಿದಂತೆ ಅನೇಕ ರೈತ ನಾಯಕರು ಸಕ್ರಿಯವಾಗಿ ಭಾಗವಹಿಸಿದ್ದರು.


ಉದಯವಾಹಿನಿ ಚಿತ್ರ

ಸಭೆಯನ್ನುದ್ದೇಶಿಸಿ ಮಾತನಾಡಿದ ಶ್ರೀಗಳು ಹಾಗೂ ಮುಖಂಡರು, ಅನ್ನದಾತ ರೈತನಿಗೆ ಬೆಲೆ ಸಿಗುವವರೆಗೆ ಮತ್ತು ಸರ್ಕಾರ ತನ್ನ ಮಲತಾಯಿ ಧೋರಣೆಯನ್ನು ಬಿಡುವವರೆಗೆ ಈ ಹೋರಾಟದಿಂದ ವಿಶ್ರಮಿಸುವುದಿಲ್ಲ. ಸರ್ಕಾರ ತಕ್ಷಣ ಸ್ಪಂದಿಸದಿದ್ದರೆ ಮುಂದಿನ ದಿನಗಳಲ್ಲಿ ಉಗ್ರ ಸ್ವರೂಪದ ಚಳುವಳಿ ಹಮ್ಮಿಕೊಳ್ಳಲಾಗುವುದು ಎಂದು ಎಚ್ಚರಿಸಿದರು ಕಾರ್ಯವೈಖರಿಗೆ ಹಿಡಿದ ಕೈಗನ್ನಡಿಯಾಗಿದೆ.

ಹೀಗೊಂದು ಜಟ್‌ಪಟ್ ಪಟಾಕಿ ಜಾತ್ರೆ-ವಿಜಯೇಂದ್ರ ಕುಲಕರ್ಣಿ

• **ಉದಯವಾಹಿನಿ, ಕಲಬುರಗಿ:**

ಪ್ರತಿವರ್ಷ ದೀಪಾವಳಿ ಅಮವಾಸ್ಯೆಯ ದಿನ ಇಲ್ಲೊಂದು ಜಾತ್ರೆ ನಡೆಯುತ್ತದೆ. ಜನವಸತಿಯಿಂದ ದೂರವಿರುವ ಸ್ಥಳದಲ್ಲಿ ಕೆಲವೇ ಗಂಟೆಗಳಲ್ಲಿ ಮುಗಿದುಹೋಗುವ ಈ ಜಾತ್ರೆಯಲ್ಲಿ ಸಣ್ಣಮಟ್ಟದ ಪಟಾಕಿ ಮಾರಾಟ ಒಂದು ವಿಶೇಷ. ನವೆಂಬರ್ 9 ರಂದು ಇಲ್ಲಿ ಜಾತ್ರೆ. ಕಲಬುರಗಿ ಜಿಲ್ಲೆ ಜೇವರಗಿ ತಾಲ್ಲೂಕಿನ ಯಡ್ರಾಮಿಯಿಂದ ಮಳ್ಳಿ ರಸ್ತೆ,ದುಮ್ಮದ್ರಿ ಕ್ರಾಸ್ ಸವುಳಹಳ್ಳದ ಸೇತುವೆ ಬಳಿ ಕಾಚಾಪುರ ಗ್ರಾಮದ ಕುಲಕರ್ಣಿಯವರ ಹೊಲದಲ್ಲಿ ಮುಡಿಜಟ್ಟೆಪ್ಪ ದೇವರ ಗುಡಿ ಇದೆ. ಇಲ್ಲಿಯೇ ಈ ಜಟ್ ಪಟ್ ಜಾತ್ರೆ ನಡೆಯುವದು. ಜಾತ್ರೆಯ ದಿನ ಕಾಚಾಪುರದಿಂದ ಮುಡಿಜಟ್ಟೆಪ್ಪ ದೇವರ ಪಲ್ಲಕ್ಕಿ, ಕಳಸ, ಡೊಳ್ಳುಮೇಳ ಬರುವದು. ಸುತ್ತಮುತ್ತಲಿನ ಹಳ್ಳಿಗಳಾದ ಮಳ್ಳಿ, ದುಮ್ಮದ್ರಿ, ವಡಗೇರಿ,ನಾಗರಹಳ್ಳಿ, ಐನಾಪುರ, ಸುಂಬಡ, ಮಾಗಿಣಗೇರಿ, ಕುಳಗೇರಿ ಮೊದಲಾದ ಹಳ್ಳಿಗಳ ರೈತಾಪಿವರ್ಗದ ಜನರೇ ಹೆಚ್ಚಾಗಿ ಈ ಜಾತ್ರೆಯಲ್ಲಿ ಪಾಲ್ಗೊಳ್ಳುವರು.

ಜಾತ್ರೆಗೆ ಬಂದವರು ದೇವರಿಗೆ ನೈವೇದ್ಯ ಪೂಜೆ ಸಲ್ಲಿಸಿದ ನಂತರ, ಕಟ್ಟಿಕೊಂಡು ತಂದ ಬುತ್ತಿ ಬಿಚ್ಚಿಕೊಂಡು ಹಳ್ಳದ ದಂಡೆಯಲ್ಲಿ ಕುಳಿತು ಸಂಭ್ರಮದಿಂದ ಹಬ್ಬದ ಊಟ ಸವಿಯುತ್ತಾರೆ. ಜಾತ್ರೆಯಲ್ಲಿ ಹಳ್ಳಿ ಹೈದರು ಬೆಂಡುಬತ್ತಾಸು, ಜಿಲೇಬಿ, ಕರದಂಟು, ಬಿಸಿಬಿಸಿ ಭಜಿ ಮೊದಲಾದ ತಿಂಡಿ ತಿನಿಸುಗಳನ್ನು ತಿನ್ನುತ್ತ ,ಕುಸ್ತಿ ಪಂದ್ಯದ ಮೋಜು ಸವಿಯುತ್ತಾರೆ.


ಉದಯವಾಹಿನಿ ಚಿತ್ರ

ಕೊಳಲು ಸೀಟಿ ಊದುತ್ತ ಖುಷಿಪಡುತ್ತಾರೆ.

ನೆಲದ ಮೇಲೆ ಹರವಿಕೊಂಡು ಪಟಾಕಿ ಮಾರಾಟಕ್ಕೆ ಕುಳಿತವರಿಂದ ಪಟಾಕಿ (ಪಟಾಕಿಗೆ ಈ ಭಾಗದಲ್ಲಿ ಚೋಟೆ,ಅಥವಾ ಮದ್ದು ಎನ್ನುತ್ತಾರೆ) ಕೊಂಡು ಅಲ್ಲಿಯೇ ಹಚ್ಚಿ ಕೇಕೆ ಹಾಕುತ್ತಾರೆ. ಸಂಜೆಯಾಗುತ್ತಿದ್ದಂತೆ ಜನಜಾತ್ರೆ ಕರಗುತ್ತದೆ. ಕತ್ತಲಾವರಿಸಿದಂತೆ ಗೌಜುಗದ್ದಲ ಮಾಯವಾಗಿ ಜಾತ್ರೆ ನಡೆದೇ ಇಲ್ಲ ಎನ್ನುವಂತೆ ನೀರವಮೌನ ಆವರಿಸುತ್ತದೆ.

ಕೂಲಿಕಾರ್ಮಿಕರಿಗೆ ನಿರಂತರ ಕೆಲಸ ನೀಡಲು ಕ್ರಮ

• **ಉದಯವಾಹಿನಿ, ಔರಾದ್ :**

ವಿಬಿ-ಜಿ ರಾಮ್ ಜಿ ಯೋಜನೆಯಡಿ ಗ್ರಾಮೀಣ ಭಾಗದ ಕೂಲಿಕಾರ್ಮಿಕರಿಗೆ ನಿರಂತರವಾಗಿ ಕೆಲಸ ಒದಗಿಸಲಾಗುವುದು. ಕಾರ್ಮಿಕರು ಉದ್ಯೋಗ ಅರಸಿ ಬೇರೆ ಊರುಗಳಿಗೆ ಗುಳೆ ಹೋಗಬಾರದು ಎಂದು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಗಿತ್ತೆ ಮಾಧವ ವಿಠ್ಠಲರಾವ್ ಹೇಳಿದರು.

ತಾಲ್ಲೂಕಿನ ಶೆಂಬೆಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೆಲೂರ ಗ್ರಾಮದಲ್ಲಿ ನಡೆಯುತ್ತಿರುವ ಸಿಸಿಟಿ ಕಾಮಗಾರಿ ಹಾಗೂ ಕೌಠಾ (ಕೆ) ಗ್ರಾಮದಲ್ಲಿ ನಡೆಯುತ್ತಿರುವ ತಿರುಗಾಲುವೆ ಕಾಮಗಾರಿ ಸ್ಥಳಗಳಿಗೆ ಗುರುವಾರ ಭೇಟಿ ನೀಡಿ, ಕೂಲಿಕಾರ್ಮಿಕರೊಂದಿಗೆ ಸಂವಾದ ನಡೆಸಿದ ಅವರು, ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿಯೇ ಕಾರ್ಮಿಕರಿಗೆ ಬೇಡಿಕೆಗೆ ಅನುಗುಣವಾಗಿ ನಿರಂತರ ಕೆಲಸ ನೀಡಲು ಕ್ರಮ ಕೈಗೊಳ್ಳಲಾಗುವುದು. ಯಾರೂ ಉದ್ಯೋಗಕ್ಕಾಗಿ ಗುಳೆ ಹೋಗುವ ಅವಶ್ಯಕತೆ ಇಲ್ಲ. ಸ್ಥಳೀಯವಾಗಿಯೇ ಉದ್ಯೋಗ ಪಡೆಯಬಹುದು ಎಂದು ಮಾಹಿತಿ ನೀಡಿದರು. ಈ ವೇಳೆ ತಾಲ್ಲೂಕಿನ ಕೌಠಾ (ಬಿ) ಗ್ರಾಮದಲ್ಲಿ ಜಲಜೀವನ್ ಮಿಷನ್ ಕಾಮಗಾರಿಯನ್ನು ಪರಿಶೀಲಿಸಿದ ಅವರು ಬೇಸಿಗೆ ಆರಂಭಕ್ಕೂ ಮುನ್ನವೇ ಕುಡಿಯುವ ನೀರಿನ ಸಮಸ್ಯೆ ಎದುರಾಗುವ ಸಾಧ್ಯತೆ ಇರುವ ಗ್ರಾಮಗಳನ್ನು ಗುರುತಿಸಿ ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳಬೇಕು.

ಕೇಂದ್ರದ ಸಖಿ-ಒನ್ ಸ್ಟಾಪ್ ಸೆಂಟರ್‌ಗೆ ದಿಢೀರ ಭೇಟಿ

• **ಉದಯವಾಹಿನಿ, ಬೀದರ, :**

ಬೀದರ ಜಿಲ್ಲೆಯ ಸಖಿ-ಒನ್ ಸ್ಟಾಪ್ ಸೆಂಟರ್‌ಗೆ ಭೇಟಿ ನೀಡಿ ಪರಿಶೀಲಿಸಿದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರಾದ ಮಹೇಶ ಬಾಬು ಅವರು, ದೌರ್ಜನ್ಯಕ್ಕೊಳಗಾದ ಮಹಿಳೆಯರಿಗೆ ಒಂದೇ ಸೂರಿನಡಿ ವೈದ್ಯಕೀಯ ಚಿಕಿತ್ಸೆ, ಪೊಲೀಸ್ ನೆರವು, ಕಾನೂನು ನೆರವು, ಸಮಾಲೋಚನೆ ಹಾಗೂ ತಾತ್ಕಾಲಿಕ ಆಶ್ರಯ ವ್ಯವಸ್ಥೆಗಳನ್ನು ಒನ್-ಸ್ಟಾಪ್ ಸೆಂಟರ್‌ನಲ್ಲಿ ಉತ್ತಮ ರೀತಿಯಲ್ಲಿ ಒದಗಿಸುವಂತೆ ಸೂಚಿಸಿದರು.

ನಂತರ ಬೀದರ ತಾಲ್ಲೂಕಿನ ಮಹಿಳಾ ಪೂರಕ ಪೌಷ್ಟಿಕ ಆಹಾರ ಉತ್ಪಾದನಾ ಘಟಕಕ್ಕೆ ಭೇಟಿ ನೀಡಿ ಪರಿಶೀಲಿಸಿ ಮಾತನಾಡಿದ ಅವರು, ಆಹಾರ ಸಾಮಗ್ರಿಗಳ ಗುಣಮಟ್ಟವನ್ನು ಪರಿಶೀಲಿಸಿ, ಘಟಕದಲ್ಲಿ ತಾಂತ್ರಿಕ ಸಲಕರಣೆಗಳನ್ನು ಅಭಿವೃದ್ಧಿಪಡಿಸುವಂತೆ ತಿಳಿಸಿದರು. ಬೀದರ ಜಿಲ್ಲೆಯ ಕಚೇರಿಗಳು ಹಾಗೂ ಅಧೀನ ಕಚೇರಿಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ ಬಳಿಕ, ಇಲಾಖೆಯ ಸುಧಾರಣಾ ಸಂಸ್ಥೆಗಳಾದ ಮೈಲೂರಿನ ಸರಕಾರಿ ಬಾಲಕಿಯರ ವಸತಿ ನಿಲಯ, ಸರಕಾರಿ ಬಾಲಕರ ವಸತಿ ನಿಲಯ ಹಾಗೂ ಪರಿವೀಕ್ಷಣಾಲಯಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ಗ್ರಾಮಾಂತರ ಹಾಗೂ ಹಿಂದುಳಿದ ಪ್ರದೇಶಗಳ ಹೆಣ್ಣುಮಕ್ಕಳಲ್ಲಿ ಶಿಕ್ಷಣವನ್ನು ಪ್ರೋತ್ಸಾಹಿಸಲು ಹಾಗೂ ಶಾಲೆ ಬಿಡುವ ಮಕ್ಕಳ


ಉದಯವಾಹಿನಿ ಚಿತ್ರ

ಸಂಖ್ಯೆಯನ್ನು ಕಡಿಮೆ ಮಾಡಲು ಇಲಾಖೆಯಿಂದ ಬಾಲಕಿಯರ ವಸತಿ ನಿಲಯಗಳನ್ನು ನಡೆಸಲಾಗುತ್ತಿದ್ದು, ನಿಲಯದ ಫಲಾನುಭವಿಗಳಿಗೆ ಗುಣಮಟ್ಟದ ಊಟ ಕಲ್ಪಿಸುವಂತೆ ಸೂಚನೆ ನೀಡಿದರು.ಬೀದರನ ಬಾಲಭವನ ಸಭಾಂಗಣದಲ್ಲಿ ಇಲಾಖೆಯ ವಿವಿಧ ಯೋಜನೆಗಳ ಕುರಿತು ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಮತ್ತು ಮೇಲ್ವಿಚಾರಕಿಯರೊಂದಿಗೆ ಪ್ರಗತಿ ಪರಿಶೀಲನೆ ಸಭೆ ನಡೆಸಿ, ನಿಗದಿತ ಗುರಿ ಸಾಧಿಸಲು ಸೂಚಿಸಿದರು.


ರಸ್ತೆ ಅಗಲೀಕರಣಕ್ಕೆ ಜಿಲ್ಲಾಡಳಿತ ತುರ್ತು ಕ್ರಮ ಕೈಗೊಳ್ಳಲಿ

• **ಉದಯವಾಹಿನಿ, ಯಾದಗಿರಿ:**

ನಗರದ ಪ್ರಮುಖ ಸಂಪರ್ಕ ರಸ್ತೆಯಾಗಿರುವ ಹತ್ತಿಕುಣಿ ಕ್ರಾಸ್‌ನಿಂದ ಗಂಗಾನಗರದವರೆಗೆ ರಸ್ತೆ ಅಗಲೀಕರಣ ಹಾಗೂ ಅಗತ್ಯ ಮೂಲಸೌಕರ್ಯ ಕಲ್ಪಿಸುವ ಕಾಮಗಾರಿಯನ್ನು ಜಿಲ್ಲಾಡಳಿತ ತುರ್ತಾಗಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ಆಗ್ರಹಿಸಿ ನಗರ ಯುವ ಕಾಂಗ್ರೆಸ್ ಮುಖಂಡ ರಿಯಾನ್ ಅಲಿ ತುಮಕೂರಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಹಾಗೂ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ರಿಯಾನ್ ಅಲಿ ತುಮಕೂರಿ ಸೇರಿದಂತೆ ಇತರ ಮುಖಂಡರು, ದೇಶಕ್ಕೆ ಸ್ವಾತಂತ್ರ್ಯ ದೊರೆತ ದಿನಗಳಿಂದಲೂ ಈ ಪ್ರಮುಖ ರಸ್ತೆಯ ಅಭಿವೃದ್ಧಿ ಬಗ್ಗೆ ಯಾರೂ ಗಂಭೀರವಾಗಿ ಗಮನಹರಿಸಿರಲಿಲ್ಲ.

ಸ್ಥಳೀಯ ಶಾಸಕ ಚನ್ನಾರೆಡ್ಡಿ ಪಾಟೀಲ್ ತುನ್ನೂರು ಅವರ ಗಮನಕ್ಕೆ ತಂದ ಬಳಿಕ ಇದೀಗ ಸುಮಾರು 5 ಕೋಟಿ ರೂ. ವೆಚ್ಚದಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿ ಕೈಗೆತ್ತಿಕೊಂಡು ಹೊಸ ಕಾಯಕಲ್ಪ ನೀಡುವ ಪ್ರಯತ್ನ ನಡೆಯುತ್ತಿದೆ.

ಇಂತಹ ಜನಪರ ಅಭಿವೃದ್ಧಿ ಕಾಮಗಾರಿಗೆ ಕೆಲವು ವ್ಯಾಪಾರಸ್ಥರು ಅಡ್ಡಿಪಡಿಸುವುದು ಸರಿಯಲ್ಲ. ಸಾರ್ವಜನಿಕರ ಹಿತದೃಷ್ಟಿಯಿಂದ ಎಲ್ಲರೂ ಸಹಕಾರ ನೀಡಬೇಕು ಎಂದು ಮನವಿ


ಉದಯವಾಹಿನಿ ಚಿತ್ರ

ರಸ್ತೆ ತುಂಬಾ ಧೂಳು ಆವರಿಸುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೂ ದುಷ್ಪರಿಣಾಮ ಬೀರುವ ಆತಂಕವಿದೆ. ಅಲ್ಲದೆ, ವಾಹನಗಳ ಸುಗಮ ಸಂಚಾರಕ್ಕೂ ಅಡ್ಡಿಯಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಮಾಡಿದರು.ಇದೇ ವಿಚಾರವಾಗಿ ಜಿಲ್ಲಾ ಬಿಜೆಪಿ ನಾಯಕರ ನಿಯೋಗ ಸ್ಥಳಕ್ಕೆ ಭೇಟಿ ನೀಡಿ ಜನರಲ್ಲಿ ತಪ್ಪು ಸಂದೇಶ ರವಾನಿಸುವ ಮೂಲಕ ಗೊಂದಲ ಸೃಷ್ಟಿಸುವ ಪ್ರಯತ್ನ ಮಾಡಿದೆ ಎಂದು ಆರೋಪಿಸಿದರು. ಕಳೆದ ಐದು ವರ್ಷಗಳ ಅವಧಿಯಲ್ಲಿ ಬಿಜೆಪಿ ಶಾಸಕರು ಯಾದಗಿರಿಯನ್ನು ಪ್ರತಿನಿಧಿಸಿದ್ದರೂ ಈ ರಸ್ತೆಯ ಅಭಿವೃದ್ಧಿಗೆ ಅಗತ್ಯ ಅನುದಾನ ಒದಗಿಸುವಲ್ಲಿ ಗಮನಹರಿಸಿರಲಿಲ್ಲ.

ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿಗೆ ಕಾಡಾನೆ ಬಲಿ

ಶಂಕರ ವಲಯ ಅಭಯಾರಣ್ಯ ಪ್ರದೇಶದ ವ್ಯಾಪ್ತಿಯಲ್ಲಿ ಅಕ್ರಮವಾಗಿ ಅಳವಡಿಸಿದ್ದ ವಿದ್ಯುತ್ ತಂತಿಗೆ ಕಾಡಾನೆಯೊಂದು ಬಲಿಯಾಗಿದೆ.

• **ಉದಯವಾಹಿನಿ, ಶಿವಮೊಗ್ಗ:**

ಭತ್ತದ ಗದ್ದೆಗೆ ಅಕ್ರಮವಾಗಿ ಹಾಕಿದ್ದ ವಿದ್ಯುತ್ ಬೇಲಿ ದಾಟಲು ಹೋದ ಕಾಡಾನೆಯೊಂದು ಸಾವನ್ನಪ್ಪಿದೆ. ಶಿವಮೊಗ್ಗ ತಾಲ್ಲೂಕು ಬಸಾವಪುರ ಗ್ರಾಮದ ಈಚಲವಾಡಿ ಗ್ರಾಮದ ಸರ್ವೆ ನಂಬರ್ 16 ರ ಭತ್ತದ ಗದ್ದೆಯಲ್ಲಿ ಈ ಘಟನೆ ನಡೆದಿದೆ.

1 : ಜಮೀನ ಗುತ್ತಿಗೆ ಮೇಲೆ ಉಳುಮೆ ಮಾಡುತ್ತಿದ್ದರು
2 : ಹಂದಿ ಕಾಟಕ್ಕೆ ವಿದ್ಯುತ್ ಸಂಪರ್ಕ ಹಾಕಿದ್ದರು
3 : ಆನೆ ಸಾವನ್ನಪ್ಪಿರುವ ಕುರಿತು ಮಾಹಿತಿ ಬರುತ್ತದೆ

12-15 ವರ್ಷದ ಗಂಡಾನೆ ಇಂದು ಬೆಳಗಿನ ಜಾವ ಭತ್ತದ ಗದ್ದೆಗೆ ನುಗ್ಗಿ ಗದ್ದೆಯ ಒಂದು ಕಡೆಯಿಂದ ಮತ್ತೊಂದು ಕಡೆಗೆ ದಾಟುವಾಗ ಅಕ್ರಮ ವಿದ್ಯುತ್ ಸಂಪರ್ಕದ ಬೇಲಿಗೆ ತಾಗಿ ಸಾವನ್ನಪ್ಪಿದೆ. ಆನೆ ಜೋರಾಗಿ ಕೂಗಿ ಕೊಂಡ ಕಾರಣಕ್ಕೆ ರಾತ್ರಿ ಪಾಳೆಯಲ್ಲಿದ್ದ ಅರಣ್ಯ ಸಿಬ್ಬಂದಿಗಳು ಬಂದು ನೋಡಿದಾಗ ಆನೆ ಭತ್ತದ ಗದ್ದೆಯಲ್ಲಿ ಸಾವನ್ನಪ್ಪಿರುವುದು ಕಂಡು ಬಂದಿದೆ. ತಕ್ಷಣ ಅರಣ್ಯ ಸಿಬ್ಬಂದಿಯು ತಮ್ಮ ಮೇಲಾಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಈ ಜಮೀನನ್ನು ಸೈಯ್ಯದ್ ಅಲಿ ಎಂಬುವವರು ಗುತ್ತಿಗೆ ಮೇಲೆ ಉಳುಮೆ ಮಾಡುತ್ತಿದ್ದರು. ಇವರು ಕಾಡು ಹಂದಿ ಕಾಟಕ್ಕೆ ವಿದ್ಯುತ್ ಸಂಪರ್ಕ ಹಾಕಿದ್ದರು. ಘಟನೆ ನಡೆಯುತ್ತಿದ್ದಂತೆಯೇ ಸೈಯ್ಯದ್ ಅಲಿ ಅವರನ್ನು ಅರೆಸ್ಟ್ ಮಾಡಲಾಗಿದೆ.

ಇಂದು ಬೆಳಗ್ಗೆ 3 ಗಂಟೆ ಸಮಯದಲ್ಲಿ ಶಂಕರ ವಲಯ ಅರಣ್ಯ ಪ್ರದೇಶ ವ್ಯಾಪ್ತಿಯ ಬಸವಾಪುರದ ಈಚಲವಾಡಿ ಗ್ರಾಮ ಸರ್ವೆ ನಂ 16 ರಲ್ಲಿ ಒಂದು ಗಂಡು


ಉದಯವಾಹಿನಿ ಚಿತ್ರ

ಈ ಕುರಿತು ಮೆಸ್ಕಾಂ ಇಲಾಖೆಗೂ ಸಹ ಮಾಹಿತಿ ನೀಡಲಾಗಿದೆ. ಮೆಸ್ಕಾಂ ಅವರು ವಿದ್ಯುತ್ ಕಳ್ಳತನದ ಸೆಕ್ಷನ್ ಅಡಿಯಲ್ಲಿ ದೂರು ದಾಖಲಿಸಿಕೊಂಡಿದ್ದಾರೆ. ಅವರು ಸಹ ತನಿಖೆ ನಡೆಸುತ್ತಿದ್ದಾರೆ. ಆನೆ ಸುಮಾರು 12-15 ವರ್ಷದ್ದಾಗಿದೆ ಎಂದು ತಿಳಿಸಿದ್ದಾರೆ.-ಸಿಸಿಎಫ್ ಹನುಮಂತಪ್ಪ

ಆನೆ ಸಾವನ್ನಪ್ಪಿರುವ ಕುರಿತು ಮಾಹಿತಿ ಬರುತ್ತದೆ. ಅಧಿಕಾರಿಗಳು ಬಂದು ಸರ್ವೆ ಮಾಡಿರುತ್ತೇವೆ. ಮೃತ ಆನೆ ಕೆಳಗಡೆ ಮತ್ತು ಪಕ್ಕದಲ್ಲಿ ಚಿಕ್ಕ ತಂತಿ ಬೇಲಿ ಹಾಕಿರುವುದು ಕಂಡು ಬರುತ್ತದೆ. ಇದರ ಪಕ್ಕದಲ್ಲಿ ಎಲೆಕ್ಟ್ರಿಲ್ ಲೈನ್ ಹಾದು ಹೋಗಿರುತ್ತದೆ. ಇದರಿಂದ ಆನೆ ವಿದ್ಯುತ್ ಸ್ಪರ್ಶದಿಂದ ಮೃತ ಪಟ್ಟಿರುವುದು ಎಂದು ಕಂಡು ಬರುತ್ತದೆ. ತನಿಖೆ

ಆನೆಯನ್ನು ಭತ್ತದ ಗದ್ದೆಯಿಂದ ಕ್ರೇನ್ ಮೂಲಕ ಲಾರಿಗೆ ಹಾಕಿಕೊಂಡು ಸ್ವಲ್ಪ ದೂರದಲ್ಲಿ ಆನೆಯ ಮರಣೋತ್ತರ ಪರೀಕ್ಷೆಯನ್ನು ನಡೆಸುತ್ತಿದ್ದು, ಬಳಿಕ ಪಶು ವೈದ್ಯರು, ವಿವಿಧ ಪರಿಸರ ಸಂಸ್ಥೆಗಳು ಸೇರಿದಂತೆ ಗ್ರಾಮಸ್ಥರ ಸಮ್ಮುಖದಲ್ಲಿ ಅಂತ್ಯಸಂಸ್ಕಾರ ಮಾಡಲಾಗುತ್ತದೆ.

ನಡೆಸಿ, ಆರೋಪಿ ಸೈಯ್ಯದ್ ಎಂಬುವರನ್ನು ಬಂಧಿಸಿ ಸ್ಥಳಕ್ಕೆ ಕರೆದುಕೊಂಡು ಬಂದು ವಿಚಾರಣೆ ನಡೆಸಿದ್ದೆವೆ. ಭತ್ತ ಹಾಲು ಕಟ್ಟುವ ಸಂದರ್ಭದಲ್ಲಿ ಕಾಡುಹಂದಿಗಳು ಬರುತ್ತವೆ ಎಂದು ನಿನ್ನೆ ದಿನ ತಂತಿ ಬೇಲಿ ನಿರ್ಮಿಸಿ ಸಂಪರ್ಕ ಕೊಟ್ಟಿರುವುದು ಕಂಡು ಬರುತ್ತದೆ. ಟ್ರಂಚ್ ಹೊಡೆದಿದ್ದಾರೆ. ಅಲ್ಲಿ ಬಂಡೆ ಕಲ್ಲು ಬಂದಿದೆ. ಅಲ್ಲಿ ಅದನ್ನು ಒಡೆಯದೇ ಹಾಗೆಯೇ ಬಿಟ್ಟಿದ್ದಾರೆ. ಇದರಿಂದ ಆನೆಗಳು ಆರಾಮವಾಗಿ ಬಂದು ಪೈರು ತಿಂದು ಹೋಗುತ್ತಿವೆ. ಇಲ್ಲಿ ರೈತ ಪೈರು ತೆಗೆದುಕೊಂಡು ಹೋಗಲು ಆಗುತ್ತಿಲ್ಲ. ಎಲ್ಲಾ ಪ್ರಾಣಿಗಳ ಪಲಾಗುತ್ತಿದೆ. ಈಗ ಆನೆ ಸತ್ತಿದೆ ಎಂದು ಎಲ್ಲಾ ಅಧಿಕಾರಿಗಳು ಬಂದಿದ್ದಾರೆ. ಇಲ್ಲಿ ರೈತರಿಗೆ ಅನ್ಯಾಯ ಆದಾಗ ಯಾರು ಬರಲ್ಲ. ಪ್ರಾಣಿ ಪ್ರಾಣ ಹೋಗಿದೆ ಎಂದು ಎಲ್ಲಾ ಬಂದಿದ್ದಾರೆ ಎಂದರು. ನಮ್ಮ ಭಾಗದಲ್ಲಿ ಟ್ರಂಚ್ ಹೊಡೆದಿದ್ದಾರೆ. ಇಲ್ಲೂ ಸಹ ಟ್ರಂಚ್ ಹೊಡೆದ್ರೆ ಆನೆಗಳು ಬರಲ್ಲ. ಅರಣ್ಯ ಇಲಾಖೆರವರು ಯಾಕೆ ಈ ರೀತಿ ಬೇಜಾಬ್ದಾರಿತನದಿಂದ ವರ್ತಿಸುತ್ತಿದ್ದಾರೆಂದು ನನಗೆ ಗೊತ್ತಿಲ್ಲ. ಅರಣ್ಯ ಇಲಾಖೆ ಅವರು ಐಬ್ಯಾಕ್ಸ್ ಹಾಕಿದ್ದಾರೆ. ಅವುಗಳಿಗೆ ಬಳ್ಳಿಗಳು ಸುತ್ತಿಕೊಂಡು ಕಂಬಗಳು ವಾಲುತ್ತಿವೆ. ಬರಗಾಲದಲ್ಲಿ ಬೆಳೆ ಬೆಳೆಯುವುದೇ ಕಷ್ಟಕರವಾಗಿದೆ. ಬೆಳೆ ನಾಶವಾಗುತ್ತದೆ ಎಂದು ಕರೆಂಟ್ ಕೊಟ್ಟಿದ್ದಾರೆ. ಕರೆಂಟ್ ಕೊಡಬಾರದು. ಆನೆ ಸಾವಿಗೆ ಕಾರಣವಾಗಿರುವುದು ತಪ್ಪು ಎಂದರು.

ಉದಯ ವಾಹಿನಿ
ದೀಪಾವಳಿ ವಿಶೇಷಾಂಕ
ಭಾನುವಾರ
08 ನವೆಂಬರ್ 2026
07
ಮಿನಿ ನ್ಯೂಸ್

ಈ ದೇವಾಲಯ ವರ್ಷಕ್ಕೊಮ್ಮೆ ತೆರೆಯುತ್ತೆ, 5 ಗಂಟೆ ಮಾತ್ರ ದರ್ಶನ: ಎಲ್ಲಿದೆ ಈ ಧಾರ್ಮಿಕ ಕ್ಷೇತ್ರ

ವಾರಾಣಸಿ: ಧರ್ಮ ಮತ್ತು ಶ್ರದ್ಧೆಯ ನಗರಿ ಕಾಶಿ. ಇಲ್ಲಿನ ಸಂಪ್ರದಾಯಗಳು ಇಡೀ ಜಗತ್ತನ್ನೇ ಹೇಗೆ ವಿಸ್ಮಯಗೊಳಿಸುತ್ತವೆಯೋ ಹಾಗೆಯೇ, ಇಲ್ಲಿನ ದೇವಾಲಯವೊಂದು ಪವಾಡ ಮತ್ತು ರಹಸ್ಯದಿಂದ ಭಕ್ತರು, ಜನರ ಗಮನ ಸೆಳೆಯುತ್ತಿದೆ.


ಹೌದು, ಈ ದೇವಾಲಯ 364 ದಿನಗಳ ಕಾಲ ಮುಚ್ಚಿರುತ್ತದೆ. ಒಂದು ದಿನ ಮಾತ್ರ ತೆರೆದಿರುತ್ತದೆ. ಅದರಲ್ಲೂ 5 ಗಂಟೆಗಳ ಕಾಲವಷ್ಟೇ ಭಕ್ತರಿಗೆ ದರ್ಶನದ ಅವಕಾಶವಿರುತ್ತದೆ. ವರ್ಷಪೂರ್ತಿ ಮುಚ್ಚಿರುವ ಈ ದೇವಾಲಯವು ಆಧ್ಯಾತ್ಮಿಕ ಮಹತ್ವದ ಜೊತೆಗೆ ವಿಶಿಷ್ಟ ಹಿನ್ನೆಲೆಯೂ ಹೊಂದಿದೆ. ಬನಾರಸ್‌ನ ಚೌಕ್ ಪ್ರದೇಶದ ಸುಡಿಯಾ ಬಡಾವಣೆಯಲ್ಲಿ ಈ ದೇವಾಲಯವಿದೆ. ಇದು ಆಯುರ್ವೇದದ



ದೇವತೆ ಭಗವಾನ್ ಧನ್ವಂತರಿಗೆ ಸಮರ್ಪಿತವಾದ ದೇಶದ ಏಕೈಕ ದೇಗುಲ. 'ಸಮುದ್ರ ಮಂಥನ'ದ ವೇಳೆ ಅಮೃತ ಬಟ್ಟಲನ್ನು ಹಿಡಿದುಕೊಂಡು ಹೊರಹೊಮ್ಮಿದ ಭಗವಾನ್ ವಿಷ್ಣುವಿನ ಅವತಾರ ಧನ್ವಂತರಿಯನ್ನು ಇಲ್ಲಿ ಪೂಜಿಸಲಾಗುತ್ತದೆ. ವಿಶೇಷ ಎಂದರೆ, ಇಲ್ಲಿ ತಿನಿಸು ಅಥವಾ ಹಣ್ಣುಗಳ ಬದಲಾಗಿ, ಹಿಮಾಲಯದಿಂದ ತಂದ ಅಪರೂಪದ ಔಷಧೀಯ ಗಿಡಮೂಲಿಕೆಗಳನ್ನು ಅರ್ಪಿಸಲಾಗುತ್ತದೆ. ಋಷಿಮುನಿಗಳು ಮತ್ತು ಪ್ರಾಚೀನ ಸಂಪ್ರದಾಯಗಳ ಪ್ರಕಾರ, ಈ 5 ತಾಸು ಮಾತ್ರ ಈ ದೇವಾಲಯದ ಬಾಗಿಲು ತೆರೆದಿರುತ್ತದೆ. ಪ್ರಾರ್ಥನೆ ಸಲ್ಲಿಸಲು ಬರುವ ಭಕ್ತರಿಗೆ ವರ್ಷ ವಿಡೀ ಕಾಡುವ ಗಂಭೀರ ಕಾಯಿಲೆಗಳಿಂದ ಮುಕ್ತಿ ಸಿಗುತ್ತದೆ ಎಂಬ ನಂಬಿಕೆಯಿದೆ. ಧಾಂತೆರಸ್ (ಧನ್ವಂತರಿಯ ಜಯಂತಿ) ದಿನದಂದು, ಸಂಜೆ 4 ರಿಂದ ರಾತ್ರಿ 9 ರವರೆಗೆ ಈ ದೇವಾಲಯದ ಬಾಗಿಲುಗಳು ತೆರೆದಿರುತ್ತವೆ.ಈ ದೇವಾಲಯದೊಂದಿಗೆ ಸಂಬಂಧ ಹೊಂದಿರುವ ಆಯುರ್ವೇದ ವೈದ್ಯ ಉತ್ಪಲ್ ಕುಮಾರ್ ಶಾಸ್ತ್ರಿ ಅವರು ಮಾತನಾಡಿ, ಪೌರಾಣಿಕ ಕಥೆಗಳ ಪ್ರಕಾರ, ಸಮುದ್ರ ಮಂಥನದ ವೇಳೆ ಭಗವಾನ್ ವಿಷ್ಣುವು ಧನ್ವಂತರಿ ರೂಪದಲ್ಲಿ ಕೈಯಲ್ಲಿ ಅಮೃತದ ಬಟ್ಟಲನ್ನು ಹಿಡಿದುಕೊಂಡು ಅವತರಿಸಿದನು. ಧನ್ವಂತರಿಯನ್ನು ಆಯುರ್ವೇದದ ದೇವತೆಯೆಂದು ಪೂಜಿಸಲಾಗುತ್ತದೆ.ಭಗವಾನ್ ಧನ್ವಂತರಿಯ ವಿಗ್ರಹವನ್ನು ಹೊಂದಿರುವ ಜಗತ್ತಿನ ಏಕೈಕ ದೇವಾಲಯ ಇದಾಗಿದೆ ಎಂದು ಹೇಳಿದರು. ಭಾರತದಲ್ಲಿರುವ ಏಕೈಕ ಧನ್ವಂತರಿ ದೇವಾಲಯ ಇದಾಗಿದೆ. ಧನ ತ್ರಯೋದಶಿ ದಿನದಂದು ಮಾತ್ರ ದೇವಾಲಯವನ್ನು 5 ಗಂಟೆಗಳ ಕಾಲ ತೆರೆಯಲಾಗುತ್ತದೆ.

ಗಯಾನಾ ದೇಶಕ್ಕೆ ಸಾಲ ನೀಡಿದ ಭಾರತ

ಕೆರೆಬಿಯನ್ ರಾಷ್ಟ್ರಗಳೊಂದಿಗೆ ಭಾರತದ ಸಂಬಂಧ ವಿಸ್ತರಣೆ



ಕಾಮನ್‌ವೆಲ್ತ್‌ನಲ್ಲಿನ ಸದಸ್ಯತ್ವ ಮತ್ತು ಜಾಗತಿಕ ದಕ್ಷಿಣದಲ್ಲಿ ಪಾಲುದಾರರಾಗಿ ಹಂಚಿಕೆಯ ಗುರುತು ಸಾಮಾನ್ಯ ಅಭಿವೃದ್ಧಿ ಆದ್ಯತೆಗಳನ್ನು ಮುಂದುವರಿಸಲು ಪ್ರಮುಖ ಬಹುಪಕ್ಷೀಯ ವೇದಿಕೆಗಳನ್ನು ಒದಗಿಸುತ್ತದೆ. ಅಂತಾರಾಷ್ಟ್ರೀಯ ಸಂಸ್ಥೆಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳ ಧ್ವನಿಯನ್ನು ಬಲಪಡಿಸುವಲ್ಲಿ, ಸಮಾನ ಆರ್ಥಿಕ ಅವಕಾಶಗಳನ್ನು ಉತ್ತೇಜಿಸುವಲ್ಲಿ ಮತ್ತು ಜಾಗತಿಕ ದಕ್ಷಿಣದ ಮೇಲೆ ಪರಿಣಾಮ ಬೀರುವ ಸಮಸ್ಯೆಗಳ ಕುರಿತು ಸಹಕಾರವನ್ನು ಮುಂದುವರಿಸುವಲ್ಲಿ ಎರಡೂ ದೇಶಗಳು ಆಸಕ್ತಿ ಹೊಂದಿವೆ. ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಜೊತೆ ಭಾರತದ ಸಂಬಂಧ ವಿಸ್ತರಣೆ: ಜೈಶಂಕರ್-ಅಲಿ ಸಭೆಯ ಇತ್ತೀಚಿನ ಫಲಿತಾಂಶಗಳು ಲ್ಯಾಟಿನ್ ಅಮೆರಿಕ ಮತ್ತು ಕೆರಿಬಿಯನ್ ಜೊತೆ ತನ್ನ ಆರ್ಥಿಕ ಮತ್ತು ರಾಜತಾಂತ್ರಿಕ ಸಂಬಂಧವನ್ನು ವಿಸ್ತರಿಸುವ ಭಾರತದ ವಿಶಾಲ ಪ್ರಯತ್ನಗಳಿಗೆ ಹೊಂದಿಕೊಳ್ಳುತ್ತವೆ.

ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಪರ್ಕಗಳು ಒಂದು ಅಡಿಪಾಯ

ಭಾರತ ಮತ್ತು ಗಯಾನಾ ತಮ್ಮ ಸಾಮಾನ್ಯ ಐತಿಹಾಸಿಕ ಅನುಭವ ಮತ್ತು ವ್ಯಾಪಕವಾದ ಜನರ -ಜನರ ಸಂಪರ್ಕಗಳಲ್ಲಿ ಬೇರೂರಿರುವ ದೀರ್ಘಕಾಲದ ಸಂಬಂಧಗಳನ್ನು ಹಂಚಿಕೊಳ್ಳುತ್ತವೆ. ಗಯಾನಾದಲ್ಲಿ ಭಾರತೀಯ ಮೂಲದ ಗಣನೀಯ ಜನಸಂಖ್ಯೆಯ ಉಪಸ್ಥಿತಿಯು ಸಂಬಂಧವನ್ನು ಉಳಿಸಿಕೊಳ್ಳುವಲ್ಲಿ ಪ್ರಮುಖ ಅಂಶವಾಗಿದೆ. 19ನೇ ಶತಮಾನದಲ್ಲಿ ಭಾರತೀಯ ಒಪ್ಪಂದದ ಕಾರ್ಮಿಕರ ಆಗಮನವು ಎರಡೂ ದೇಶಗಳ ನಡುವೆ ಆಳವಾದ ಸಾಂಸ್ಕೃತಿಕ ಮತ್ತು ಸಾಮಾಜಿಕ ಸಂಪರ್ಕಗಳನ್ನು ದ್ವಿಪಕ್ಷೀಯ ಸಂಬಂಧದ ಮೇಲೆ ಪ್ರಭಾವ ಬೀರುತ್ತಿದೆ. ಈ ಐತಿಹಾಸಿಕ ಸಂಪರ್ಕಗಳು ರಾಜಕೀಯ, ಆರ್ಥಿಕ, ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ರಾಜತಾಂತ್ರಿಕ ಸಂಬಂಧಗಳು ಮತ್ತು ಸಹಕಾರಕ್ಕೆ ಬಲವಾದ ಅಡಿಪಾಯವನ್ನು ಒದಗಿಸಿವೆ. ಎರಡೂ ದೇಶಗಳು ವ್ಯಾಪಾರ, ಹೂಡಿಕೆ, ಅಭಿವೃದ್ಧಿ ನೆರವು ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಸಹಕಾರವನ್ನು ವಿಸ್ತರಿಸುವ ಅವಕಾಶಗಳನ್ನು ಅನ್ವೇಷಿಸುತ್ತಿವೆ.

500 ಮಿಲಿಯನ್ ಡಾಲರ್ ಸಾಲದ ನೆರವು

500 ಮಿಲಿಯನ್ ಡಾಲರ್ ಮೌಲ್ಯದ ಹೊಸ ಸಾಲದ ನೆರವು ಗಯಾನಾದ ಅಭಿವೃದ್ಧಿ ಕಾರ್ಯಸೂಚಿಗೆ ಭಾರತದ ಮಹತ್ವದ ಆರ್ಥಿಕ ಬದ್ಧತೆಯನ್ನು ಪ್ರತಿನಿಧಿಸುತ್ತದೆ. ಈ ಸಾಲದ ಸೌಲಭ್ಯವನ್ನು ಗಯಾನಾದ ಆದ್ಯತೆಯ ಮೂಲಸೌಕರ್ಯ ಯೋಜನೆಗಳು ಮತ್ತು ಇತರ ಅಭಿವೃದ್ಧಿ ಅಗತ್ಯಗಳಿಗೆ ಬಳಸಲಾಗುತ್ತದೆ. ಇದು ದಕ್ಷಿಣ ಅಮೆರಿಕದಲ್ಲಿ ಅಭಿವೃದ್ಧಿ ಪಾಲುದಾರನಾಗಿ ಭಾರತದ ಪಾತ್ರವನ್ನು ಇನ್ನಷ್ಟು ಬಲಪಡಿಸುತ್ತದೆ.

ಭಾರತವು ಈಗಾಗಲೇ ಗಯಾನಾದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸಿದೆ. ಹೊಸ ಸಾಲದ ಸೌಲಭ್ಯವು ಉಭಯ ದೇಶಗಳ ನಡುವಿನ ಅಭಿವೃದ್ಧಿ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲಿದೆ ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ. ಭಾರತವು ಈಗಾಗಲೇ ಗಯಾನಾದಲ್ಲಿ ಹಲವಾರು ಅಭಿವೃದ್ಧಿ ಯೋಜನೆಗಳನ್ನು ಪೂರ್ಣಗೊಳಿಸಿದೆ. ಇತ್ತೀಚಿನ ಸಾಲದ ಬದ್ಧತೆಯು ದ್ವಿಪಕ್ಷೀಯ ಸಹಕಾರಕ್ಕೆ ಮತ್ತಷ್ಟು ವೇಗ ನೀಡುವ ನಿರೀಕ್ಷೆಯಿದೆ. ಅಭಿವೃದ್ಧಿ ಹಣಕಾಸು ನೆರವನ್ನು ಆರ್ಥಿಕ ರಾಜತಾಂತ್ರಿಕತೆಯ ಸಾಧನವಾಗಿ ಬಳಸುವ ಹಾಗೂ ಜಾಗತಿಕ ದಕ್ಷಿಣ ರಾಷ್ಟ್ರಗಳೊಂದಿಗೆ ಸಂಬಂಧ ಮತ್ತು ಸಹಭಾಗಿತ್ವವನ್ನು ವಿಸ್ತರಿಸುವ ನವದೆಹಲಿಯ ನಿರಂತರ ಪ್ರಯತ್ನವನ್ನೂ ಇದು ಪ್ರತಿಬಿಂಬಿಸುತ್ತದೆ.

ಉದಯವಾಹಿನಿ, ನವದೆಹಲಿ,

ಮೂಲಸೌಕರ್ಯ ಯೋಜನೆಗಳಿಗೆ ಬೆಂಬಲ ನೀಡುವ ಉದ್ದೇಶದಿಂದ ಭಾರತ ಗಯಾನಾ ದೇಶಕ್ಕೆ 500 ಮಿಲಿಯನ್ ಅಮೆರಿಕನ್ ಡಾಲರ್ ಮೌಲ್ಯದ ಹೊಸ ಸಾಲದ ನೆರವು ಘೋಷಿಸಿದೆ. ಇದು ಸಂಪನ್ಮೂಲ ಸಮೃದ್ಧವಾಗಿರುವ ಈ ರಾಷ್ಟ್ರದೊಂದಿಗೆ ನವದೆಹಲಿಯ ಅಭಿವೃದ್ಧಿ ಪಾಲುದಾರಿಕೆಯ ಗಮನಾರ್ಹ ವಿಸ್ತರಣೆಯನ್ನು ಸೂಚಿಸುತ್ತದೆ. ಆಂಟಿಗುವಾದಲ್ಲಿ ನಡೆದ ಕಾಮನ್‌ವೆಲ್ತ್ ರಾಷ್ಟ್ರಗಳ ಸರ್ಕಾರದ ಮುಖ್ಯಸ್ಥರ ಸಭೆ ಸಂದರ್ಭದಲ್ಲಿ ಗಯಾನಾದ ಪ್ರತಿನಿಧಿಗಳೊಂದಿಗೆ ನಡೆದ ಮಾತುಕತೆಯ ಬಳಿಕ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಈ ಘೋಷಣೆ ಮಾಡಿದ್ದಾರೆ.

ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ಅವರು, 2024ರಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರ ಭೇಟಿಯ ಬಳಿಕ ಉಭಯ ದೇಶಗಳ ನಡುವಿನ ಸಹಕಾರದಲ್ಲಿ ಕಂಡುಬಂದ ಪ್ರಗತಿಯನ್ನು ಪರಿಶೀಲಿಸಲಾಗಿದೆ. ಆರೋಗ್ಯ ಮತ್ತು ರಕ್ಷಣಾ ಕ್ಷೇತ್ರಗಳ ಯೋಜನೆಗಳಿಗೆ ಸಂಬಂಧಿಸಿದಂತೆ ಹೊಸ ಸಹಕಾರವನ್ನು ಘೋಷಿಸಲಾಗಿದೆ.

ಈ ಎರಡು ದೇಶಗಳು ಮೂರು ಒಪ್ಪಂದಗಳಿಗೆ ಸಹಿ ಹಾಕಿದವು. ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳ ಉತ್ಪಾದನಾ ಘಟಕಗಳಿಗೆ ಅಗತ್ಯವಾದ ಉಪಕರಣಗಳ ಪೂರೈಕೆ ಮತ್ತು ಅಳವಡಿಕೆ, ತ್ವರಿತ ಪರಿಣಾಮದ ಯೋಜನೆಗಳ ಅನುಷ್ಠಾನಕ್ಕೆ ಅನುದಾನ ನೆರವು ಹಾಗೂ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಕ್ಷೇತ್ರದಲ್ಲಿ ಸಹಕಾರಕ್ಕೆ ಸಂಬಂಧಿಸಿದ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ಗಯಾನಾದಲ್ಲಿ ಭಾರತದ ಏಕೀಕೃತ ಪಾವತಿ ವ್ಯವಸ್ಥೆ ಮಾದರಿಯ ವ್ಯವಸ್ಥೆಯನ್ನು ಅಭಿವೃದ್ಧಿ ಮತ್ತು ಕಾರ್ಯಗತಗೊಳಿಸುವುದೂ ಇದರಲ್ಲಿ ಸೇರಿದೆ.

ಈ ಸಭೆಯ ಫಲಿತಾಂಶಗಳು ಭಾರತ ಗಯಾನಾ ಸಂಬಂಧಗಳ ಹೆಚ್ಚುತ್ತಿರುವ ವ್ಯಾಪ್ತಿಯನ್ನು ಎತ್ತಿ ತೋರಿಸುತ್ತವೆ. ಎರಡೂ ದೇಶಗಳು ತಮ್ಮ ಐತಿಹಾಸಿಕ ಮತ್ತು ಸಾಂಸ್ಕೃತಿಕ ಸಂಬಂಧಗಳನ್ನು ವ್ಯಾಪಾರ, ಹೂಡಿಕೆ, ಇಂಧನ, ಕೃಷಿ, ಮೂಲಸೌಕರ್ಯ, ಉತ್ಪಾದನೆ ಮತ್ತು ಡಿಜಿಟಲ್ ತಂತ್ರಜ್ಞಾನ ಕ್ಷೇತ್ರಗಳ ಸಹಕಾರವಾಗಿ ವಿಸ್ತರಿಸಲು ಉತ್ಸುಕವಾಗಿವೆ.

ಮೂರು ಒಪ್ಪಂದಗಳ ಮೂಲಕ ಉತ್ಪಾದನಾ ವಲಯ ಮತ್ತು ತಳಮಟ್ಟದ ಅಭಿವೃದ್ಧಿ

ಸಭೆಯ ಸಂದರ್ಭದಲ್ಲಿ ಸಹಿ ಹಾಕಲಾದ ಮೂರು ಒಪ್ಪಂದಗಳು ಗಯಾನಾದ ಆರ್ಥಿಕ ಅಭಿವೃದ್ಧಿಯ ವಿಭಿನ್ನವಾದರೂ ಪರಸ್ಪರ ಪೂರಕವಾಗಿರುವ ಅಂಶಗಳನ್ನು ಪರಿಹರಿಸುವ ಉದ್ದೇಶ ಹೊಂದಿವೆ. ಮೊದಲ ಒಪ್ಪಂದವು ಸೂಕ್ಷ್ಮ ಮತ್ತು ಸಣ್ಣ ಉದ್ಯಮಗಳಿಗಾಗಿ ಉತ್ಪಾದನಾ ಯೋಜನೆಗಳ ಪೂರೈಕೆ ಹಾಗೂ ಸ್ಥಾಪನೆಗೆ ಸಂಬಂಧಿಸಿದೆ. ಗಯಾನಾದಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಉತ್ಪಾದನಾ ಸಾಮರ್ಥ್ಯಗಳ ಅಭಿವೃದ್ಧಿಗೆ ಬೆಂಬಲ ನೀಡುವುದು ಇದರ ಮುಖ್ಯ ಉದ್ದೇಶವಾಗಿದೆ. ಸಣ್ಣ ಉದ್ಯಮಗಳ ಬೆಳವಣಿಗೆಯನ್ನು ಉತ್ತೇಜಿಸಲು ಹಾಗೂ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ನೆರವಾಗಬಹುದು.

ಮಿಚಿಗನ್ ಹೌಸ್‌ನ ಮೊದಲ ಭಾರತೀಯ-ಅಮೆರಿಕನ್ ಸ್ಪೀಕರ್ ಆಗಿ ರಂಜೀವ್ ಪುರಿ ಆಯ್ಕೆ

ವಾಷಿಂಗ್ಟನ್: ಡೆಮಾಕ್ರಟಿಕ್ ಪಕ್ಷದ ರಂಜೀವ್ ಪುರಿ ಅವರು ಅಮೆರಿಕದ ಮಿಚಿಗನ್ ಹೌಸ್‌ನ ಸ್ಪೀಕರ್ ಆಗಿ ಆಯ್ಕೆಯಾಗಿದ್ದಾರೆ. ಪ್ರತಿಷ್ಠಿತ ಹುದ್ದೆ ಅಲಂಕರಿಸಿದ ಮೊದಲ ಭಾರತೀಯ-ಅಮೆರಿಕನ್ ಎಂಬ ಹೆಗ್ಗಳಿಕೆಗೆ ಅವರು ಪಾತ್ರರಾಗಿದ್ದಾರೆ. ಸಾಮಾಜಿಕ ಜಾಲತಾಣ ಫೇಸ್‌ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡಿರುವ ಪುರಿ, ಇಂದು, ನನ್ನ ಸಹೋದ್ಯೋಗಿಗಳು ನನ್ನನ್ನು ಮಿಚಿಗನ್ ಹೌಸ್‌ನ ಸ್ಪೀಕರ್ ಆಗಿ ಆಯ್ಕೆ ಮಾಡಿರುವುದಕ್ಕೆ ನಾನು ಅತ್ಯಂತ ವಿನಮ್ರನಾಗಿದ್ದೇನೆ ಎಂದು ತಿಳಿಸಿದ್ದಾರೆ.42 ವರ್ಷದ ಪುರಿ ಮಿಚಿಗನ್ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ನ ಸ್ಪೀಕರ್ ಆಗಿ ಆಯ್ಕೆಯಾದರು. ಚುನಾವಣಾ ಪ್ರಚಾರದ ಸಂದರ್ಭದಲ್ಲಿ ನೀಡಿದ ಭರವಸೆಗಳನ್ನು ಈಡೇರಿಸಲು, ಸೆನೆಟ್ ಬಹುಮತದ ನಾಯಕರಾಗಿ ಆಯ್ಕೆಯಾಗಿರುವ ಡ್ಯಾರಿನ್ ಕ್ಯಾಮಿಲೆರಿ ಮತ್ತು ಗವರ್ನರ್ ಆಗಿ ಆಯ್ಕೆಯಾಗಿರುವ ಜೋಸೆಲಿನ್ ಬೆನ್ಸನ್ ಅವರೊಂದಿಗೆ ಕೆಲಸ ಮಾಡಲು ತಾವು ಉತ್ಸುಕರಾಗಿರುವುದಾಗಿ ಪುರಿ ತಿಳಿಸಿದ್ದಾರೆ. ನನ್ನ ಮೇಲೆ ನಂಬಿಕೆ ಇಟ್ಟ ಸಹೋದ್ಯೋಗಿಗಳಿಗೆ ಧನ್ಯವಾದಗಳು. ಕೆಲಸ ಪ್ರಾರಂಭಿಸಲು ನಾನು ಉತ್ಸುಕನಾಗಿದ್ದೇನೆ ಎಂದು ಹೇಳಿದ್ದಾರೆ.2020ರಲ್ಲಿ ಮಿಚಿಗನ್ ಹೌಸ್ ಆಫ್ ರೆಪ್ರೆಸೆಂಟೇಟಿವ್ಸ್‌ಗೆ ಆಯ್ಕೆಯಾದ ಮೊದಲ ಸಿಖ್ ಅಮೆರಿಕನ್ ಎಂಬ ಹೆಗ್ಗಳಿಕೆಗೆ ಪುರಿ ಪಾತ್ರರಾಗಿದ್ದರು.

ಹೋಟೆಲ್‌ನ 7ನೇ ಮಹಡಿಯಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದು ಮಹಿಳೆ ಸಾವು

ಬ್ರೆಸಿಲಿಯಾ: ಬ್ರೆಜಿಲ್‌ನ ಹೋಟೆಲ್‌ನ 7ನೇ ಮಹಡಿಯಿಂದ ಆಕಸ್ಮಿಕವಾಗಿ ಕೆಳಗೆ ಬಿದ್ದು ಮಹಿಳೆಯೊಬ್ಬರು ಮೃತಪಟ್ಟಿರುವ ಘಟನೆ ನಡೆದಿದೆ. ಹೋಟೆಲ್ ಕಿಟಕಿಯ ಅಲ್ಯೂಮಿನಿಯಂ ಚೌಕಟ್ಟಿಗೆ ಮಹಿಳೆ ಒರಗಿಕೊಂಡು ನಿಂತಿದ್ದರು. ಆದರೆ, ಕಿಟಕಿ ಮುರಿದು ಏಳನೇ ಮಹಡಿಯಿಂದ ಕೆಳಗೆ ಬಿದ್ದು ಮೃತಪಟ್ಟಿದ್ದಾರೆ. ಈ ಘಟನೆ ನಡೆದಾಗ ಆಕೆಯ ಗೆಳೆಯ ಕಾರಿಡಾರ್‌ನಲ್ಲಿ ನಿಂತಿದ್ದ ಎಂದು ಪೊಲೀಸರು ತಿಳಿಸಿದ್ದಾರೆ. ಎರಡು ಮಕ್ಕಳ ತಾಯಿ ರೆನಾಟಾ ರೆಬೆಕಾ ನೆಗ್ರಾವೊ ಸಲ್ದಾನ್ಹಾ ಡಾಸ್ ಸ್ಯಾಂಟೋಸ್ ಅವರು ಮರನ್‌ಹಾವೊ ರಾಜ್ಯದ ರಾಜಧಾನಿ ಸಾವೊ ಲೂಯಿಸ್‌ನಲ್ಲಿರುವ ಪೊಂಟಾ ಡಿ ಏರಿಯಾದಲ್ಲಿರುವ ರಿಯೊ ಪೊಟಿ ಹೋಟೆಲ್‌ನ ಮಹಡಿಯಿಂದ ಬಿದ್ದು ಮೃತಪಟ್ಟಿದ್ದಾರೆ.

ವಯನಾಡು ಭೂಕುಸಿತದಲ್ಲಿ ಇಡೀ ಕುಟುಂಬ ಕಳೆದುಕೊಂಡಿದ್ದ ಶೃತಿ ಬಾಳಲ್ಲಿ ಹೊಸ ಅಧ್ಯಾಯ

ತಿರುವನಂತಪುರಂ: ವಯನಾಡು ಭೂಕುಸಿತ ದುರಂತದಲ್ಲಿ ಕುಟುಂಬ, ಮನೆ ಹಾಗೂ ಮದುವೆಯಾಗಬೇಕಿದ್ದ ಹುಡುಗನನ್ನು ಕಳೆದುಕೊಂಡಿದ್ದ ಶೃತಿ ಇದೀಗ ಹೊಸ ಬದುಕಿಗೆ ಕಾಲಿಟ್ಟಿದ್ದಾರೆ. ವಯನಾಡಿನ ಚೂರಲ್‌ಮಲ ಮೂಲದ ಎಸ್.ಶೃತಿ ಇಂದು ಗುರುವಾಯೂರು ಶ್ರೀಕೃಷ್ಣ ದೇವಸ್ಥಾನದಲ್ಲಿ ಸಂದೀಪ್ ಅವರೊಂದಿಗೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಮಾನಂತವಾಡಿ ಮೂಲದ ಸಂದೀಪ್ ಅವರು ವಯನಾಡು ಜಿಲ್ಲಾಧಿಕಾರಿ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದಾರೆ.

ಮದುವೆ ಸಮಾರಂಭದಲ್ಲಿ ಆಪ್ತ ಸಂಬಂಧಿಕರು ಹಾಗೂ ಸ್ನೇಹಿತರು ಭಾಗವಹಿಸಿದ್ದರು. ಮಾಜಿ ಕಂದಾಯ ಸಚಿವ ಕೆ. ರಾಜನ್ ಅವರು ಮದುವೆ ಸಮಾರಂಭದಲ್ಲಿ ಭಾಗವಹಿಸಿದ್ದರು.

ತಂದೆಯ ಸ್ಥಾನದಲ್ಲಿ ನಿಂತು ಮದುವೆಯ ಶಾಸ್ತ್ರಗಳನ್ನು ನೆರವೇರಿಸುವ ಜವಾಬ್ದಾರಿ ವಹಿಸಿಕೊಂಡಿದ್ದರು. ಮದುವೆಯ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಶೃತಿ, ಜೀವನದ ಹೊಸ ಅಧ್ಯಾಯ ಆರಂಭಿಸುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ.

ತಾನು ಎದುರಿಸಿದ ಎಲ್ಲಾ ನೋವು ಮತ್ತು ದುರಂತಗಳ ಬಗ್ಗೆ ತಿಳಿದಿದ್ದರೂ ಸಂದೀಪ್ ತನ್ನೊಂದಿಗೆ ಬದುಕಲು ನಿರ್ಧರಿಸಿದ್ದಾರೆ.

ನಮ್ಮ ಮುಂದಿನ ಜೀವನ ಸಂತೋಷದಿಂದ ಕೂಡಿರಲಿ ಎಂದು ಪ್ರಾರ್ಥಿಸುತ್ತೇನೆ ಎಂದು ಹೇಳಿದ್ದಾರೆ.

24ರ ಜುಲೈ 30ರಂದು ವಯನಾಡಿನ ಚೂರಲ್‌ಮಲ ಮತ್ತು ಮುಂಡಕ್ಕೈ ಪ್ರದೇಶಗಳಲ್ಲಿ ಸಂಭವಿಸಿದ ಭೂಕುಸಿತ ಶೃತಿ ಅವರ ಕುಟುಂಬವನ್ನೇ ಬಲಿ ಪಡೆದಿತ್ತು.

ಯೆಮೆನ್‌ನ ಮಾರುಕಟ್ಟೆ ಮೇಲೆ ವೈಮಾನಿಕ ದಾಳಿ: ಕನಿಷ್ಠ 30 ಮಂದಿ ಸಾವು

ಕೈರೋ: ನೈಋತ್ಯ ಯೆಮೆನ್‌ನ ಮಾರುಕಟ್ಟೆಯೊಂದರ ಮೇಲೆ ನಡೆದ ವೈಮಾನಿಕ ದಾಳಿಯಲ್ಲಿ ಕನಿಷ್ಠ 30 ಮಂದಿ ಸಾವನ್ನಪ್ಪಿದ್ದಾರೆ ಎಂದು ಇರಾನ್ ಬೆಂಬಲಿತ ಹೌತಿ ಬಂಡುಕೋರರ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಹೌತಿಗಳು ಮತ್ತು ಸೌದಿ ಬೆಂಬಲಿತ ಪಡೆಗಳ ನಡುವೆ ಸಂಘರ್ಷ ಮರುಕಳಿಸಿದ ನಂತರ ನಡೆದ ಅತ್ಯಂತ ಭೀಕರ ದಾಳಿಗಳಲ್ಲಿ ಇದೂ ಒಂದಾಗಿದೆ.

ತೈಜ್ ಪ್ರಾಂತ್ಯದ ಅಲ್-ವಜಿಯಾ ಎಂಬಲ್ಲಿರುವ ಮಾರುಕಟ್ಟೆಯ ಮೇಲೆ ನಡೆದ ಈ ವೈಮಾನಿಕ ದಾಳಿಯಲ್ಲಿ 15 ಮಂದಿ ಗಾಯಗೊಂಡಿದ್ದಾರೆ ಎಂದು ಹೌತಿಗಳ ಆರೋಗ್ಯ ಸಚಿವಾಲಯದ ವಕ್ತಾರ ಅನೀಸ್ ಅಲ್-ಸಬಾಹಿ, ಹೌತಿಗಳ ನಿಯಂತ್ರಣದಲ್ಲಿರುವ 'ಅಲ್-ಮಸಿರಾ' ಟಿವಿಗೆ ತಿಳಿಸಿದ್ದಾರೆ. ಸೌದಿ ನೇತೃತ್ವದ ಮೈತ್ರಿಕೂಟವೇ ಈ ದಾಳಿ ನಡೆಸಿದೆ ಎಂದು ಆರೋಪಿಸಿರುವ ಅವರು, ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಹೇಳಿದ್ದಾರೆ. ತೈಜ್‌ನ ಸ್ಥಳೀಯ ಅಧಿಕಾರಿಗಳು, ಜನನಿಬಿಡ ಮಾರುಕಟ್ಟೆಯೊಂದರ ಮೇಲೆ ನಡೆದ ದಾಳಿಯಲ್ಲಿ ಜನರು ಸಾವನ್ನಪ್ಪಿದ್ದಾರೆ ಮತ್ತು ಗಾಯಗೊಂಡಿದ್ದಾರೆ ಎಂದು ತಿಳಿಸಿದ್ದು, ಮೃತಪಟ್ಟವರ ನಿಖರವಾದ ಸಂಖ್ಯೆ ಎಷ್ಟೆಂದು ಹೇಳಿಲ್ಲ, ಆದರೆ, ಈ ಘಟನೆಗೆ ಹೌತಿಗಳೇ ಕಾರಣ ಎಂದು ತೈಜ್ ಅಧಿಕಾರಿಗಳು ಆರೋಪಿಸಿದ್ದಾರೆ. ಆ ಪ್ರದೇಶದಲ್ಲಿ ಯಾವುದೇ ವೈಮಾನಿಕ ದಾಳಿಗಳು ನಡೆದಿಲ್ಲ ಎಂದು ಅವರು ಸ್ಪಷ್ಟಪಡಿಸಿದ್ದಾರೆ. ರಿಯಾದ್ ವಿಮಾನ ನಿಲ್ದಾಣದ ಮೇಲೆ ದಾಳಿ ಪ್ರಕರಣ,ರಿಯಾದ್‌ನ ಕಿಂಗ್ ಖಾಲಿದ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಮೇಲೆ ಅಕ್ಟೋಬರ್ 10ರಂದು ನಡೆದ ದಾಳಿಯಲ್ಲಿ ಗಾಯಗೊಂಡಿದ್ದ ಮತ್ತೊರ್ವ ಭಾರತೀಯ ಸಾವನ್ನಪ್ಪಿದ್ದಾನೆ ಎಂದು ಸೌದಿ ಅರೇಬಿಯಾದ ಭಾರತೀಯ ರಾಯಭಾರ ಕಚೇರಿ ತಿಳಿಸಿದೆ. ಈ ಕುರಿತು ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿರುವ ರಾಯಭಾರ ಕಚೇರಿ, ಭಾರವಾದ ಹೃದಯದಿಂದ ಈ ಸಂಗತಿ ಹಂಚಿಕೊಳ್ಳುತ್ತಿದ್ದು, ರಿಯಾದ್ ವಿಮಾನ ನಿಲ್ದಾಣದಲ್ಲಿ ಅಕ್ಟೋಬರ್10 ರಂದು ನಡೆದ ದಾಳಿಯಲ್ಲಿ ಗಂಭೀರವಾಗಿ ಗಾಯಗೊಂಡಿದ್ದ ಭಾರತೀಯ ಪ್ರಜೆ ಐಸಿಯುನಲ್ಲಿ ನಿಧನರಾಗಿದ್ದಾರೆ.

ನಾವು ಅವರ ಕುಟುಂಬದ ಪರವಾಗಿ ನಿಂತಿದ್ದು, ಅವರ ಕುಟುಂಬ ಮತ್ತು ಸ್ನೇಹಿತರಿಗೆ ಹೃದಯಪೂರ್ವಕ ಸಂತಾಪಗಳನ್ನು ಅರ್ಪಿಸುತ್ತೇವೆ ಎಂದಿದ್ದಾರೆ. ಸಾವನ್ನಪ್ಪಿದ ಭಾರತೀಯ ಪ್ರಜೆ ಮೃತದೇಹವನ್ನು ಭಾರತಕ್ಕೆ ತರಲು ಅಥವಾ ಕುಟುಂಬದ ಇಚ್ಛೆಯಂತೆ ರಿಯಾದ್‌ನಲ್ಲಿ ಅಂತ್ಯಸಂಸ್ಕಾರ ನಡೆಸಲು ನಾವು ರೀತಿಯ ಸಹಾಯವನ್ನು ಮಾಡುವುದಾಗಿಯೂ ರಾಯಭಾರ ಕಚೇರಿ ತಿಳಿಸಿದೆ.

ಇದೇ ಮೊದಲ ಬಾರಿಗೆ ಡಿ.12 ರಂದು ಅಯೋಧ್ಯೆಗೆ ಅಖಿಲೇಶ್ ಯಾದವ್ ಭೇಟಿ

ಲಕ್ನೋ: ಸಮಾಜವಾದಿ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಹಾಗೂ ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಅಖಿಲೇಶ್ ಯಾದವ್ ಅವರು ಡಿಸೆಂಬರ್ 12ರಂದು ಕುಟುಂಬ ಸಮೇತರಾಗಿ ಅಯೋಧ್ಯೆಗೆ ಭೇಟಿ ನೀಡಲಿದ್ದಾರೆ.

ಈ ಸಂದರ್ಭದಲ್ಲಿ ಅಯೋಧ್ಯೆಯ ರಾಮಜನ್ಮಭೂಮಿ ಮಂದಿರಕ್ಕೆ ತೆರಳಿ ರಾಮಲಲ್ಲಾನ ದರ್ಶನ ಪಡೆಯಲಿದ್ದಾರೆ. ಸಮಾಜವಾದಿ ಪಕ್ಷದ ನಾಯಕ ಹಾಗೂ ಮಾಜಿ ಸಚಿವ ಪವನ್ ಪಾಂಡೆ ಅವರು ಅಖಿಲೇಶ್ ಯಾದವ್ ಅವರ ಅಯೋಧ್ಯೆ ಭೇಟಿಯ ದಿನಾಂಕವನ್ನು ಪ್ರಕಟಿಸಿದ್ದಾರೆ. ಅಖಿಲೇಶ್ ಯಾದವ್ ಅವರೊಂದಿಗೆ



ಪತ್ನಿ ಹಾಗೂ ಸಂಸದೆ ಡಿಂಪಲ್ ಯಾದವ್, ಪುತ್ರ ಮತ್ತು ಪುತ್ರಿ ಕೂಡ ಅಯೋಧ್ಯೆಗೆ ತೆರಳಲಿದ್ದಾರೆ ಎಂದು ತಿಳಿಸಿದ್ದಾರೆ.

ಅಯೋಧ್ಯೆಯಲ್ಲಿ ಅಖಿಲೇಶ್ ಯಾದವ್ ಅವರು ಇಡೀ ದಿನ ಕಳೆಯುವ ಸಾಧ್ಯತೆಯಿದೆ. ರಾಮಮಂದಿರದಲ್ಲಿ ರಾಮಲಲ್ಲಾನ ದರ್ಶನ ಪಡೆದ ಬಳಿಕ ಹನುಮಾನ್‌ಗಢಿ ದೇವಸ್ಥಾನಕ್ಕೂ ಭೇಟಿ ನೀಡಲಿದ್ದಾರೆ. ಅಲ್ಲದೇ, ಸಾಧು-ಸಂತರು ಹಾಗೂ ಮಹಂತರನ್ನು ಭೇಟಿಯಾಗಿ ಆಶೀರ್ವಾದ ಪಡೆಯಲಿದ್ದಾರೆ.

ಅವರೊಂದಿಗೆ ಪ್ರಸಾದ ಸ್ವೀಕರಿಸಲಿದ್ದಾರೆ ಎಂದು ಪವನ್ ಪಾಂಡೆ ಮಾಹಿತಿ ನೀಡಿದ್ದಾರೆ. 2024ರ ಜನವರಿಯಲ್ಲಿ ಅಯೋಧ್ಯೆಯ ರಾಮಮಂದಿರದಲ್ಲಿ ನಡೆದ ರಾಮಲಲ್ಲಾ ಪ್ರಾಣಪ್ರತಿಷ್ಠಾಪನಾ ಸಮಾರಂಭಕ್ಕೆ ಅಖಿಲೇಶ್ ಯಾದವ್ ಅವರು ಹಾಜರಾಗಿರಲಿಲ್ಲ. ಇದೀಗ ಪ್ರಾಣಪ್ರತಿಷ್ಠಾಪನೆಯ ಬಳಿಕ ಮೊದಲ ಬಾರಿಗೆ ರಾಮಮಂದಿರಕ್ಕೆ ಭೇಟಿ ನೀಡುತ್ತಿರುವುದು ವಿಶೇಷವಾಗಿದೆ.

ಇನ್ನು ಉತ್ತರ ಪ್ರದೇಶ ವಿಧಾನಸಭೆ ಚುನಾವಣೆ ಮುಂದಿನ ವರ್ಷ ನಡೆಯಲಿರುವ ಹಿನ್ನೆಲೆಯಲ್ಲಿ ಅಖಿಲೇಶ್ ಯಾದವ್ ಅವರ ಅಯೋಧ್ಯೆ ಭೇಟಿ ರಾಜಕೀಯ ವಲಯದಲ್ಲೂ ಗಮನ ಸೆಳೆದಿದೆ.

ಟ್ರಂಪ್ ಹತ್ಯೆಗೆ ಸಂಚು ಆರೋಪ ವೈಟ್‌ಹೌಸ್ ಬಳಿ ಶಸ್ತ್ರಾಸ್ತ್ರಗಳೊಂದಿಗೆ ವೆನೆಜುವೆಲಾ ಪ್ರಜೆ ಅರೆಸ್ಟ್

• **ಉದಯವಾಹಿನಿ, ವಾಷಿಂಗ್ಟನ್**

ಅಮೆರಿಕ ಅಧ್ಯಕ್ಷ ಟ್ರಂಪ್ ಹತ್ಯೆಗೆ ಸಂಚು ಆರೋಪ ಹಿನ್ನೆಲೆ ಶ್ವೇತಭವನದ ಸಮೀಪ ಶಸ್ತ್ರಾಸ್ತ್ರಗಳೊಂದಿಗೆ ವೆನೆಜುವೆಲಾ ಪ್ರಜೆಯನ್ನು ಸೀಕ್ರೆಟ್ ಸರ್ವಿಸ್ ಅಧಿಕಾರಿಗಳು ಬಂಧಿಸಿದ್ದಾರೆ. ಅಮೆರಿಕದ ಸೀಕ್ರೆಟ್ ಸರ್ವಿಸ್ ಅಧಿಕಾರಿಗಳು ಶ್ವೇತಭವನದ ಸುತ್ತಮುತ್ತ ಗಸ್ತು ತಿರುಗುತ್ತಿದ್ದರು. ಈ ವೇಳೆ ಕಾನ್‌ಸ್ಟಿಟ್ಯೂಷನ್ ಅವೆನ್ಯೂ ಬಳಿ ನೀಲಿ ಬಣ್ಣದ ಫೋರ್ಡ್ ಎಫ್-150 ಪಿಕಪ್ ಟ್ರಕ್ ಅನುಮಾನಾಸ್ಪದವಾಗಿ ನಿಂತಿರುವುದನ್ನು ಗಮನಿಸಿದ್ದಾರೆ.

ತಕ್ಷಣ ವಾಹನದ ಬಳಿ ತೆರಳಿದ ಅಧಿಕಾರಿ, ಒಳಗಿದ್ದ ವ್ಯಕ್ತಿಯ ಸುರಕ್ಷತೆ ಹಾಗೂ ಆತನ ಬಳಿ ಶಸ್ತ್ರಾಸ್ತ್ರಗಳಿವೆಯೇ ಎಂದು ವಿಚಾರಿಸಿದ್ದಾರೆ. ಅನುಮಾನಾಸ್ಪದವಾಗಿ ನಿಂತಿದ್ದ ವಾಹನದಲ್ಲಿ ಮೂರು ಬಂದೂಕುಗಳು ಹಾಗೂ ಅಪಾರ ಪ್ರಮಾಣದ ಗುಂಡುಗಳು ಪತ್ತೆಯಾಗಿದೆ.

ಇರಾನ್ ಪರಮಾಣು ಯೋಜನೆ ಮಾಹಿತಿ ನೀಡಿದವರಿಗೆ 188 ಕೋಟಿ ಬಹುಮಾನ

• **ಉದಯವಾಹಿನಿ, ಇರಾನ್**

ಇರಾನ್‌ನ ಪರಮಾಣು ಯೋಜನೆ ಕುರಿತು ಮಾಹಿತಿ ನೀಡಿದವರಿಗೆ 20 ಮಿಲಿಯನ್ ಡಾಲರ್ ಅಂದರೆ 188 ಕೋಟಿ ರೂಗೂ ಹೆಚ್ಚು ಬಹುಮಾನದ ಜೊತೆಗೆ ಮಾಹಿತಿ ನೀಡುವ ವ್ಯಕ್ತಿಯ ಸುರಕ್ಷತೆ ಕಾಯುವ ನಿಟ್ಟಿನಲ್ಲಿ ಅವರನ್ನು ಬೇರೆಡೆಗೆ ಸ್ಥಳಾಂತರಗೊಳ್ಳಲು ಅವಕಾಶ ನೀಡುವುದಾಗಿ ಅಮೆರಿಕ ಘೋಷಿಸಿದೆ.

ಅಮೆರಿಕದ ಸ್ಟೇಟ್ ಡಿಪಾರ್ಟ್‌ಮೆಂಟ್‌ನ ರಿವಾರ್ಡ್ಸ್ ಫಾರ್ ಜಸ್ಟಿಸ್ (ನ್ಯಾಯಕ್ಕಾಗಿ ಬಹುಮಾನ) ಕಾರ್ಯಕ್ರಮದ ಮೂಲಕ ಈ ಬಹುಮಾನ ನೀಡಲಾಗುತ್ತದೆ. ಇರಾನ್‌ನ ಪರಮಾಣು ಸೌಲಭ್ಯಗಳು, ಉಪಕರಣಗಳು, ವಿಜ್ಞಾನಿಗಳು ಸೇರಿದಂತೆ ಅದಕ್ಕೆ ಸಂಬಂಧಿಸಿದ ಸಿಬ್ಬಂದಿ ಹಾಗೂ ಇವುಗಳ ಚಲನವಲನಗಳ ಕುರಿತಾಗಿ ಅಮೆರಿಕ ಮಾಹಿತಿ ಕೋರಿದೆ. ಆದರೆ, ಇಂತಹದ್ದೇ ಮಾಹಿತಿ ಬೇಕು ಎಂದು ನಿರ್ದಿಷ್ಟಪಡಿಸಿಲ್ಲ.ಈ ಕುರಿತು ಸೆಂಟ್‌ಕಾಮ್ ಎಕ್ಸ್ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದು, ಇರಾನ್‌ನ ಪರಮಾಣು ಕಾರ್ಯಕ್ರಮದ ಯೋಜನೆ, ಅದರ ಸೌಲಭ್ಯಗಳು, ಉಪಕರಣಗಳು, ವೈಜ್ಞಾನಿಕ ಸಮುದಾಯ ಸೇರಿದಂತೆ ಅದಕ್ಕೆ ಸಂಬಂಧಿಸಿದ ಚಟುವಟಿಕೆಯಲ್ಲಿ ತೊಡಗಿರುವ ಸಿಬ್ಬಂದಿ ಅಥವಾ ಇವುಗಳ ಚಲನವಲನಗಳ ಕುರಿತು ಮಾಹಿತಿ ನೀಡಿದವರಿಗೆ ರಿವಾರ್ಡ್ಸ್ ಫಾರ್ ಜಸ್ಟೀಸ್ ಸಂಸ್ಥೆಯು 20 ಮಿಲಿಯನ್ ಡಾಲರ್ ಬಹುಮಾನ ಮತ್ತು ಅಗತ್ಯವಿದ್ದಲ್ಲಿ ಅವರಿಗೆ ಬೇರೆಡೆಗೆ ಸುರಕ್ಷಿತ ಸ್ಥಳಾಂತರಕ್ಕೆ ಸೌಲಭ್ಯವನ್ನು ಕಲ್ಪಿಸಿ ಕೊಡಲಾಗುವುದು ಎಂದು ತಿಳಿಸಿದೆ.

ಮೋದಿ ಸರ್ಕಾರದ ಅಡಿ ಭಾರತದ ರಚನೆಗೆ ಹಾನಿ; ಸೋನಿಯಾ

• **ಉದಯವಾಹಿನಿ, ದೆಹಲಿ**

ಕಳೆದ 12 ವರ್ಷದಲ್ಲಿ ಭಾರತದ ಮೂಲ ಸ್ವರೂಪ, ಪ್ರಜಾಪ್ರಭುತ್ವ ಮತ್ತು ಸಂಸ್ಥೆಗಳಿಗೆ ಭಾರಿ ಹಾನಿಯಾಗಿದೆ. ಮೋದಿ ಸರ್ಕಾರ ನಿರ್ಗಮಿಸಿದ ನಂತರವೂ, ದೇಶದ ವ್ಯವಸ್ಥೆಗಳನ್ನು ಮತ್ತೆ ಸುಸ್ಥಿತಿಗೆ ತರಲು ಸಮಯ ಬೇಕಾಗುತ್ತದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಗಂಭೀರ ಆರೋಪ ಮಾಡಿದ್ದಾರೆ.ತಮ್ಮ 'ಬಿಲಾಂಗಿಂಗ್ ಎ ಜರ್ನಿ ಆಫ್ ಲವ್' ಪುಸ್ತ ಬಿಡುಗಡೆಗೆ ಮುನ್ನ ಪತ್ರಿಕೆಯೊಂದರ ಸಂದರ್ಶನದಲ್ಲಿ ಮಾತನಾಡಿದ ಅವರು, ಜನರು ಅಸಮಾಧಾನಿತರಾಗಿದ್ದು, ಆಗಿರುವ ಹಾನಿಯನ್ನು ಗುರುತಿಸುತ್ತಿದ್ದಾರೆ. ಆದರೆ, ನಾನು ಆಶಾವಾದಿ. ಸೂಕ್ತ ಆಡಳಿತ ಸಿಕ್ಕಾಗ ಭಾರತ ಮತ್ತೆ ಸುಸ್ಥಿತಿಗೆ ಬರುತ್ತದೆ ಎಂಬುದು ನನಗೆ ತಿಳಿದಿದೆ ಎಂದರು.ಕಳೆದ 12ವರ್ಷದಲ್ಲಿ ಭಾರತದ ರಚನೆಗೆ, ಪ್ರಜಾಪ್ರಭುತ್ವ ಮತ್ತು ನಮ್ಮ ಸಂಸ್ಥೆಗಳಿಗೆ ಭಾರಿ ಹಾನಿಯಾಗಿದೆ. ಈ ಸರ್ಕಾರ ಹೋದ ಬಳಿಕ ಈ ವ್ಯವಸ್ಥೆಯ ಆರೋಗ್ಯಯುತಗೊಳಿಸಲು ಸಮಯಬೇಕು. ಇದಕ್ಕೆ ರಾಜಕೀಯ ಪಕ್ಷಗಳಿಂದ ಅಪಾರ ಪ್ರಯತ್ನದ ಅಗತ್ಯವಿದೆ ಎಂದರು.

ಕಾಂಗ್ರೆಸ್ ವರ್ಚಸ್ಸು ಕುಗ್ಗುವಿಕೆ ಮತ್ತು ಪ್ರಸ್ತುತ ಸ್ಥಿತಿ ಮತ್ತು ಭವಿಷ್ಯದ ಸಾಧ್ಯತೆಗಳ ಕುರಿತಾದ ಪ್ರಶ್ನೆಗೆ ಉತ್ತರಿಸಿದ ಅವರು, ನಾವು ಅಷ್ಟೊಂದು ನಿರಾಶಾವಾದಿಯಲ್ಲ. ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಕಾಂಗ್ರೆಸ್ ಮತ್ತು ವಿಪಕ್ಷಗಳಿಗೆ ಸಮಾನವಾದ ಹಕ್ಕು ಸಿಕ್ಕಿಲ್ಲ ಎಂಬುದನ್ನು ಗಮನಿಸಿದ್ದೇವೆ

ಎಲ್ಲಾ ಸಂಸ್ಥೆಗಳ ಮೇಲೆ ವಿಶೇಷವಾಗಿ ಚುನಾವಣಾ ಆಯೋಗದ ಮೇಲೆ ಅವರಿಗಿರುವ ಸಂಪೂರ್ಣ ಹಿಡಿತ, ಮುಖ್ಯವಾಹಿನಿ ಮಾಧ್ಯಮಗಳ ಮೇಲಿನ ಅವರ ನಿಯಂತ್ರಣ, ಅವರ ಹಣಬಲ ಮತ್ತು ಧರ್ಮದ ದುರ್ಬಳಕೆ ಇವೆಲ್ಲವೂ ಗಮನದಲ್ಲಿದೆ. ಆದರೂ ನಮ್ಮ ಪಕ್ಷ ಹೋರಾಟ ಮಾಡುತ್ತಿದ್ದು, ಪ್ರಗತಿ ಸಾಧಿಸುತ್ತಿದೆ. ನಿಜವಾದ ಅಂಶಗಳು ಎಂದರೆ, ಈ ಆಕ್ರಮಣವನ್ನು ಎದುರಿಸಿ ನಿಲ್ಲುವ ಪಕ್ಷ ಕಾಂಗ್ರೆಸ್ ಆಗಿದೆ. ಕಾಂಗ್ರೆಸ್ ನಾಯಕರು ಮತ್ತು ಕಾರ್ಯಕರ್ತರು ಎಲ್ಲ ರೀತಿಯ ಕಿರುಕುಳವನ್ನು ಎದುರಿಸಿದ್ದಾರೆ.

ಆದರೂ, ಪ್ರತಿ ಹಳ್ಳಿಯಲ್ಲಿ ಮತ್ತು ಪ್ರತಿ ಜಿಲ್ಲೆಯಲ್ಲಿ, ಕಾಂಗ್ರೆಸ್ ಪಕ್ಷ ನಮ್ಮ ಸಂವಿಧಾನದಲ್ಲಿ ಅಡಕವಾಗಿರುವ ಮೌಲ್ಯಗಳಿಗಾಗಿ ಇನ್ನೂ ಹೋರಾಡುತ್ತಿದ್ದಾರೆ.

ಹುಲಿಗಳ ರಕ್ಷಣೆಗೆ ಪ್ರಾರ್ಥನೆ ಸಲ್ಲಿಸುತ್ತಿದ್ದ ಆಲದ ಮರ ಇದೀಗ ಕಾಳಿ ಮಾತೆಯ ಚಿರಸ್ಥಾನ; ಈ ದೇಗುಲದಲ್ಲೊಂಟು ನೂರಾರು ವಿಗ್ರಹ

ಪಶ್ಚಿಮ ಬಂಗಾಳ: ಧಸ್ವಾರ ಆದಿ ಕಾಳಿ ದೇವಾಲಯದ ಒಳಗೆ ಕಾಲಿಡುತ್ತಿದ್ದಂತೆ ಕಾಡುವ ಪ್ರಶ್ನೆ ಇಷ್ಟೊಂದು ಕಾಳಿ ವಿಗ್ರಹಗಳು ಇಲ್ಲಿ ಏಕೆ ಇದು ಎಂಬುದು. ಈ ದೇಗುಲದಲ್ಲಿ ಐದು ದೊಡ್ಡ ವಿಗ್ರಹಗಳ ಜೊತೆಗೆ ಸಣ್ಣ ವಿಗ್ರಹಗಳಿವೆ. ಇಷ್ಟು ಪ್ರಮಾಣದ ವಿಗ್ರಹಕ್ಕೆ ಕಾರಣ ಭಕ್ತರು ನೀಡುವ ಕಾಣಿಕೆ. ಈ ದೇಗುಲದ ವಿಶೇಷತೆ ಕೂಡ ಹೌದು. ಇಷ್ಟಾರ್ಥ ಈಡೇರಿದಾಗ ಇಲ್ಲಿ ಭಕ್ತರು ವಿಗ್ರಹವನ್ನು ಕಾಣಿಕೆ ರೂಪದಲ್ಲಿ ಅರ್ಪಿಸುತ್ತಾರೆ. ಈ ಎಲ್ಲಾ ವಿಗ್ರಹಗಳಿಗೂ ಪ್ರತಿದಿನ ಕ್ರಮಬದ್ಧವಾಗಿ ಪೂಜೆ ಸಲ್ಲಿಸಲಾಗುತ್ತದೆ ಎನ್ನುತ್ತಾರೆ ಇಲ್ಲಿನ ಅರ್ಚಕರು.ಈ ಸ್ಥಳದಲ್ಲಿ ದೇವಾಲಯ ನಿರ್ಮಾಣವಾಗುವ ಮೊದಲು ಒಂದು ಆಲದ ಮರವಿತ್ತು. ಸಾಗರದ್ವೀಪದಲ್ಲಿ ತಲೆಮಾರುಗಳಿಂದ ನಡೆದುಬಂದ ಕಥೆಯ ಪ್ರಕಾರ, ಆ ಮರದ ಕೆಳಗೆ ಸೇರುತ್ತಿದ್ದ ಜನರು ಒಂದು ಸರಳ ಪ್ರಾರ್ಥನೆಯನ್ನು ಸಲ್ಲಿಸುತ್ತಿದ್ದರು. ಜೀವನೋಪಾಯಕ್ಕಾಗಿ ಕಾಡಿಗೆ ಹೋದಾಗ ತಮಗೆ ಯಾವುದೇ ಅಪಾಯವಾಗಬಾರದು, ತಾವು ಸುರಕ್ಷಿತವಾಗಿರಬೇಕು ಎಂಬುದು ಅವರ ಆಶಯವಾಗಿತ್ತು.ಕಾಡಿಗೆ ಹೋಗುವ ಮುನ್ನ ಪ್ರಾರ್ಥನೆ ಇದೀಗ ರಸ್ತೆಗಳು ಮತ್ತು ವಸತಿಗಳು ಇರುವ ಜಾಗದಲ್ಲಿ, ಹಿಂದೆ ಎಷ್ಟು ದಟ್ಟವಾದ ಅರಣ್ಯವಿತ್ತಂತೆ. ಅದರೊಳಗೆ ಹೋಗಲು ಧೈರ್ಯ ಬೇಕು ಎನ್ನುವ ದಟ್ಟ ಕಾಡಾಗಿತ್ತು ಎಂದು ನೆನಪಿಸಿಕೊಳ್ಳುತ್ತಾರೆ ಇಲ್ಲಿನ ನಿವಾಸಿಗಳು. ಸುಂದರಬನದ ವಿವಿಧ ಭಾಗಗಳಿಂದ ಮರ ಕಡಿಯುವವರು ಮತ್ತು ಜೇನು ಸಂಗ್ರಹಿಸುವವರು ಇಲ್ಲಿಗೆ ಬರುತ್ತಿದ್ದರು. ಅವರ ಕೆಲಸದ ನಿಮಿತ್ತ ಅವರು ರಾಯಲ್ ಬೆಂಗಾಲ್ ಹುಲಿಗಳು ಕಾಣಸಿಗುವಂತಹ ಪ್ರದೇಶಗಳಿಗೂ ಹೋಗಬೇಕಾಗುತ್ತಿತ್ತು. ಸ್ಥಳೀಯ ಕಥೆಗಳ ಪ್ರಕಾರ, ಈ ಹುಲಿಗಳಿಂದ



ರಕ್ಷಣೆ ಮಾಡಲಿ ಎಂದು ಆಲದ ಮರದ ಕೆಳಗೆ ಕಾಳಿಯಮೊದಲು ಕೋರಿದವರು ಈ ಅರಣ್ಯ ಕಾರ್ಮಿಕರೇ ಆಗಿದ್ದರು. ಅವರು ಕಾಳಿ ಮಾತೆಗೆ ದೀಪ ಬೆಳಗಿ ಪ್ರಾರ್ಥಿಸಿ ಮುನ್ನಡೆಯುತ್ತಿದ್ದರು. ಪ್ರಾರ್ಥನೆ ಸಲ್ಲಿಸಲು ಹೆಚ್ಚು ಜನರು ಬರತೊಡಗಿದಂತೆ, ಮರದ ಕೆಳಗಿನ ಆ ಸ್ಥಳವು ಒಂದು ಪವಿತ್ರ ತಾಣವಾಯಿತು.

ಕಾಲಕ್ರಮೇಣ, ಅಲ್ಲಿ ಆರಂಭವಾದ ಆರಾಧನೆಯಿಂದ ದೇಗುಲ ನಿರ್ಮಾಣವಾಯಿತು. ಈ ಸಂಪ್ರದಾಯವು ಸುಮಾರು 450 ವರ್ಷಗಳಷ್ಟು ಹಳೆಯದೆಂದು ನಂಬಲಾಗಿದೆ. ದೇವಾಲಯದ ಆಡಳಿತ ಮಂಡಳಿ ಹಾಗೂ ಸ್ಥಳೀಯರ ಹೇಳಿಕೆಗಳ ಪ್ರಕಾರ, ಇದು ಸಾಗರದ್ವೀಪದ ಅತ್ಯಂತ ಹಳೆಯ ವಸಾಹತುಗಳ ಕಾಲಕ್ಕೆ ಸೇರಿದ್ದಾಗಿದೆ. ಆದಾಗ್ಯೂ, ಇದು ನಿಖರವಾಗಿ ಯಾವಾಗ ಆರಂಭವಾಯಿತು ಎಂಬುದಕ್ಕೆ ಯಾವುದೇ ಲಿಖಿತ ದಾಖಲೆಗಳಿಲ್ಲ.ದೇವಾಲಯ ಸಮಿತಿಯ ಸದಸ್ಯರಾದ ಉತ್ಪಲ್ ಪ್ರಮಾಣಿಕ್ ಹೇಳುವಂತೆ, ಗಂಗಾಸಾಗರ ದ್ವೀಪದಲ್ಲಿ ನೆಲೆಸಲು ಬಂದ ಮೊದಲ ನಿವಾಸಿಗಳು ದಟ್ಟ ಅರಣ್ಯವನ್ನು ತೆರವುಗೊಳಿಸಿದ ಕಾಲದಿಂದಲೂ ಇಲ್ಲಿನ ಸ್ಥಳೀಯ ಸಮುದಾಯಕ್ಕೆ ಈ ಕಾಳಿ ದೇವಾಲಯದೊಂದಿಗೆ ನಂಟಿದೆ. ಇಂದಿಗೂ ಎಲ್ಲೆಡೆಯಿಂದ ಜನರನ್ನು ಇಲ್ಲಿಗೆ ಸೆಳೆಯುತ್ತಿರುವುದು ಇದೇ ಆಳವಾದ ನಂಬಿಕೆ ಎನ್ನುತ್ತಾರೆ.

ಕೃತಜ್ಞತೆಯಾಗಿ ಸಲ್ಲಿಕೆಯಾದ ವಿಗ್ರಹಗಳು

ಇದೀಗ ಇಲ್ಲಿದ್ದ ಕಾಡು ಕಣ್ಮರೆಯಾಗಿದೆ. ಈಗ ದೇಗುಲದಲ್ಲಿ ತಾಯಿ ಪ್ರಾರ್ಥನೆಗೆ ಬರುವ ಜನರು, ಇಷ್ಟಾರ್ಥ ಈಡೇರಿಕೆಗಾಗಿ ವಿಗ್ರಹವನ್ನು ಕಾಣಿಕೆಯಾಗಿ ತರುತ್ತಾರೆ. ಕಾಲಕ್ರಮೇಣ ಇಂತಹ ಕಾಣಿಕೆಯಿಂದ ದೇಗುಲ ತುಂಬಿದೆ. ಅಲ್ಲದೇ, ಈ ದೇಗುಲಕ್ಕೆ ಆಗಮಿಸುವ ಸಂದರ್ಶಕರು ಕೂಡ ಚಿಕ್ಕ ಚಿಕ್ಕ ಪ್ರತಿಮೆ ನೀಡುವುದನ್ನು ಕಾಣಬಹುದಾಗಿದೆ. ಭಕ್ತರಾದ ಗೀತಾ ಪತಿ ಮಾತನಾಡಿ, ತಾಯಿಯೇ ಅಪಾರ ಮಹಿಮೆಯೇ ಜನರನ್ನು ಮತ್ತೆ ಮತ್ತೆ ಇಲ್ಲಿಗೆ ಸೆಳೆಯುತ್ತದೆ. ವರ್ಷವಿಡೀ ಭಕ್ತರು ಈ ದೇವಾಲಯಕ್ಕೆ ಭೇಟಿ ನೀಡುತ್ತಾರೆ. ಮಂಗಳವಾರ ಮತ್ತು ಶನಿವಾರಗಳಲ್ಲಿ ನಡೆಯುವ ವಿಶೇಷ ಪೂಜೆಗಳಲ್ಲಿ ನೂರಾರು ಮಂದಿ ಪಾಲ್ಗೊಳ್ಳುತ್ತಾರೆ. ಸಾಗರ ದ್ವೀಪದಾದ್ಯಂತ ಹಾಗೂ ಪಶ್ಚಿಮ ಬಂಗಾಳದ ಇತರ ಭಾಗಗಳಿಂದ ಜನರು ಆಕೆಯ ಆಶೀರ್ವಾದ ಪಡೆಯಲು ಇಲ್ಲಿಗೆ ಆಗಮಿಸುತ್ತಾರೆ.ದೇವಾಲಯದ ಮುಖ್ಯ ಅರ್ಚಕ (ಸೇವಾಯತ್) ಪ್ರಕಾಶ್ ಪಾಂಡಾ ಮಾತನಾಡಿ, ತಮ್ಮ ಕುಟುಂಬದ ಪರಂಪರೆಯ ಭಾಗವಾಗಿ ಈ ಪೂಜಾ ವಿಧಾನ ನಡೆಸಿಕೊಂಡು ಬಂದಿರುವುದಾಗಿ ತಿಳಿಸಿದ್ದಾರೆ. ಸಾಗರ್ ದ್ವೀಪದಲ್ಲಿ ಜನವಸತಿ ಪ್ರಾರಂಭವಾದಾಗಿನಿಂದಲೇ ಇಲ್ಲಿ ಕಾಳಿ ದೇವಿಯ ಆರಾಧನೆಯೂ ಆರಂಭವಾಯಿತು. ನಮ್ಮ ಪೂರ್ವಜರು ತಲೆಮಾರುಗಳಿಂದ ಈ ದೇವಾಲಯದಲ್ಲಿ ತಾಯಿಯ ಸೇವೆ ಸಲ್ಲಿಸಿದ್ದಾರೆ. ಈಗ, ಮುಖ್ಯ ಅರ್ಚಕನಾಗಿ ನಾನು ಈ ಪರಂಪರೆಯನ್ನು ಮುಂದುವರಿಸುತ್ತಿದ್ದೇನೆ. ಇಲ್ಲಿರುವ ತಾಯಿ ನಿಜವಾಗಿಯೂ ಸಾಕ್ಷಾತ್ತಾಗಿ ನೆಲೆಸಿದ್ದಾಳೆ ಮತ್ತು ಭಕ್ತರ ಪ್ರಾರ್ಥನೆಗೆ ಸ್ಪಂದಿಸುತ್ತಾಳೆ. ಭಕ್ತರು ದೂರದ ಸ್ಥಳಗಳಿಂದ ಬಂದು ಇಲ್ಲಿ ಪ್ರಾರ್ಥನೆ ಸಲ್ಲಿಸುತ್ತಾರೆ. ಅವಳು ಕರುಣೆಯ ಮೂರ್ತರೂಪವಾಗಿದ್ದು, ತನ್ನನ್ನು ನಂಬಿ ಬರುವವರ ಹೃದಯಾಂತರಾಳದ ಆಶಯಗಳನ್ನು ಈಡೇರಿಸುತ್ತಾಳೆ. ಒಂದು ಕಾಲದಲ್ಲಿ ಭಕ್ತರೇ ಸ್ವತಃ ಪೂಜಾ ಕಾರ್ಯಗಳನ್ನು ನೆರವೇರಿಸುತ್ತಿದ್ದರು ಎಂದು ಸ್ಥಳೀಯರು ತಿಳಿಸುತ್ತಾರೆ. ಒಂದು ಕಾಲದಲ್ಲಿ ಪ್ರಾಣಿ ಬಲಿಯು ಈ ಆಚರಣೆಯ ಭಾಗವಾಗಿತ್ತು. ಆದರೆ ಈಗ ಅದನ್ನು ಬಹಳ ಹಿಂದೆಯೇ ನಿಲ್ಲಿಸಲಾಗಿದೆ. ಇಂದು, ಪ್ರಾಣಿ ಬಲಿಯಿಲ್ಲದ ಅರ್ಪಣೆಗಳೊಂದಿಗೆ, ಸಾತ್ವಿಕ ಸಂಪ್ರದಾಯದ ಪ್ರಕಾರ ದೇವಿಯನ್ನು ಪೂಜಿಸಲಾಗುತ್ತದೆ.

ಕಾರ್ತಿಕ ಅಮಾವಾಸ್ಯೆ

ಕಾಳಿ ಪೂಜೆ ಮುನ್ನಾದಿನದಂದು ದೇವಾಲಯದ ಆವರಣದಲ್ಲಿ ದುರಸ್ತಿ ಕಾರ್ಯಗಳು ಸಾಗಿದೆ. ಹಬ್ಬದ ದೀಪಾಲಂಕಾರಕ್ಕಾಗಿ ಸಿದ್ಧತೆಗಳು ಭರದಿಂದ ಸಾಗಿವೆ. ಕಾರ್ತಿಕ ಮಾಸದ ಅಮಾವಾಸ್ಯೆಯಂದು ನಡೆಯಲಿರುವ ವಿಶೇಷ ಪೂಜೆಗಾಗಿ ಅರ್ಚಕರು ಮತ್ತು ಸಮಿತಿಯ ಸದಸ್ಯರು ಸಿದ್ಧತೆ ನಡೆಸಿದ್ದಾರೆ. ಈ ದಿನದಂದು ದ್ವೀಪದಿಂದ ಹಾಗೂ ರಾಜ್ಯದ ಇತರ ಭಾಗಗಳಿಂದ ಭಕ್ತರು ಆಗಮಿಸುವ ನಿರೀಕ್ಷೆಯಿದೆ. ಧಾಸಪಾರಾದ ಜನರಿಗೆ, ವರ್ಷವಿಡೀ ತಾವು ಭೇಟಿ ನೀಡುವ ಈ ದೇವಾಲಯವು, ಈ ನಿರ್ದಿಷ್ಟ ರಾತ್ರಿಯಂದು ಅಸಂಖ್ಯಾತ ಭಕ್ತರನ್ನು ಬರಮಾಡಿಕೊಳ್ಳುವ ತಾಣವಾಗಿದೆ.







4000 ಕೋಟಿ ಬಜೆಟ್ ಅಲ್ಲ.. ರಾಮ, ಸೀತೆ, ರಾವಣ ಪಾತ್ರಗಳ ಬಗ್ಗೆ ಮಾತನಾಡಿ: 'ರಾಮಾಯಣ' ಬಗ್ಗೆ ಸಲ್ಮಾನ್ ಮಾತು

ನಿತೇಶ್ ತಿವಾರಿ ಅವರ ಬಹುನಿರೀಕ್ಷಿತ 'ರಾಮಾಯಣ' ಚಿತ್ರದ ಕುರಿತಾದ ಚರ್ಚೆಗಳು ಹೆಚ್ಚಾಗಿ ಅದರ 4,000 ಕೋಟಿ ರೂಪಾಯಿಗಳ ಬಜೆಟ್ ಮತ್ತು ದೃಶ್ಯ ಪರಿಣಾಮಗಳ ಸುತ್ತಲೇ ಕೇಂದ್ರೀಕೃತವಾಗಿದೆ. ಈ ಬಗ್ಗೆ ನಟ ಸಲ್ಮಾನ್ ಖಾನ್ ಕೂಡ ಮಾತನಾಡಿದ್ದಾರೆ. ಈ ಮಹಾಕಾವ್ಯವನ್ನು ಆಧರಿಸಿದ ಚಲನಚಿತ್ರದ ಕುರಿತು ಮಾತನಾಡುವಾಗ, ಅದರ ನಿರ್ಮಾಣ ವೆಚ್ಚ ಅಥವಾ ವಿಎಫ್‌ಎಕ್ಸ್ ಬಗ್ಗೆ ಚರ್ಚಿಸುವ ಬದಲು, ಅದು ಹೇಳುವ ಕಥೆ ಮತ್ತು ಅದರಲ್ಲಿ ಜೀವಂತವಾಗುವ ಪಾತ್ರಗಳ ಬಗ್ಗೆ ಚರ್ಚಿಸಬೇಕು ಎಂದು ನಟ ಅಭಿಪ್ರಾಯಪಟ್ಟಿದ್ದಾರೆ.

ತಮ್ಮ ಮುಂಬರುವ ಚಿತ್ರ, 'ಮಾತೃಭೂಮಿ: ಮೇ ವಾರ್ ರೆಸ್ಟ್ ಇನ್ ಪೀಸ್' ನ ಟ್ರೈಲರ್ ಬಿಡುಗಡೆ ಸಮಾರಂಭದಲ್ಲಿ ಖಾನ್ ಮಾತನಾಡಿದ್ದಾರೆ. ರಾಮಾಯಣದ ಕುರಿತು ನಡೆಯುತ್ತಿರುವ ಚರ್ಚೆಗಳ ಬಗ್ಗೆ ಸಲ್ಮಾನ್ ಖಾನ್ ಅವರನ್ನು ಪ್ರಶ್ನಿಸಲಾಯಿತು. ಈ ಕುರಿತು ಪ್ರತಿಕ್ರಿಯಿಸಿದ ನಟ, ಚರ್ಚೆಗಳು ರಾಮಾಯಣ ಎಂಬ ಮಹಾಕಾವ್ಯದ ಬಗ್ಗೆಯೇ ಇರಬೇಕು ಎಂದು ಹೇಳಿದ್ದಾರೆ.

ರಾಮಾಯಣದ ಬಗ್ಗೆ ಚರ್ಚೆ ನಡೆಯುವಾಗ ಅದು ರಾಮಾಯಣದ ವಿಷಯವನ್ನೇ ಆಧರಿಸಿರಬೇಕೇ ಹೊರತು, ವಿಎಫ್‌ಎಕ್ಸ್ ಅಥವಾ ನಿರ್ಮಾಣ ವೆಚ್ಚದ ಬಗ್ಗೆ ಅಲ್ಲ ಎಂದು ನನಗನ್ನಿಸುತ್ತದೆ. '4000 ಕೋಟಿ ರೂ. (ರಾಮಾಯಣದ ಬಜೆಟ್) ಮತ್ತು ವಿಎಫ್‌ಎಕ್ಸ್' ಎಂಬಂತೆ ಚರ್ಚಿಸುವುದು ಸರಿಯಲ್ಲ ಎಂದು ನಾನು ಭಾವಿಸುತ್ತೇನೆ' ಎಂದು ಸಲ್ಮಾನ್ ಖಾನ್ ಮಾತನಾಡಿದ್ದಾರೆ. ಶ್ರೀರಾಮ ಒಬ್ಬ ಉತ್ತಮ ಮಗ, ಉತ್ತಮ ಪತಿ, ಉತ್ತಮ ತಂದೆ ಮತ್ತು ಉತ್ತಮ ಯೋಧನಾಗಿದ್ದನು. ನಮ್ಮ 'ಮಾತೃಭೂಮಿ' ಸಿನಿಮಾದ ಕೇಂದ್ರ ಪಾತ್ರವು ಇದೇ ಗುಣಗಳನ್ನು ಮೈಗೂಡಿಸಿಕೊಂಡಿದೆ ಎಂದು ಬಾಲಿವುಡ್ ನಟ ತಿಳಿಸಿದ್ದಾರೆ.



ಪತ್ತೇದಾರಿ' ಸಿನಿಮಾಗೆ ನಟ ನವೀನ್ ಶಂಕರ್ ಚಾಲನೆ

ಕ್ರೈಂ ಥ್ರಿಲ್ಲರ್ ಕಥಾಹಂದರ ಹೊಂದಿರುವ 'ಪತ್ತೇದಾರಿ' ಚಿತ್ರದ ಮುಹೂರ್ತ ಸಮಾರಂಭ ಕಂಠೀರವ ಸ್ಟುಡಿಯೋದಲ್ಲಿ ನೆರವೇರಿತು. ನಟ ನವೀನ್ ಶಂಕರ್ ಅವರು ಚಿತ್ರದ ಪ್ರಥಮ ಸನ್ನಿವೇಶಕ್ಕೆ ಆರಂಭ ಫಲಕ ತೋರುವ ಮೂಲಕ ಚಿತ್ರಕ್ಕೆ ಚಾಲನೆ ನೀಡಿದರು. ನಂತರ ಪತ್ರಿಕಾಗೋಷ್ಠಿಯಲ್ಲಿ ಚಿತ್ರತಂಡದ ಸದಸ್ಯರು ಮಾತನಾಡಿದರು. ನಿರ್ದೇಶಕ ಶ್ರೀನಿವಾಸ್ ಜಯರಾಮ್ ಮಾತನಾಡಿ, ಈಗಾಗಲೇ ಸಾಕಷ್ಟು ಕ್ರೈಂ ಥ್ರಿಲ್ಲರ್ ಸಿನಿಮಾಗಳು ಬಂದಿರುವುದರಿಂದ ನಮ್ಮ ಚಿತ್ರದಲ್ಲಿ ವಿಭಿನ್ನವಾದ ನಿರೂಪಣೆ ಇರಬೇಕೆಂಬ ಉದ್ದೇಶದಿಂದ ಸುಮಾರು ಆರು ವರ್ಷಗಳ ಕಾಲ ಸಂಶೋಧನೆ ನಡೆಸಿ ಕಥೆ ಹಾಗೂ ಚಿತ್ರಕಥೆಯನ್ನು ಸಿದ್ಧಪಡಿಸಿದ್ದೇವೆ.

ಹೊಸ ರೀತಿಯ ಪ್ರಯೋಗದೊಂದಿಗೆ ಪ್ರೇಕ್ಷಕರಿಗೆ ಕುತೂಹಲ ಮೂಡಿಸುವ ಪ್ರಯತ್ನ ಮಾಡಿದ್ದೇವೆ. ಅನುಭವಿ ತಂತ್ರಜ್ಞರು ಹಾಗೂ ಕಲಾವಿದರ ಸಹಕಾರದೊಂದಿಗೆ ಚಿತ್ರದ ಪ್ರತಿಯೊಂದು ವಿಭಾಗದಲ್ಲೂ ಗುಣಮಟ್ಟಕ್ಕೆ ಆದ್ಯತೆ ನೀಡಿ ಕೆಲಸ ಮಾಡಿದ್ದೇವೆ. ಉತ್ತಮ ಸಿನಿಮಾ ನೀಡುವ ವಿಶ್ವಾಸವಿದೆ ಎಂದರು. ಚಿತ್ರದ ನಾಯಕ ಮೊಹಮ್ಮದ್ ಕಿಜಾರ್ ಮಾತನಾಡಿ, ನಿರ್ದೇಶಕರು ಹೇಳಿದ ಕಥೆ ತುಂಬಾ ಚೆನ್ನಾಗಿದೆ.

ನನ್ನ ಪಾತ್ರವೂ ವಿಭಿನ್ನವಾಗಿದ್ದು, ಚಿತ್ರತಂಡದ ಎಲ್ಲಾ ಸದಸ್ಯರ ಸಹಕಾರದಿಂದ ಒಳ್ಳೆಯ ಸಿನಿಮಾ ಮೂಡಿಬರುವ ನಿರೀಕ್ಷೆಯಿದೆ. ನಾಯಕನಾಗಿ ಅಭಿನಯಿಸುವುದರ ಜೊತೆಗೆ ನಿರ್ಮಾಪಕನಾಗಿಯೂ ಕಾರ್ಯನಿರ್ವಹಿಸುತ್ತಿದ್ದೇನೆ. ನಿಮ್ಮೆಲ್ಲರ ಪ್ರೋತ್ಸಾಹ ಮತ್ತು ಬೆಂಬಲ ಇರಲಿ ಎಂದು ಮನವಿ ಮಾಡಿದರು.

ನಟ ತುಕಾಲಿ ಸಂತೋಷ್ ಮಾತನಾಡಿ, ಮಲಯಾಳಂ, ತೆಲುಗು, ಕನ್ನಡ ಹಾಗೂ ಹಿಂದಿ ಸಿನಿಮಾಗಳು ಮತ್ತು ವೆಬ್‌ಸೀರಿಸ್‌ಗಳನ್ನು ನೋಡುತ್ತಿರುತ್ತೇನೆ. ಕ್ರೈಂ ಥ್ರಿಲ್ಲರ್‌ನಲ್ಲಿ ಸಸ್ಪೆನ್ಸ್ ಹಾಗೂ ಹಾಸ್ಯ ಮಿಶ್ರಿತ ಪೊಲೀಸ್ ಪಾತ್ರ ಮಾಡಬೇಕೆಂಬ ಆಸೆಯಿತ್ತು. ನಿರ್ದೇಶಕರು ಹೇಳಿದ ಕಥೆ ಹಾಗೂ ಸ್ಕ್ರೀನ್‌ಪ್ಲೇ ಅದ್ಭುತವಾಗಿದ್ದು, ಚಿತ್ರದಲ್ಲಿ ಒಂದರ ಹಿಂದೆ ಮತ್ತೊಂದು ತಿರುವುಗಳಿವೆ. ಪಾತ್ರ ನೀಡಿದ್ದಕ್ಕೆ ಚಿತ್ರತಂಡಕ್ಕೆ ಧನ್ಯವಾದಗಳನ್ನು ಸಲ್ಲಿಸಿದರು.









ಕಮಲ್ ಹಾಸನ್ ಹುಟ್ಟುಹಬ್ಬಕ್ಕೆ ಸಂಡಿಯಾರ್ ಫಸ್ಟ್ ಲುಕ್ ಅನಾವರಣ

ಬಹುಭಾಷಾ ನಟ ಕಮಲ್ ಹಾಸನ್ ತಮ್ಮ 73ನೇ ಹುಟ್ಟುಹಬ್ಬದ ಸಂಭ್ರಮದಲ್ಲಿದ್ದು, ಈ ವಿಶೇಷ ಸಂದರ್ಭದಲ್ಲಿ ಅಭಿಮಾನಿಗಳಿಗೆ ಭರ್ಜರಿ ಉಡುಗೊರೆ ನೀಡಿದ್ದಾರೆ. ಅವರ ಬಹುನಿರೀಕ್ಷಿತ ಮುಂದಿನ ಚಿತ್ರಕ್ಕೆ 'ಸಂಡಿಯಾರ್' ಎಂದು ನಾಮಕರಣ ಮಾಡಲಾಗಿದ್ದು, ಚಿತ್ರದ ಆಕರ್ಷಕ ಫಸ್ಟ್ ಲುಕ್ ಪೋಸ್ಟರ್ ಅನ್ನು ಅಧಿಕೃತವಾಗಿ ಬಿಡುಗಡೆ ಮಾಡಲಾಗಿದೆ.

ಕಮಲ್ ಹಾಸನ್ ಅವರ ಸ್ವಂತ ನಿರ್ಮಾಣ ಸಂಸ್ಥೆಯಾದ 'ರಾಜ್ ಕಮಲ್ ಫಿಲ್ಮ್ಸ್ ಇಂಟರ್ನ್ಯಾಷನಲ್' ಈ ಶೀರ್ಷಿಕೆಯನ್ನು ಅನಾವರಣಗೊಳಿಸಿದ್ದು, ಸಾಮಾಜಿಕ ಜಾಲತಾಣಗಳಲ್ಲಿ ಹೊಸ ಅಲೆ ಎಬ್ಬಿಸಿದೆ. ಚಿತ್ರತಂಡ ಹಂಚಿಕೊಂಡಿರುವ ಫಸ್ಟ್ ಲುಕ್ ಪೋಸ್ಟರ್‌ನಲ್ಲಿ ಕಮಲ್ ಹಾಸನ್ ಅತ್ಯಂತ ರಗಡ್ ಹಾಗೂ ಮಾಸ್ ಲುಕ್ನಲ್ಲಿ ಕಾಣಿಸಿಕೊಂಡಿದ್ದಾರೆ. ವಾಹನವೊಂದರ ಪಕ್ಕದಲ್ಲಿ ನಿಂತು, ಅದರ ಕಿಟಕಿಯ ಮೂಲಕ ಒರಗಿಕೊಂಡು ಕೈಯಲ್ಲಿ ಪಿಸ್ತೂಲ್ ಹಿಡಿದಿರುವ ಅವರ ಖಡಕ್ ಶೈಲಿ ಪ್ರೇಕ್ಷಕರ ಕುತೂಹಲವನ್ನು ಇಮ್ಮಡಿಗೊಳಿಸಿದೆ.

ಈ ಚಿತ್ರವನ್ನು 'ಚಿತ್ತಾ' ಮತ್ತು 'ಸೇತುಪತಿ' ಯಂತಹ ಯಶಸ್ವಿ ಸಿನಿಮಾಗಳ ಮೂಲಕ ಗಮನ ಸೆಳೆದಿರುವ ನಿರ್ದೇಶಕ ಎಸ್ ಯು ಅರುಣ್ ಕುಮಾರ್ ನಿರ್ದೇಶಿಸುತ್ತಿದ್ದು, ಈ ಪ್ರತಿಭಾವಂತ ನಿರ್ದೇಶಕ ಹಾಗೂ ಕಮಲ್ ಹಾಸನ್ ಕಾಂಬಿನೇಷನ್ನಲ್ಲಿ ಮೂಡಿಬರುತ್ತಿರುವ ಮೊದಲ ಪ್ರಾಜೆಕ್ಟ್ ಇದಾಗಿದೆ. ಚಿತ್ರಕ್ಕೆ ಬಲಿಷ್ಠ ತಾಂತ್ರಿಕ ಬಳಗದ ಬೆಂಬಲವಿದ್ದು, ಸಂಗೀತ ಮಾಂತ್ರಿಕ ಅನಿರುದ್ಧ್ ರವಿಚಂದರ್ ಸಂಗೀತ ಸಂಯೋಜಿಸುತ್ತಿದ್ದಾರೆ. ಭಾರತೀಯ ಚಿತ್ರರಂಗದ ಹೆಸರಾಂತ ಸಾಹಸ ನಿರ್ದೇಶಕ ಜೋಡಿ ಅನ್ಬರಿವ್ ಆಯಕ್ಷನ್ ದೃಶ್ಯಗಳನ್ನು ವಿನ್ಯಾಸಗೊಳಿಸಲಿದೆ.

ಛಾಯಾಗ್ರಾಹಕರಾಗಿ ಸುನಿಲ್ ಕೆ.ಎಸ್, ಪ್ರೊಡಕ್ಷನ್ ಡಿಸೈನರ್ ಆಗಿ ಸಿ.ಎಸ್. ಬಾಲಚಂದರ್ ಮತ್ತು ವಸ್ತ್ರವಿನ್ಯಾಸಕಿಯಾಗಿ ಅಮೃತಾ ರಾಮ್ ಕಾರ್ಯನಿರ್ವಹಿಸುತ್ತಿದ್ದಾರೆ. ಕಮಲ್ ಹಾಸನ್ ಹಾಗೂ ಆರ್. ಮಹೇಂದ್ರನ್ ಜಂಟಿಯಾಗಿ ನಿರ್ಮಿಸುತ್ತಿರುವ ಈ ಬಹುನಿರೀಕ್ಷಿತ ಚಿತ್ರವನ್ನು ರಾಜ್ ಕಮಲ್ ಫಿಲ್ಮ್ಸ್ ಇಂಟರ್ನ್ಯಾಷನಲ್ ಹಾಗೂ ಟರ್ಮರಿಕ್ ಮೀಡಿಯಾ ಸಂಸ್ಥೆಗಳು ಪ್ರಸ್ತುತಪಡಿಸುತ್ತಿವೆ.



Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA,
No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper.udayavahini.in www.udayavahini.in Udaya vahini news Udaya vahini news
ಉದಯವಾಹಿನಿ ಪತ್ರಿಕೆ ಹೆಸರಿನಲ್ಲಿ ಯಾರಾದರೂ ಬ್ಲ್ಯಾಕ್‌ಮೇಲ್ ಮಾಡಿದರೆ ಅಥವಾ ಹೆಸರು ದುರ್ಬಳಕೆ ಮಾಡಿಕೊಳ್ಳುತ್ತಿದ್ದರೆ ಕೂಡಲೇ ಈ ನಂಬರ್‌ಗೆ ಕರೆ ಮಾಡಿ: 9448225966